# ಅಧ್ಯಾಯ 10

# ಕ್ರಿಸ್ತನ ಶ್ರೇಷ್ಠವಾದ ಯಜ್ಞ ಮತ್ತು ದೇವರ ಬಳಿಗೆ ಮಾರ್ಗ

## ಕ್ರಿಸ್ತನ ಯಜ್ಞದ ಶ್ರೇಷ್ಠತೆ (10:1-18)

ಈ 10:1-18 ವಚನಗಳು, "ಕ್ರಿಸ್ತನ ಮಹಾಯಾಜಕತ್ವ (4:14-10:18)" ಎಂಬುದರ ಪ್ರಮುಖ ವಿಭಾಗವನ್ನು ಮುಕ್ತಾಯಗೊಳಿಸುತ್ತದೆ. ನಮ್ಮ ರಕ್ಷಕನು ಮಾಹಾಯಾಜಕತ್ವಕ್ಕೆ ಸಕಲ ಅರ್ಹತೆಯನ್ನು ಹೊಂದಿದ್ದನು ಮತ್ತು ಆರೋನ ಹಾಗೂ ಹಳೆಯ ಒಡಂಬಡಿಕೆಯ ಯಾವದೇ ಯಾಜಕನಿಗಿಂತಲೂ ಶ್ರೇಷ್ಠನಾಗಿದ್ದನು.

### ಯಜ್ಞಗಳ ಸ್ಥಳ (10:1-10)

ಹಳೆಯ ಒಡಂಬಡಿಕೆಯಡಿಯಲ್ಲಿನ ಪ್ರಾಣಿ ಯಜ್ಞಗಳ ಸಾಕಾಗದ ಸ್ವಭಾವವು 10:1-10ರಲ್ಲಿ ಒತ್ತಿ ಹೇಳಲ್ಪಟ್ಟಿದೆ. ಈ ಯೋಚನೆಯು 1ರಿಂದ 4 ವಚನಗಳಲ್ಲಿ ಪುನರಾವರ್ತಿಸಲ್ಪಡುವ ಮೂಲಕ, 5ರಿಂದ 9 ವಚನಗಳಲ್ಲಿ ನೇರವಾದ ಶಾಸ್ತ್ರಾಧಾರಿತ ಹೇಳಿಕೆ ಮೂಲಕ, ಮತ್ತು 9 ಹಾಗೂ 10ರಲ್ಲಿ ತೋರ್ಪಡಿಸಲ್ಪಟ್ಟಿರುತ್ತದೆ. ಈ ಅಧ್ಯಾಯದ ಬುದ್ಧಿವಾದವು ಹಳೆಯ ಛಾಯೆಯನ್ನು ಮರೆತು ಬಿಟ್ಟು ನಿಜ ಸಂಗತಿಯೊಂದಿಗೆ ಆರಾಧಿಸಬೇಕು ಎಂಬದೆ. ಹಾಗಾದರೆ, ಹಳೆಯ ಒಡಂಬಡಿಕೆಯ ಯಜ್ಞಗಳನ್ನು ನಾವು ಹೇಗೆ ಕಾಣಬೇಕಾಗಿರುತ್ತದೆ?

ಅವುಗಳು ಒಂದು ಛಾಯೆಯಾಗಿದ್ದವು (10:1, 2)

**[1]ಧರ್ಮಶಾಸ್ತ್ರದಲ್ಲಿ ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯೇ ಹೊರತು ಅವುಗಳ ನಿಜಸ್ವರೂಪವಲ್ಲವಾದದರಿಂದ ಆ ಧರ್ಮಶಾಸ್ತ್ರವು ವರುಷ ವರುಷಕ್ಕೆ ಪದೇ ಪದೇ ಅರ್ಪಿತವಾಗುವ ಒಂದೇ ವಿಧವಾದ ಯಜ್ಞಗಳನ್ನು ಅರ್ಪಿಸಿ ದೇವರ ಸಮೀಪಕ್ಕೆ ಬರುವವರನ್ನು ಎಂದಿಗೂ ಸಿದ್ಧಿಗೆ ತರಲಾರದು. [2]ತಂದಿದ್ದ ಪಕ್ಷದಲ್ಲಿ ಆ ಯಜ್ಞ ಸಮರ್ಪಣೆಯು ನಿಂತುಹೋಗುತ್ತಿತ್ತಲ್ಲಾ. ಯಾಕೆಂದರೆ ದೇವಾರಾಧನೆ ಮಾಡುವವರು ಒಂದೇ ಸಾರಿ ಶುದ್ಧೀಕರಿಸಲ್ಪಟ್ಟ ಮೇಲೆ ಅವರಿಗೆ ಪಾಪವುಂಟೆಂದು ಅವರ ಮನಸ್ಸು ಇನ್ನೂ ಸಾಕ್ಷಿಕೊಡುವದು ಹೇಗೆ?**

**ವಚನ 1.** ಲೇಖಕನು **ಧರ್ಮಶಾಸ್ತ್ರವನ್ನು ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆ** (σκιά, *skia*) ಎಂದು ಕರೆದನು. ನಮ್ಮ ವಾಕ್ಯಭಾಗವು "ಪ್ರಾಣಿಗಳ ಯಜ್ಞಗಳ ಕುರಿತ ಕಡೇ ಮಾತಾಗಿರುತ್ತದೆ."[1] **ಆದ್ದರಿಂದ** ಎಂಬ ಪದವು 8:1ರಲ್ಲಿ ಆರಂಭವಾದ ತರ್ಕದಿಂದ ಒಂದು

ಮುಕ್ತಾಯಕ್ಕೆ ಬರಲಾಗಿದೆ ಎಂಬುದನ್ನು ಸೂಚಿಸುತ್ತದೆ.[2] ಈಗ ನಮಗೆ ಒಂದು ಉತ್ತಮವಾದ ಒಡಂಬಡಿಕೆ, ಒಂದು ಉತ್ತಮವಾದ ಯಜ್ಞ, ಮತ್ತು ಒಂದು ಉತ್ತಮವಾದ ಆಲಯವು ಇರುತ್ತವೆ. ಇಲ್ಲಿಂದ ಆರಂಭಗೊಂಡು, ಅರ್ಥವೇನಾಗಿರುತ್ತದೆಂಬುದರ ಬಗ್ಗೆ ಇನ್ನಷ್ಟು ವಿಸ್ತಾರವಾದ ವಿವರಣೆಗಳನ್ನು ಕಾಣುತ್ತೇವೆ.

ಒಂದು "ಛಾಯೆ" ಯು ಕ್ರಿಸ್ತನ ರಾಜ್ಯದಲ್ಲಿನ ಹೊಸ ಒಡಂಬಡಿಕೆಯ ಶ್ರೇಷ್ಠ ಪ್ರಯೋಜನಗಳನ್ನು ಹೊಂದಿರುವದರ ಒಂದು ಹಳೆಯ ಒಡಂಬಡಿಕೆಯ ಭಾವನೆ ಎಂದಷ್ಟೇ ಅರ್ಥವಾಗಿರುತ್ತದೆ. ಈ ಪದವು "ಛಾಯೆ" ಮತ್ತು "ಪೂರ್ವಛಾಯೆ"[3] ಎರಡೂ ರೀತಿಯಲ್ಲೂ ಬಳಸಲ್ಪಟ್ಟಿದೆ. ಹಳೆಯ **ಯಜ್ಞಗಳು** ಮುಂದೆ ಕ್ರಿಸ್ತನಲ್ಲಿ ಬರಬೇಕಾಗಿದ್ದ ಕಾರ್ಯಗಳಿಗೆ *ಮಾದರಿ* (ಸಾಂಕೇತಿಕ) ಆಗಿದ್ದವುಗಳನ್ನು ಸೂಚಿಸುವಂತಹ ಒಂದು ಪೂರ್ವಛಾಯೆಯಾಗಿದ್ದವು. (ಈ ಕಾರ್ಯಗಳು ದೇವಜನರಿಗೆ *ಸಹ ದೊರತಿರುತ್ತ*ವೆ; 9:11ರ ಮೇಲಿನ ಚರ್ಚೆಯನ್ನು ನೋಡಿರಿ.) "ಒಂದು ಛಾಯೆಯು . . . ಒಂದು ಸಾರಭೂತವಾ ವಾಸ್ತವಿಕತೆಯನ್ನು ಬಿಟ್ಟು ಅಸ್ತಿತ್ವದಲ್ಲಿರಲಾರದು."[4] ಒಬ್ಬನು ಸೇಬುಗಳನ್ನು ಮರದ ನೆರಳಿನಿಂದ ಕಿತ್ತುಕೊಳ್ಳುವದಿಲ್ಲ, ಆದರೆ ಸೇಬು ಹಣ್ಣಿನ ಮರದಿಂದ ಮಾತ್ರವೇ ನಿಜವಾದ ಸೇಬು ಕಿತ್ತುತ್ತಾನೆ. ಧರ್ಮಶಾಸ್ತ್ರಕ್ಕೆ ಹಿಂದಿರುಗುವದು "ಒಬ್ಬನು ನದಿಯೊಂದನ್ನು ಸೇತುವೆಯ ನೆರಳಿನ ಮೇಲೆ ನಡೆದು ದಾಟುವದಕ್ಕೆ ಪ್ರಯತ್ನ ಮಾಡುತ್ತಿರುವದರೊಂದಿಗೆ ಹೋಲಿಸಬಹುದಾಗಿದೆ . . ."[5] "ಛಾಯೆ" ಯು ನಮಗೆ ಬಹಳವಾಗಿ ಅಗತ್ಯವಿರುವ ಮತ್ತು ನಾವು ಬಹಳವಾಗಿ ಬಯಸುವ ಸಂಗತಿಗಳನ್ನು – ಅಂದರೆ, ರಕ್ಷಣೆ ಮತ್ತು ಅದರ ನಿಶ್ಚಯತೆಯನ್ನು – ಉಂಟು ಮಾಡಲಾಗಲಿಲ್ಲ.

ನಂತರ, ಧರ್ಮಶಾಸ್ತ್ರವು **ಅವುಗಳ ನಿಜಸ್ವರೂಪ** ಹೊಂದಿರಲಿಲ್ಲ ಎಂದು ಲೇಖಕನು ಹೇಳಿದನು. "ಸ್ವರೂಪ" (εἰκών, *eikōn*), ಎಂಬುದು ಈ ವಚನದಲ್ಲಿ "ಪ್ರತಿರೂಪ" ಎಂಬ ಅರ್ಥವನ್ನು ಹೊಂದಿದ್ದು "ಛಾಯೆ" ಎಂಬ ಪದಕ್ಕಿಂತಲೂ ಎಷ್ಟೋ ವ್ಯತ್ಯಾಸವಾದ ಮತ್ತು ಉನ್ನತವಾದ ಸಂಗತಿಯೊಂದರ ಬಗ್ಗೆ ಮಾತಾಡುತ್ತದೆ. ಒಂದು "ಸ್ವರೂಪ" ವು ಸ್ವತಃ ವಾಸ್ತವಿಕದ ನಿಖರವಾದ ತದ್ರೂಪ, ಅದಕ್ಕೆ ಸಮಾನವಾದದ್ದು ಆಗಿರುತ್ತದೆ. ಪೌಲನು ಕೊಲೊಸ್ಸೆ 1:15ರಲ್ಲಿ ಕ್ರಿಸ್ತನನ್ನು ದೇವರ "ಪ್ರತಿರೂಪ" (*eikōn*) ಎಂದು ಸೂಕ್ತವಾಗಿಯೇ ಕರೆದನು. Phillips ತರ್ಜುಮೆಯು ಆ ವಚನವನ್ನು ಹೀಗೆ ಭಾವಾನುವಾದಗೊಳಿಸಿರುತ್ತದೆ, "ಈಗ ಕ್ರಿಸ್ತನು ಆ ಅದೃಶ್ಯನಾದ ದೇವರ ದೃಶ್ಯನಾದ ವ್ಯಕ್ತಪಡಿಸುವಿಕೆಯಾಗಿದ್ದಾನೆ . . ." *Eikōn* ಎಂಬ ಪದವು ಇಬ್ರಿಯರಿಗೆ ಪತ್ರಿಕೆಯೊಳಗೆ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಧರ್ಮಶಾಸ್ತ್ರವು ಆ ಗುಣವನ್ನು ಹೊಂದಿರಲಿಲ್ಲ, ಯಾಕೆಂದರೆ ಅದು ಕೇವಲ ಒಂದು "ಛಾಯೆ" ಆಗಿತ್ತು. ಒಂದು ಛಾಯೆಯು ಪದೇ ಪದೇ ಕಾಣಿಸಿಕೊಳ್ಳಬಹುದು, ಆದರೆ ಅದು ಎಂದಿಗೂ ನಿಜಸ್ವರೂಪ ಆಗಲಾರದು. ಇಲ್ಲಿ ಯೋಚನೆಯು ಒಬ್ಬ ಚಿತ್ರಕಲಾಗಾರನು ಒಂದು ಚಿತ್ರವನ್ನು ಬಿಡಿಸುವದಕ್ಕೆ ಆರಂಭಿಸುವ ಮುನ್ನ ಅದರ ಹೊರರೇಖೆಯನ್ನು ಬಿಡಿಸುವದಕ್ಕೆ ಸಮಾನವಾಗಿರುತ್ತದೆ.

ಲೇವಿಕವಾದ ಧಾರ್ಮಿಕ ಸಂಸ್ಕಾರಗಳು "ಛಾಯೆ" ಆಗಿದ್ದು ಕ್ರಿಸ್ತನ ಮಹಾಯಾಜಕತ್ವದ ಕೆಲಸದ ಒಂದು ಪ್ರಾಥಮಿಕ ಹೊರರೇಖೆಯಾಗಿತ್ತು, ಆ ಕ್ರಿಸ್ತನ ಕೆಲಸವಾದರೋ ಮುಕ್ತಾಯಗೊಳಿಸಲ್ಪಟ್ಟ ಮೇರುಕೃತಿ ಆಗಿತ್ತು. ಕೊಲೊಸ್ಸೆ 2:17ರಲ್ಲಿ ಧರ್ಮಶಾಸ್ತ್ರದ ವಿಷಯವಾಗಿ ಪೌಲನು ಅದೇ ರೀತಿಯ ಭಾಷೆಯನ್ನು ಬಳಸುತ್ತಾನೆ, ಅಲ್ಲಿ ಆತನು ಅದನ್ನು "ಮುಂದೆ ಬರಬೇಕಾಗಿದ್ದ ಕಾರ್ಯಗಳ *ಛಾಯೆ*" ಎಂದು ಕರೆದನು (ಒತ್ತಿ ಹೇಳಿದ್ದು ನನ್ನದು).

ಕ್ರಿಸ್ತನು ದೇವರ *eikōn*, ಅಥವಾ "ಪ್ರತಿರೂಪವೇ" ಆಗಿದ್ದಾನೆಂಬುದು 2 ಕೊರಿಂಥ 4:4ರಲ್ಲಿ ಸಹ ಸ್ಪಷ್ಟವಾಗುತ್ತದೆ. ಆತನು ತಂದೆಯ ಪರಿಪೂರ್ಣವಾದ ಸ್ವರೂಪವಾಗಿದ್ದಾನೆ, ಆ

ತಂದೆಯನ್ನು ನಾವು ನೋಡಲಾರೆವು. ಕ್ರಿಸ್ತನು ಹಳೆಯ ಒಡಂಬಡಿಕೆಗೆ ತದ್ವಿರುದ್ಧವಾಗಿ ನಮಗೆ ಪರಿಪೂರ್ಣವಾದ ಕ್ರಮವನ್ನು ಅನುಗ್ರಹಿಸುತ್ತಾನೆಂಬುದನ್ನು ನಮಗೆ ಈ ವಾಕ್ಯಭಾಗಗಳು ತೋರಿಸುತ್ತವೆ. ಕ್ರಿಸ್ತನಲ್ಲಿಯೇ ದೇವರ "ಸರ್ವಸಂಪೂರ್ಣತೆಯು" ಅವತರಿಸಿ ವಾಸಮಾಡುತ್ತದೆಂದು ಪೌಲನು ಹೇಳಿದನು (ಕೊಲೊಸ್ಸೆ 1:19; 2:9). ಈ ವಿಷಯದ ಕುರಿತು ಇಬ್ರಿಯರಿಗೆ ಪತ್ರಿಕೆಯಲ್ಲಿರುವ ಯೋಚನೆಗಳು ಖಂಡಿತವಾಗಿಯೂ ಪೌಲನ ಯೋಚನೆಗಳಂತೆಯೇ ಇರುತ್ತವೆ. ಇಬ್ರಿಯರಿಗೆ ಪುಸ್ತಕ ಮತ್ತು ಪೌಲನ ಬರಹಗಳು ಎರಡೂ ನಮ್ಮನ್ನು ಸಾರೂಪ್ಯವುಳ್ಳವರಾಗಬೇಕೆಂದು ಬೇಡಿಕೊಳ್ಳುತ್ತವೆ (ರೋಮಾ 8:29). ಎರಡನೆಯ ಕೊರಿಂಥ 3:18ನೇ ವಚನವು ಕ್ರಿಸ್ತನ ಅದೇ "ಪ್ರತಿರೂಪ" (*eikōn*) ರೀತಿಯಲ್ಲಿಯೇ ರೂಪಾಂತರಗೊಳ್ಳಬಹುದೆಂದು ಹೇಳುತ್ತದೆ. 1 ಕೊರಿಂಥ 15:49ರಲ್ಲಿ "ನಾವು ಮಣ್ಣಿನಿಂದ ಹುಟ್ಟಿದವನ ಸಾರೂಪ್ಯವನ್ನು [ಪ್ರತಿರೂಪ, *eikōn*] ಧರಿಸಿಕೊಂಡಿರುವ ಪ್ರಕಾರ ಪರಲೋಕದಿಂದ ಬಂದಾತನ ಸಾರೂಪ್ಯವನ್ನು [ಪ್ರತಿರೂಪ] ಧರಿಸಿಕೊಳ್ಳಬೇಕು" ಎಂದು ನಮಗೆ ಹೇಳಲಾಗಿರುತ್ತದೆ (ಒತ್ತಿ ಹೇಳಿದ್ದು ನನ್ನದು).

ನಾವು ***ಸಿದ್ಧಿಗೆ ತರಲ್ಪ***ಡಬಲ್ಲೆವು (τελειόω, *teleioō*); ನಾವು ಪರಿಪಕ್ವತೆಯನ್ನು ಸಾಧಿಸಬಲ್ಲೆವು, ಅಥವಾ "ಸಂಪೂರ್ಣತೆಯ ಸ್ಥಿತಿಗೆ ತರಲ್ಪಡಬಲ್ಲೆವು."[6] ಇಬ್ರಿಯ 9:9ನೇ ವಚನವು ನಮಗೆ ಹೀಗೆ ಹೇಳುತ್ತದೆ, "ಯಜ್ಞಗಳು ದೇವಾರಾಧನೆ ಮಾಡುವವರನ್ನು ಮನಸ್ಸಾಕ್ಷಿಯು ಒಪ್ಪುವಂತೆ ಸಿದ್ಧಿಗೆ ತರಲಾರದು." NIVಯು ಯಜ್ಞಗಳು "ಮನಸ್ಸಾಕ್ಷಿಯನ್ನು *ನಿಚ್ಚಳ* ಪಡಿಸುವದಕ್ಕೆ ಶಕ್ತವಲ್ಲ" ಎಂದು ಹೇಳುತ್ತದೆ. ಇಸ್ರಾಯೇಲ್ಯರ ಯಜ್ಞಗಳು ಸಮರ್ಪಿಸಲ್ಪಟ್ಟವು ಯಾಕೆಂದರೆ "'ದೇವಾರಾಧನೆ ಮಾಡುವವದಕ್ಕೆ' ಸಮೀಪಿಸುವವರ *ಮನಸ್ಸಾಕ್ಷಿಯಲ್ಲಿ* ಈಗಲೂ ಅನುಭವ ಮಾಡಿದ ಪಾಪದ ಅಪರಾಧಭಾವನೆ ಮತ್ತು ವಾಸ್ತವತೆಯನ್ನು ತೆಗೆದು *ನಿಜವಾಗಿಯೂ* ಹಾಕುವಂಥದ್ದು" ಇರಲಿಲ್ಲ.[7] **ದೇವರ ಸಮೀಪ ಬರುವವರು**, ಅಥವಾ ಆರಾಧನೆಯಲ್ಲಿ "ಸಮೀಪಿಸುವವರು" ಪಾಪದ ಪರಿಹಾರವನ್ನು ಹೊಂದಿಕೊಂಡಿರುವವರು ಮಾತ್ರವೇ ಆಗಿದ್ದರು. ಹಳೆಯ ಒಡಂಬಡಿಕೆಯ ಮೂಲಕ ನೀತಿಯನ್ನು ಹುಡುಕುವ ಯಾವನೂ ಅದನ್ನು ಸಂಪಾದಿಸಿಕೊಳ್ಳಲಾಗಲಿಲ್ಲ. ಆದುದರಿಂದ, ಧರ್ಮಶಾಸ್ತ್ರದಡಿಯಲ್ಲಿ ಯಾವನೂ ಆರಾಧನೆಯಲ್ಲಿ ನಿಜವಾಗಿಯೂ ದೇವರನ್ನು ಸಮೀಪಿಸುವದಕ್ಕೆ ಶಕ್ತನಾಗಲಿಲ್ಲ. ಮೋಶೆಯ ಧರ್ಮಶಾಸ್ತ್ರವು ಒಬ್ಬನನ್ನು ನಿಜವಾಗಿಯೂ ದೇವರ ಸಮೀಪಕ್ಕೆ ತರುವದಕ್ಕಾಗಲಿಲ್ಲ ಎಂದು ಇಬ್ರಿಯ 7:19 ನಮಗೆ ತಿಳಿಸುತ್ತದೆ ("ಧರ್ಮಶಾಸ್ತ್ರವು ಯಾವದನ್ನೂ ಸಿದ್ಧಿಗೆ ತಾರದೆ ಇರುವದರಿಂದ"). ಕ್ರಿಸ್ತನಲ್ಲಿನ ಹೊಸ ಒಡಂಬಡಿಕೆಯ ಅಡಿಯಲ್ಲಿ ಮಾತ್ರವೇ ವಿಶ್ವಾಸಿಯ "ಪರಿಪೂರ್ಣತೆ" ಯು (ಸಿದ್ಧಿಯು) ದೇವರ ಸಮೀಪಕ್ಕೆ ಬರುವಂತೆ ಆತನಿಗೆ ಸಾಧ್ಯಗೊಳಿಸುತ್ತದೆ. ಈ ಪರಿಪಕ್ವತೆಯಲ್ಲಿ ಯೇಸುವಿನ ಸಾರೂಪ್ಯವುಳ್ಳವರಾಗುವದಕ್ಕೆ ನಿರಂತರವಾಗಿ ಬೆಳೆಯುವದು, ಪರಿಶುದ್ಧತೆಯನ್ನು "ಪರಿಪೂರ್ಣ"ಗೊಳಿಸಿಕೊಳ್ಳುವದು ಸೇರಿರುತ್ತದೆ (2 ಕೊರಿಂಥ 6:17-7:1).

1ನೇ ವಚನದಲ್ಲಿ ಪ್ರಸ್ತಾಪಿಸಲಾಗಿರುವ "ಮೇಲುಗಳು" ಯಾವವು? ಇವುಗಳು ಉತ್ತಮವಾದ ನಿರೀಕ್ಷೆ, ಉತ್ತಮವಾದ ಯಜ್ಞ, ನಿತ್ಯವಿಮೋಚನೆ, ಮತ್ತು ನಮ್ಮ ಉತ್ತಮನಾದ ಮಹಾಯಾಜಕನಿಂದ ಒದಗಿಸಲ್ಪಟ್ಟ ರಕ್ಷಣೆ ಸೇರಿರತಕ್ಕದ್ದು, ಇವುಗಳೆಲ್ಲಾ ಹೊಸ ಹಾಗೂ ಉತ್ತಮವಾದ ಒಡಂಬಡಿಕೆಯ ಮೂಲಕವೇ ಆಗಿವೆ. ಇದರಲ್ಲಿ ಪಾಪದ ವಾಸ್ತವಾಂಶ ಹಾಗೂ ಅಪರಾಧದಿಂದ ಮನಸ್ಸನ್ನು ಶುದ್ಧಮಾಡುವಿಕೆ, ದೇವರ ಬಳಿಗೆ ಹೋಗಲು ದಾರಿ, ಮತ್ತು ಸ್ವತಃ ಪರಲೋಕವನ್ನು ಅಂತಿಮವಾಗಿ ಸಂಪಾದಿಸಿಕೊಳ್ಳುವದು (ಅಥವಾ ನಿವಾಸ ಮಾಡುವದು)

ಸೇರಿರುತ್ತವೆ. ಸರಳವಾಗಿ ಹೇಳುವದಾದರೆ, "*ಮುಂದೆ ಬರಬೇಕಾಗಿದ್ದ ಮೇಲುಗಳು* ಸ್ಪಷ್ಟವಾಗಿ ಅದರ ಆತ್ಮೀಕ ಮಹಾಯಾಜಕತ್ವದೊಂದಿಗೆ ಸುವಾರ್ತೆಯೇ ಆಗಿರುತ್ತದೆ."[8]

**ವಚನ 2.** ಯಜ್ಞಗಳನ್ನು ಅರ್ಪಿಸುತ್ತಲೇ ಇರಬೇಕೆಂಬ ಇಚ್ಛೆಯನ್ನು ಉಂಟು ಮಾಡಿದ್ದು **ಪಾಪವುಂಟೆಂದು ಮನಸ್ಸು ಸಾಕ್ಷಿ** ಹೇಳುತ್ತಿದ್ದದ್ದೇ (ಬಹುಶಃ ಯೆಹೂದಿ ಕ್ರೈಸ್ತರಲ್ಲಿ ಸಹ) ಆಗಿರಬಹುದಾಗಿದೆ. ಈ ವಚನದಿಂದ ಸಹಜವಾಗಿ ಬರಬಹುದಾದ ಮುಕ್ತಾಯವೇನೆಂದರೆ ದೇವಾಲಯವೂ ಇನ್ನೂ ನಿಂತಿತ್ತು ಮತ್ತು ಯಜ್ಞಗಳನ್ನು ಇನ್ನೂ ಅರ್ಪಿಸಲಾಗುತ್ತಿತ್ತು ಎಂಬದೆ. ಜನರು ತಾತ್ಕಾಲಿಕವಾಗಿ ಕ್ಷಮಿಸಲ್ಪಡುವಂತಾಗಬೇಕೆಂದು ದೇವರು ನಿಯತಕ್ರಮವಾಗಿ ಯಜ್ಞಗಳನ್ನು ಅರ್ಪಿಸುವದನ್ನು ಹಳೆಯ ಒಡಂಬಡಿಕೆಯ ಅಡಿಯಲ್ಲಿ ಅಗತ್ಯಗೊಳಿಸಿದ್ದನು. ಹೃದಯದಲ್ಲಿ ಪಾಪವು ಇರುವಿಕೆಯು ದೇವರೊಂದಿಗೆ ಸಹವಾಸವಿಟ್ಟುಕೊಳ್ಳದಂತೆ ದೂರವಿರಿಸುತ್ತದೆ. ಹೊಸ ಒಡಂಬಡಿಕೆಯಲ್ಲಿ ಸೂಚಿಸಲ್ಪಟ್ಟಿರುವ ಶುದ್ಧೀಕರಣ ವಿಧವು ಒಬ್ಬನನ್ನು ಹಿಂದಿನ *ಎಲ್ಲಾ* ಪಾಪಗಳನ್ನು ಶುದ್ಧ ಮಾಡುವಂಥದ್ದು. ನಿಜವಾದ ಕ್ಷಮಾಪಣೆಗೆ ಕ್ರಿಸ್ತನ ನಂಬಿಕೆಯಿಂದ ಒದಗಿಸಲ್ಪಡುವ ಆರಂಭಿಕ ಶುದ್ಧತೆಯನ್ನು ಪದೇ ಪದೇ ಅಗತ್ಯ ಬೀಳುವದಿಲ್ಲ. ಹಳೆಯ ಒಡಂಬಡಿಕೆಯಡಿಯಲ್ಲಿ, ಎಷ್ಟೇ ಯಜ್ಞಗಳನ್ನು ಸಮರ್ಪಿಸಿದಾಗ್ಯೂ ಅದು ಛಾಯೆಯನ್ನು ನಿಜಸ್ವರೂಪವನ್ನಾಗಿ ಮಾರ್ಪಡಿಸುವದಾಗಿರಲಿಲ್ಲ. ಶುದ್ಧೀಕರಣದ ಕುರಿತ ಈ ಉನ್ನತವಾದ ದೃಷ್ಟಿಕೋನವು ಲೇವಿಕ ಧರ್ಮಶಾಸ್ತ್ರದಲ್ಲಿ ಅಪರಿಚಿತವಾಗಿತ್ತು.

**ಶುದ್ಧೀಕರಿಸಲ್ಪಟ್ಟ** (καθαρίζω, *katharizō*) ಎಂಬ ಪದವು ಸಂಪೂರ್ಣವಾಚಿ ಕಾಲರೂಪದಲ್ಲಿದ್ದು ವರ್ತಮಾನಕಾಲದಲ್ಲಿ ಮುಂದುವರೆಯುವ ಫಲಿತವಿರುವಂಥ ಹಿಂದೆ ಪೂರ್ಣಗೊಂಡ ಕ್ರಿಯೆಯನ್ನು ಸೂಚಿಸುವದಾಗಿದೆ. ನಮಗೆ ಹಿಂದಿನ ಪಾಪಗಳ ಪ್ರಜ್ಞೆ ಅಥವಾ ಮನಸ್ಸಾಕ್ಷಿಯು ಅಗತ್ಯವಿಲ್ಲ ಯಾಕೆಂದರೆ ಅದು ಇನ್ನು ಮೇಲೆ ನಮ್ಮ ಜೀವಿತಗಳಲ್ಲಿ ಇರುವದೇ ಇಲ್ಲ! ಒಬ್ಬ ರೋಗಿಗೆ ಪುನಃ ಪುನಃ ಔಷದವು ಕೊಡಲ್ಪಡುವದು ಅವಶ್ಯವೆಂದಾದರೆ, ಔಷದವು ಆತನನ್ನು ಗುಣಪಡಿಸಲಿಲ್ಲ ಎಂದು ಸ್ಪಷ್ಟವಾಗುತ್ತದೆ. ವ್ಯಾಧಿಯು ರೋಗಿಗೆ ಇನ್ನಷ್ಟು ಹಾನಿಯನ್ನು ಮಾಡದಂತೆ ಅದನ್ನು ತಡೆದು ನಿಲ್ಲಿಸಬಹುದು, ಆದರೆ ಇದು ಸಂಪೂರ್ಣ ಸ್ವಸ್ಥತೆಯಾಗುವದಿಲ್ಲ. ಒಮ್ಮೆ ಕ್ಷಮಿಸಲ್ಪಟ್ಟ ಮೇಲೆ, ಒಬ್ಬ ವ್ಯಕ್ತಿಯು ಪೌಲನ ರೀತಿಯಲ್ಲಿ ತನ್ನ ಪಾಪವು ಎಷ್ಟು ಬೃಹತ್ ಪ್ರಮಾಣದಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಬಹುದು, ಆದಾಗ್ಯೂ ದಂಡನೆಯನ್ನು ನೆನೆದು ಹೆದರಿ ಕಳವಳಗೊಳ್ಳಬೇಕಾಗಿಲ್ಲ, ತಾನು ಕ್ರಿಸ್ತನಲ್ಲಿ ಪೂರ್ಣವಾಗಿ ಕ್ಷಮಿಸಲ್ಪಟ್ಟಿದ್ದೇನೆಂದು ತಿಳಿದಿರುವನು. ಅದಕ್ಕೆ ತದ್ವಿರುದ್ಧವಾಗಿ, ತನ್ನ ಪಾಪದ ವಿಷಯದಲ್ಲಿ ನಿರಂತರವಾಗಿ **ದೇವಾರಾಧನೆ ಮಾಡುವವನನ್ನು** ಮುಜುಗರಕ್ಕೀಡು ಮಾಡುವಂತೆ ಧರ್ಮಶಾಸ್ತ್ರವು ರೂಪಿಸಲ್ಪಟ್ಟಿತ್ತು. "ದೇವಾರಾಧನೆ ಮಾಡುವವನು" ಎಂಬುದಕ್ಕಿರುವ ಪದವು λατρεύω (*latreuō*), ಇದು 9:6ರಲ್ಲಿ "ದೇವಾರಾಧನೆ" (λατρείας, *latreias*, "ಯಾಜಕ ಸೇವೆ")[9] ಎಂಬ ಪದಕ್ಕೆ ಬಳಸಲ್ಪಟ್ಟಿರುವ ಪದದ ಒಂದು ರೂಪವಾಗಿದೆ. ಪ್ರತಿಯೊಬ್ಬ ಕ್ರೈಸ್ತನು ಈಗ ಒಬ್ಬ ಯಾಜಕನಾಗಿದ್ದಾನೆ (1 ಪೇತ್ರ 2:5, 9).

ಅವುಗಳು ಒಂದು ಜ್ಞಾಪಕವಾಗಿದ್ದವು (10:3, 4)

**[3]ಆದರೆ ಈ ಯಜ್ಞಗಳಿಂದ ಪ್ರತಿವರುಷದಲ್ಲಿಯೂ ಪಾಪಗಳ ಜ್ಞಾಪಕವಾಗುವದುಂಟು; [4]ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿದೆಯಲ್ಲಾ.**

**ವಚನ 3.** ಅಷ್ಟುಮಾತ್ರವಲ್ಲದೆ, **ಆ ಯಜ್ಞಗಳಿಂದ ಪಾಪಗಳ ಜ್ಞಾಪಕವಾಗುವದುಂಟು** ಎಂದು ಲೇಖಕನು ಹೇಳಿದನು. ಯೆಹೂದಿ ಕ್ರೈಸ್ತರು ಹಳೆಯ ಒಡಂಬಡಿಕೆಯ ಯಜ್ಞಗಳ ವ್ಯವಸ್ಥೆಯು

ನಿರರ್ಥಕವಾದದ್ದೆಂಬುದನ್ನು ತಿಳಿದುಕೊಳ್ಳಬೇಕಿತ್ತು.

ಪಾಪಗಳ ವಾರ್ಷಿಕ ಜ್ಞಾಪಕವು ಯಜ್ಞಗಳನ್ನೊಳಗೊಂಡಿರುತ್ತಿದ್ದ ದೋಷಪರಿಹಾರಕ ದಿನ (Yom Kippur) ಬರುತ್ತಿತ್ತು. ಆ ದಿನ ಸಮರ್ಪಿಸಲಾಗುತ್ತಿದ್ದ ಪ್ರತಿಯೊಂದು ಯಜ್ಞವು ಇಸ್ರಾಯೇಲ್ಯರ ಆಜೀವ ಪಾಪದ ಅಪರಾಧವನ್ನು ಒಪ್ಪಿಕೊಳ್ಳುವಿಕೆಯಾಗಿರುತ್ತಿತ್ತು. ದೋಷಪರಿಹಾರಕ ದಿನವು "ಮಾನವ ಆತ್ಮಕ್ಕೆ ಒಂದು ಭಾರವಾದ ದೊಡ್ಡ ಸುತ್ತಿಗೆಯಂತಿತ್ತು, ವರ್ಷದಿಂದ ವರ್ಷಕ್ಕೆ ಪಾಪದ ವಿಷಯದಲ್ಲಿ ನಿರಂತರವಾಗಿ ಬಲವಾಗಿ ಪೆಟ್ಟು ಕೊಡುತ್ತಲೇ ಇತ್ತು."[10] ಈ ದಿನದಂದು ಸಮರ್ಪಿಸುತ್ತಿದ್ದ ಯಜ್ಞಗಳು ಒಟ್ಟಾರೆಯಾದ ಪಾಪಗಳಿಗಾಗಿ ಮಾತ್ರವೇ ಅಲ್ಲ, ಆದರೆ ಹಿಂದಿನ **ವರುಷ** ಯಜ್ಞಗಳನ್ನು ಅರ್ಪಿಸಿದ ಎಲ್ಲಾ ಪಾಪಗಳಿಗಾಗಿ ಸಹ ಆಗಿರುತ್ತಿತ್ತು. ಇತರ ಪಾಪಪರಿಹಾರಕ ಯಜ್ಞಗಳು – ಉದಾಹರಣೆಗೆ, ಅಜ್ಞಾನದಲ್ಲಿ ಮಾಡಿದ ಪಾಪಗಳು (ಅರಣ್ಯಕಾಂಡ 15:27, 28) – ದಿನಾಲೂ, ಪ್ರತಿ ವಾರ, ಮತ್ತು ಪ್ರತಿ ತಿಂಗಳು ಮಾಡಲ್ಪಡುತ್ತಿದ್ದವು. ತತ್ಪರಿಣಾಮವಾಗಿ, ದೋಷಪರಿಹಾರಕ ದಿನದ ಸಮರ್ಪಣೆಯು ಮಿಕ್ಕ ಎಲ್ಲವುಗಳನ್ನು ಒಳಗೊಂಡಿರುತ್ತಿತ್ತು ಮತ್ತು ಹಳೆಯ ಒಡಂಬಡಿಕೆಯ ಎಲ್ಲಾ ಯಜ್ಞಗಳ ಸಂಪೂರ್ಣ ಸಾಕಾದಿರುವಿಕೆಯನ್ನು ತೋರಿಸಿ ಕೊಟ್ಟವು. "ಎಷ್ಟು ಪುನರಾವರ್ತಿಸಿದಾಗ್ಯೂ ಅದು ಛಾಯೆಯನ್ನು ನಿಜಸ್ವರೂಪವಾಗಿ ಮಾರ್ಪಡಿಸುವದಿಲ್ಲ."[11] ಪುನರಾವರ್ತನೆಯು ಯೆಹೂದ್ಯರಿಗೆ ಅವರ ಕೊರತೆಗಳನ್ನು ಮತ್ತು ಹಳೆಯ ಒಡಂಬಡಿಕೆಯ ದುರ್ಬಲತೆಯನ್ನು ಜ್ಞಾಪಿಸುವದಾಗಿತ್ತು. ನಿಸ್ಸಂಶಯವಾಗಿ, ಸರಾಸರಿ ಯೆಹೂದ್ಯನು Yom Kippur ಪಾಪಗಳ "ಜ್ಞಾಪಕದ" ದಿನವಲ್ಲ, ಆದರೆ ಪಾಪಗಳನ್ನು "ನಿವಾರಿಸುವ" ದಿನವೆಂದು ವಾದ ಮಾಡಿರಬಹುದಾಗಿದೆ. ಅವರೊಳಗೆ ಆಳವಾಗಿ ಯೋಚಿಸುವವರು ನಿಶ್ಚಯವಾಗಿಯೂ ಅದರ ಉದ್ದೇಶವೇನೆಂಬುದನ್ನು ಅರಿತುಕೊಂಡಿದ್ದರು: "ಪಾಪದ ಗಂಭೀರತೆಯನ್ನು, ದೇವರ ನೀತಿಯ ವಾಸ್ತವಿಕತೆಯನ್ನು, ಮತ್ತು ಪಾಪಪ್ರಾಯಶ್ಚಿತ್ತದ ಅವಶ್ಯಕತೆಯನ್ನು ತೋರಿಸುವದು."[12] ಹೇಗೂ, ಹೊಸ ಒಡಂಬಡಿಕೆಯು ಮಾತ್ರವೇ (ಯೆರೆಮೀಯ 31:31-34ರಲ್ಲಿ ವಾಗ್ದಾನ ಮಾಡಲ್ಪಟ್ಟಿರುವ ಪ್ರಕಾರ) ಇನ್ನು ಮೇಲೆ ದೇವರು ಪಾಪಗಳನ್ನು ನೆನಪಿಗೆ ತಂದುಕೊಳ್ಳದಂತೆ ಮಾಡಬಹುದಾಗಿತ್ತು. ಕ್ರಿಸ್ತನಲ್ಲಿ ನಾವು ಈಗಲೂ ಪಾಪದ ಜ್ಞಾಪಕವನ್ನು ಹೊಂದಿರತಕ್ಕದ್ದು; ಆದರೆ ಕರ್ತನ ಭೋಜನವನ್ನು ಸಂತೋಷದಿಂದ ಆಚರಿಸುದರಲ್ಲಿ, ನಾವು ಕರ್ತನ ಮರಣದ ಮೂಲಕ ಸಿಕ್ಕಿರುವ ಕ್ಷಮಾಪಣೆಯನ್ನು ಸಹ ಜ್ಞಾಪಿಸಿಕೊಳ್ಳಬಲ್ಲೆವು (1 ಕೊರಿಂಥ 11:24-26). ಆ ಜ್ಞಾಪಕವು ಇಲ್ಲದೆ ಹೋದರೆ ನಮ್ಮ ನಂಬಿಕೆಯು ಬಲಿಷ್ಠವಾಗಿರುವದಕ್ಕೆ ಸಾಧ್ಯವಿಲ್ಲ.

ನಮ್ಮ ಪಾಪಗಳನ್ನು ದೇವರಿಗೆ ಅರಿಕೆ ಮಾಡುವದು ಧರ್ಮಶಾಸ್ತ್ರಕ್ಕೆ ನಂಬಿಗಸ್ತರಾಗಿರುವದಕ್ಕೆ ಪ್ರಯತ್ನಿಸಿದ ಯೆಹೂದ್ಯರ ಮೇಲೆ ಉಪದ್ರವಗಳಂತೆ ಬಾಧಿಸುತ್ತಿದ್ದ ಪಾಪದ ಜಡ್ಡಿನಲ್ಲಿಯೇ ನೆಲೆಯಾಗಿರುವದಕ್ಕಿಂತಲೂ ಎಷ್ಟೋ ವ್ಯತ್ಯಾಸವಾದದ್ದು. ಹೊಸ ಒಡಂಬಡಿಕೆಯು ಏನನ್ನು ಅನುಗ್ರಹಿಸುತ್ತದೋ ಅದನ್ನೇ ದಾವೀದನು ಬಯಸಿದ್ದವನಾಗಿ ಹೀಗೆ ಪ್ರಾರ್ಥಿಸಿದನು, "ದೇವರೇ, ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು; ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನಪಡಿಸು. ನಿನಗೆ ಯಜ್ಞಗಳಲ್ಲಿ ಅಪೇಕ್ಷೆಯಿಲ್ಲ, ಇದ್ದರೆ ಸಮರ್ಪಿಸೇನು; ಸರ್ವಾಂಗಹೋಮಗಳಲ್ಲಿ ನಿನಗೆ ಸಂತೋಷವಿಲ್ಲ" (ಕೀರ್ತನೆ 51:10, 16). ಶುದ್ಧಹೃದಯವಿಲ್ಲದೆ ಹೋದರೆ ಆತನ ಯಜ್ಞಗಳ ಸಮರ್ಪಣೆಯು ನಿಷ್ಪ್ರಯೋಜಕವೆಂದು ಆತನಿಗೆ ಗೊತ್ತಿತ್ತು. ದೇವರು ತಾತ್ಕಾಲಿಕವಾದ ಪ್ರಾಣಿಗಳ ಯಜ್ಞಗಳಿಂದ ಸಂತೋಷ ಪಡಲಿಲ್ಲ. ಆದಿಯಿಂದಲೂ ಆತನಿಗೆ ಒಂದು ಉತ್ತಮವಾದ ಯಜ್ಞವು ಅವಶ್ಯಕವಾಗಿದೆ ಎಂದು ಗೊತ್ತಿತ್ತು (1 ಪೇತ್ರ 1:18, 19). ಬದಲಾವಣೆಯು ಮಾಡಲ್ಪಡಬಹುದೆಂಬುದು ಶೀಘ್ರವಾಗಿ

ಅಂಗೀಕರಿಸಿಕೊಳ್ಳುವಿಕೆ ಮತ್ತು "ಕ್ರಿ.ಶ. 70ರಲ್ಲಿ ದೇವಾಲಯದ ನಾಶನದ ಬಳಿಕೆ ಪಿಲಿಷ್ಟಿಯದ ಸಭಾಮಂದಿರವನ್ನು ಹೊಸ ಸ್ಥಿತಿಗತಿಗಳಿಗನುವಾಗಿ ಅಳವಡಿಸಿಕೊಂಡದ್ದರಲ್ಲಿ" ಯೆಹೂದಿ ನಾಯಕರಿಗೆ ಸಹ ಸ್ಪಷ್ಟಗೊಂಡಿರಬಹುದಾಗಿದೆ.[13] ಪ್ರಾಣಿಗಳ ಯಜ್ಞಗಳು ಪಾಪವನ್ನು ನಿವಾರಿಸಲಾಗಲಿಲ್ಲ (ವ. 4). ಅವುಗಳು ಕ್ರಿಸ್ತನಿಗೆ ಮುನ್‌ಛಾಯೆಗಳಷ್ಟೇ ಆಗಿದ್ದವು. ಇಬ್ರಿಯರಿಗೆ ಪತ್ರಿಕೆಯ ಆ ಆದಿಯ ವಾಚಕರು ಮೆಸ್ಸೀಯನಿಗೆ ನಂಬಿಗಸ್ತರಾಗಿಬೇಕೆಂದರೆ ಬದಲಾವಣೆಯನ್ನು ಅಂಗೀಕರಿಸಿಕೊಳ್ಳಬೇಕಿತ್ತು.

**ವಚನ 4.** ಕ್ರಿಸ್ತನನ್ನು ತಿರಸ್ಕರಿಸುವ ಮೂಲಕ ಯೆ ಹೂದ್ಯರು ಪಾಪದ ವಿಷಯದಲ್ಲಿ ಬೈಬಲನುಗುಣವಾಗಿ ಯಾವ ಕ್ರಮ ಕೈಗೊಳ್ಳಬೇಕೆಂಬುದನ್ನು ನಿರ್ಧರಿಸಲು ಪ್ರಯತ್ನಿಸುವದರಲ್ಲಿ ಇಂದು ತಮಗೋಸ್ಕರ ಸಮಸ್ಯೆಯೊಂದನ್ನು ಸೃಷ್ಟಿಸಿಕೊಳ್ಳುತ್ತಾರೆ. ನಿಶ್ಚಯವಾಗಿಯೂ, ಅನೇಕರು ಪ್ರಾಣಿಗಳ **ರಕ್ತದಿಂದ ಪಾಪಪರಿಹಾರವಾಗುವದು** [ἀφαιρέω, *aphaireō*] **ಅಸಾಧ್ಯವಾಗಿದೆ** ಎಂಬುದನ್ನು ಗ್ರಹಿಸಿಕೊಂಡಿದ್ದಾರೆ. ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುವ ಸಮಯದಲ್ಲಿ, ಬಹುಶಃ ಈ ಸತ್ಯವು ಒಂದು ಚಿರಪರಿಚಿತವಾದ ಹೇಳಿಕೆ[14] ಆಗಿದ್ದಿರಬಹುದು, ಅದು ದಾವೀದನ ಘೋಷಣೆ ಅಥವಾ ಇತರ ಪ್ರವಾದಿಗಳ ಹೇಳಿಕೆಗಳ ಮೇಲೆ ಆಧಾರವಾಗಿರಬಹುದಾಗಿತ್ತು. ಉದಾಹರಣೆಗೆ ಮೀಕ 6:7ರಲ್ಲಿ, ಒಬ್ಬನು ಅತಿರೇಕಕ್ಕೆ ಹೋಗಿ ತನ್ನ ಸ್ವಂತ ಮಗುವನ್ನೇ ಯಜ್ಞವಾಗಿ ಅರ್ಪಿಸಿದಾಗ್ಯೂ, ದೇವರು ಯಜ್ಞಗಳಲ್ಲಿ ತೃಪ್ತನಾಗುವದಿಲ್ಲ ಎಂಬುದನ್ನು ಪ್ರವಾದಿಯು ಒಪ್ಪಿಕೊಳ್ಳುತ್ತಾನೆ! ಖಂಡಿತವಾಗಿಯೂ, ಮಾನವ ಯಜ್ಞಗಳನ್ನು ಮಾಡುವದಕ್ಕಾಗಿ ವಿಗ್ರಹಾರಾಧಕ ಜನಾಂಗದವರು ಖಂಡನೆಗೊಳಗಾಗಿದ್ದರು. ಇಸಾಕನ ವಿಷಯದಲ್ಲಿ ಅಬ್ರಹಾಮನನ್ನು ಪರೀಕ್ಷೆ ಮಾಡಿದ ಹೊರತಾಗಿರುವಂಥ ಪ್ರಕರಣದ ಇದ್ದಾಗ್ಯೂ, ದೇವರು ಯಾವದೇ ಕಾಲದಲ್ಲಿಯೂ ಅಂತ ಕೃತ್ಯವನ್ನು ಅಗತ್ಯವೆಂದು ಹೇಳಲೇ ಇಲ್ಲ (ಆದಿಕಾಂಡ 22:1-14). ಬಹುಶಃ ವಿಗ್ರಹಾರಾಧಕ ಜನಾಂಗದ ಜಗತ್ತಿಗೆ, ಅದು ಪಾಪದ ಬಗ್ಗೆ ಸ್ವಲ್ಪ ಮಟ್ಟಿಗೆ ತಿಳುಗಳಿಕೆಯನ್ನು ಹೊಂದಿದ್ದಾಗಿದ್ದ, ದೇವರ ನ್ಯಾಯ ಮತ್ತು ಕರುಣೆಯ ಸಂಕಲ್ಪವಿಲ್ಲದೆ ಕ್ಷಮಾಪಣೆಯನ್ನು ಸಾಧಿಸಿಕೊಳ್ಳಲಾಗದು ಎಂದಾಗಿತ್ತು. ಹೇಗೂ, ಪ್ರಾಚೀನ ಪುರಾಣ ಕಥೆಗಳಲ್ಲಿನ ಬಹುಪಾಲು ವಿಗ್ರಹಾರಾಧಕ ಜನಾಂಗದ ದೇವರುಗಳು ನ್ಯಾಯ ಮತ್ತು ಕರುಣೆಗಳಲ್ಲಿ ಸ್ವಲ್ಪವನ್ನಾದರೂ ಹೊಂದಿರಲಿಲ್ಲ. ಒಬ್ಬ ವಿಗ್ರಹಾರಾಧಕ ಜನಾಂಗದವನಿಗೆ ಕ್ಷಮಾಪಣೆಯು ಇಂದು ಕೆಲವರು ಅರ್ಥೈಸಿಕೊಂಡಿರುವ ರೀತಿಯಲ್ಲಿ ಬಂದಿರಬಹುದಾಗಿದೆ: "ದೇವರ ಕರುಣೆಯುಳ್ಳವನು ಮತ್ತು ನಮ್ಮ ಪಾಪಗಳನ್ನು ವಿಧಿಗನುಗುಣವಾಗಿ ಕ್ಷಮಿಸುವನು." ಅಂಥ ದಾರಿಯ ಮೂಲಕ ಕ್ಷಮಾಪಣೆಯು ವಾಸ್ತವಾದದ್ದೆಂಬುದನ್ನು ತಿಳಿಯುವದಕ್ಕೆ ಪಾಪಿಗಳಿಗೆ ಮಾರ್ಗವೇ ಇರಲಿಲ್ಲ. ಆ ಮಟ್ಟಿಗೆ ಇಸ್ರಾಯೇಲ್ಯರಿಗೆ ಯಾವ ಪ್ರಕಟನೆಯೂ ಇರಲಿಲ್ಲ; ಹೇಗೂ, ಅವರು ಕ್ಷಮಾಪಣೆಯು ಮುನ್‌ಮಿನುಗುಗಳನ್ನು ಹೊಂದಿದ್ದರು (ಯಾಜಕಕಾಂಡ 4:20, 26, 31, 35). ಒಂದು ಭವಿಷ್ಯಕ್ಕೆ ಅನ್ವಯಿಸುವ ಅರ್ಥದಲ್ಲಿ, ಅವರು ಕ್ರಿಸ್ತನ ಯಜ್ಞವನ್ನು ಎದುರುನೋಡುವದಕ್ಕೆ ಶಕ್ತರಾಗಿದ್ದರು, ಅದರ ಮೂಲಕ ನಂಬಿಗಸ್ತರು ಕ್ಷಮಿಸಲ್ಪಡಲಿದ್ದರು. ಇದು ಇಬ್ರಿಯ 9:13-15 ಮತ್ತು ರೋಮಾ 3:25ರಲ್ಲಿನ ಯೋಚನೆಯ ಭಾಗವಾಗಿರುತ್ತದೆ.

ಪಾಪದ ಅಪರಾಧಕ್ಕಾಗಿ ನ್ಯಾಯಯುತವಾದ ಬೆಲೆಯನ್ನು ತೆತ್ತುವದನ್ನು ಅಗತ್ಯಗೊಳಿಸುವದೊಂದೆ ದೇವರಿಗೆ ಕರುಣೆಯಿಂದಿರುವ ಮತ್ತು ಅದೇ ವೇಳೆಯಲ್ಲಿ ನ್ಯಾಯದಿಂದಿರುವ ಏಕೈಕ ದಾರಿಯಾಗಿತ್ತು – ಮತ್ತು ರೋಮಾ 3:23-26ರಲ್ಲಿ ಪೌಲನು ಮಾಡುವ ತರ್ಕವು ಅದೇ ಆಗಿರುತ್ತದೆ. ಎಲ್ಲಾ ಪ್ರಾಣಿಗಳು ಕರ್ತನಿಗೆ ಸೇರಿದ್ದಾವಾದ್ದರಿಂಧ ಪಾಪಿಯು ದೇವರಿಗೆ ನಿಜವಾಗಿಯೂ ಯಾವ ಪ್ರಾಣಿಯನ್ನು "ಕೊಡುವದಕ್ಕೆ" ಸಾಧ್ಯವಿರಲಿಲ್ಲ

ಎಂಬುದನ್ನು ನಾವು ಗಮನಿಸಬಹುದು (ಕೀರ್ತನ 50:10).

ಅವುಗಳು ನಿಜವಾದ ಯಜ್ಞಕ್ಕೆ ಪೂರ್ವಚಿತ್ರಣವಾಗಿದ್ದವು (10:5-7)

**5ಆದದರಿಂದ ಕ್ರಿಸ್ತನು ಭೂಲೋಕದೊಳಗೆ ಬರುವಾಗ –**
**[ದೇವರೇ,] ಯಜ್ಞನೈವೇದ್ಯಗಳು ನಿನಗೆ ಇಷ್ಟವಾಗಿರಲಿಲ್ಲ,**
**ನನಗೆ ದೇಹವನ್ನು ಸಿದ್ಧಮಾಡಿಕೊಟ್ಟೆ;**
**6ಸರ್ವಾಂಗಹೋಮಗಳಲ್ಲಿಯೂ ದೋಷ ಪರಿಹಾರಕಯಜ್ಞಗಳಲ್ಲಿಯೂ ನೀನು ಸಂತೋಷಪಡಲಿಲ್ಲ;**
**7ಆಗ ನಾನು – ಇಗೋ, ದೇವರೇ, ನಿನ್ನ ಚಿತ್ತ ವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ.**
**ಗ್ರಂಥದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ ಎಂದು ಹೇಳಿದೆನು**
**ಅನ್ನುತ್ತಾನೆ.**

ಆತನು ತನ್ನ ಚರ್ಚೆಯನ್ನು ಮುಂದುವರೆಸಿದ ಹಾಗೆ, ಹಳೆಯ ಒಡಂಬಡಿಕೆಯ ಯಜ್ಞಗಳು ಕ್ರಿಸ್ತನ ಶ್ರೇಷ್ಠ ಯಜ್ಞಕ್ಕೆ ಪೂರ್ವಚಿತ್ರಣವಾಗಿದ್ದವೆಂದು ಲೇಖಕನು ಹೇಳುತ್ತಾನೆ. ವಿವಿಧ ಕೀರ್ತನೆಗಳನ್ನು ಈಗಾಗಲೇ ಉಲ್ಲೇಖ ಮಾಡಿದವನಾಗಿ (2; 45; 95; 110), ಲೇಖಕನು ಮುಂದೆ ತನ್ನ ವಾಚಕರ ಗಮನವನ್ನು ಕೀರ್ತನೆ 40:6-8ರ (LXX ನಿಂದ)[15] ಕಡೆಗೆ ಸೆಳೆಯುತ್ತಾನೆ. ಈ ಕೀರ್ತನೆಯು ಒಂದು ರೀತಿಯಲ್ಲಿ ನಿತ್ಯಕುಮಾರನು ಮತ್ತು ತಂದೆಯ ನಡುವಿನ ಸಂಭಾಷಣೆಯಂತಿದ್ದು, ಮಗನು ಇಲ್ಲಿ ಮಾತಾಡುತ್ತಿರುವನು.[16] "ಮೆಸ್ಸೀಯನಿಗೆ ಸಂಬಂಧಿಸಿದ ಕೀರ್ತನೆಗಳಲ್ಲಿರುವಂತೆಯೇ, ದಾವೀದನ ಮಾತುಗಳು ಮೆಸ್ಸೀಯನಿಗೆ ಪೂರ್ವಚಿತ್ರಣವಾಗಿರುತ್ತವೆ."[17] "ಕ್ರಿಸ್ತನು ಭೂಲೋಕದೊಳಗೆ ಬರುವಾಗ" ಎಂಬ ಮಾತು ಕ್ರಿಸ್ತನ ಪೂರ್ವಅಸ್ತಿತ್ವವನ್ನು ಸೂಚಿಸುತ್ತದೆ.

**ವಚನಗಳು 5-7.** ಅಕ್ಷರಶಃ, **ನನಗೆ ದೇಹವನ್ನು ಸಿದ್ಧಮಾಡಿಕೊಟ್ಟೆ** ಎಂಬ ಇಬ್ರಿಯರಿಗೆ ಪತ್ರಿಕೆಯ ಪದಗುಚ್ಛದ ಅರ್ಥವು (ವ. 5) "ನೀನು ನನಗಾಗಿ ಕಿವಿಗಳನ್ನು ಚುಚ್ಚಿದ್ದೀ" (ಅಥವಾ "ನೀನು ನನಗಾಗಿ ತೆರೆದಿರುವ ಕಿವಿಗಳು") ಎಂದಾಗಿರುತ್ತದೆ; ಆದರೆ ಅದು ಇಲ್ಲಿ LXXನಿಂದ ಭಾವಾನುವಾದಗೊಳಿಸಲ್ಪಟ್ಟಿದೆ. ಮೂಲ ಮಾತು ಒಂದು ದೇಹವನ್ನು ರೂಪಿಸುವದನ್ನು ಸೂಚಿಸುವ ಆಡುಮಾತು ಆಗಿರಬಹುದಾಗಿದೆ, ಹೀಗೆ ಆ ಪದಗುಚ್ಛಕ್ಕೆ "ನನಗೆ ದೇಹವನ್ನು ಸಿದ್ಧಮಾಡಿಕೊಟ್ಟೆ" ಎಂದು ಭಾವಾನುವಾದ ಮಾಡಿರುವದು ಸೂಕ್ತವಾಗಿರುತ್ತದೆ. "ನೀನು ನನಗಾಗಿ ಕಿವಿಗಳನ್ನು ಚುಚ್ಚಿದ್ದೀ" ಎಂಬುದು ತನ್ನ ಕಿವಿಗಳನ್ನು ಚುಚ್ಚುವಂತೆ ಅಧೀನಪಡಿಸಿಕೊಂಡಿರುವ ಸೇವಕನೊಬ್ಬನು ವಸ್ತುತಃ ಒಬ್ಬ ಸೇವಕನಾಗಿ, ತನ್ನ ಯಜಮಾನನಿಗೆ ವಿಧೇಯನಾಗಿರುವನು ಮತ್ತು ಆ ದಿನದಿಂದ ಮುಂದೆ ತನ್ನ ಯಜಮಾನನಿಗೆ ಅಧೀನನಾಗಿರುವನೆಂಬದನ್ನು ಸೂಚಿಸುವದಾಗಿತ್ತು (ನೋಡಿರಿ ವಿಮೋಚನಕಾಂಡ 21:6). LXXನಲ್ಲಿರುವ ಪದಬಳಕೆಯು ಅದನ್ನು ಪರಿಗಣನೆಗೆ ತೆಗೆದು ಕೊಳ್ಳುತ್ತದೆ, ಆತನು ಕಿವಿಗಳನ್ನು ಸಿದ್ಧಗೊಳಿಸುವವನಾಗಿ, ದೇವರು ಇಡೀ ದೇಹವನ್ನು ಸಿದ್ಧಗೊಳಿಸಿದನು. "ಮಾತಾಡುತ್ತಿರುವವನಿಗಾಗಿ ದೇವರಿಂದ 'ಸಿದ್ಧಗೊಳಿಸಲ್ಪಟ್ಟ' ದೇಹವು ಪುನಃ ದೇವರಿಗೆ 'ಸಜೀವ ಯಜ್ಞವಾಗಿ,' ಆತನಿಗೆ ವಿಧೇಯತೆಯಿಂದ ಸೇವೆ ಮಾಡುವಂತೆ ನೇಮಿಸಿಕೊಳ್ಳಲ್ಪಡುವಂತೆ ಅರ್ಪಿಸಲಾಗುತ್ತದೆ."[18]

ಲೇಖಕನು LXXನ್ನು ಹೆಸರಿಸದೆಯೆ ಅದರಿಂದ ಉಲ್ಲೇಖನ ಮಾಡುತ್ತಾನೆ. ಪ್ರೇರಿತ ಲೇಖಕರು LXX ವಿಷಯದಲ್ಲಿ ಹೇಗೆ ನಡಕೊಂಡರೆಂಬ ಸಾಧ್ಯತೆಯ ಬಣ್ಣನೆಯು ಇಲ್ಲಿದೆ:

"Septuagint ಮೂಲ ಅರ್ಥವನ್ನು ಸರಿಯಾಗಿ ವ್ಯಕ್ತಪಡಿಸುವದಾದರೆ, ಆತನು ನಂತರ ಸಾಮಾನ್ಯವಾಗಿ ಅದರಿಂದ ಉಲ್ಲೇಖ ಮಾಡುತ್ತಾನೆ; ಇಲ್ಲವಾದರೆ, ಆತನು ಸರಿಪಡಿಸುವದಕ್ಕೆ ಅದನ್ನು ತಿದ್ದುಪಡಿ ಮಾಡುವನು, ಅಥವಾ ಆತನು ನಮಗೆ ಇಬ್ರಿಯದ ಹೊಸ ಅನುವಾದವನ್ನು ಕೊಡುವನು."[19] ದೇವರು LXXನ್ನು ಆಶೀರ್ವದಿದಸಿನು, ಆದ್ದರಿಂದ ಅದು ಭಾವಾನುವಾದ ಮಾಡಿದಾಗ್ಯೂ ನಿಜವಾದ ಅರ್ಥವನ್ನು ಕೊಡುತ್ತದೆಂದು ನಾವು ಭಾವಿಸಿಕೊಳ್ಳೋಣವೇ? ಅದು ಹಾಗೆಯೇ ಇರಬಹುದಾಗಿದೆ, ಆದರೆ 5ನೇ ವಚನದಲ್ಲಿರುವ ಪ್ರಕಾರ, ಪ್ರೇರಿತ ಲೇಖಕನು ಅದನ್ನು ಸ್ವಲ್ಪ ಮಟ್ಟಿಗೆ ತಿದ್ದುಪಡಿ ಮಾಡಿದನು.[20] ಕೆಲವು ಸಮಯಗಳಲ್ಲಿ LXXಗೆ ಹೊಸ ಒಡಂಬಡಿಕೆಯ ಲೇಖಕರಿಂದ ಅನುಮೋದನೆಯಿರುವಂತೆ, ವಿಶೇಷವಾಗಿ ಇಬ್ರಿಯರಿಗೆ ಪತ್ರಿಕೆಯ ಲೇಖಕನಿಂದ ಅನುಮೋದನೆಯಿರುವಂತೆ ತೋರುತ್ತದೆ. ಅನುವಾದಕರು ಒಂದು ಅಕ್ಷರಶಃ ಅನುವಾದವನ್ನು ಮಾಡದೆಯೇ ಅರ್ಥವನ್ನು ವ್ಯಕ್ತಪಡಿಸಿದರು. ಅನೇಕ ಮೂಲ ಪದಗುಚ್ಛಗಳನ್ನು ಬೇರೊಂದು ಭಾಷೆಯಲ್ಲಿ ಅಕ್ಷರಶಃ ಅನುವಾದಗೊಳಿಸುವಾಗ ಯಾವ ಅರ್ಥವನ್ನೂ ಕೊಡುವದಿಲ್ಲವಾದ ಕಾರಣದಿಂದ ಈ ವಿಧವಾದ ಭಾವಾನುವಾದವು ಅವಶ್ಯಕವಾಗಿರುತ್ತದೆ. ದೇವರು ನಮ್ಮೊಬ್ಬೊಬ್ಬರಿಗೆ ದೇಹವನ್ನು ಕೊಟ್ಟಿದ್ದಾನಾದ್ದರಿಂದ, ಆತನು ಅದನ್ನು ಒಂದು "ಸಜೀವ ಯಜ್ಞವಾಗಿ" ಹಿಂದಕ್ಕೆ ಪಡೆದುಕೊಳ್ಳಲು ಬಯಸುತ್ತಾನೆ. ಹೇಗೂ ಬೋಧಕರು ಆಗಾಗ್ಗೆ ವಾಕ್ಯವನ್ನು ವಿವರಿಸುತ್ತಾ ಹೋಗುವ ವೇಳೆ ಮಾಡುವಂತೆಯೇ, ಲೇಖಕನು ತನ್ನ ಸ್ವಂತ ಮೂಲ ಭಾವಾನುವಾದ ವನ್ನು ಮಾಡಿಕೊಂಡಿರಬಹುದಾಗಿದೆ.

6ನೇ ವಚನವು ಹಳೆಯ ಒಡಂಬಡಿಕೆಯ **ಸರ್ವಾಂಗಹೋಮಗಳಲ್ಲಿಯೂ ದೋಷಪರಿಹಾರಕ ಯಜ್ಞಗಳಲ್ಲಿ** ದೇವರು **ಸಂತೋಷಪಡಲಿಲ್ಲ** ಎಂಬುದನ್ನು ತೋರಿಸುತ್ತದೆ ಯಾಕೆಂದರೆ ಅವುಗಳು ಪಾಪದಿಂದ ರಕ್ಷಣೆಯನ್ನು ಉಂಟು ಮಾಡಲಿಲ್ಲ. **ನಿನಗೆ ಇಷ್ಟವಾಗಲಿಲ್ಲ** ಎಂಬ ಮಾತು (ವ. 5) ಅಂಥ ಯಜ್ಞಗಳು ದೇವರ ಚಿತ್ತವಾಗಿರಲಿಲ್ಲ ಅಥವಾ ಆತನು ಉದ್ದೇಶಿಸಲಿಲ್ಲ ಎಂಬ ಅರ್ಥವನ್ನು ಕೊಡುತ್ತದೆ.[21] ಬದಲಾಗಿ, ಅದೇ ಕಾರ್ಯವನ್ನು ಸಾಧಿಸುವದಕ್ಕಾಗಿ ಆತನು ಯೇಸುವಿನ ಮರಣದಲ್ಲಿ ಪೂರ್ಣವಾಗಿ ಇಷ್ಟ ಹೊಂದಿದ್ದನು. ಯೇಸುವಿನ ಯಜ್ಞದ ಕಾರಣದಿಂದ, ದೇವರು ಬೀಳುವಿಕೆಯ ಮುಂಚೆ ಏದೆನ್ ತೋಟದಲ್ಲಿ ನೋಡಿದಂತೆಯೇ, ವಿಮೋಚಿಸಲ್ಪಟ್ಟ ಮನುಷ್ಯನನ್ನು "ಪುನಃ ಇಷ್ಟದೊಂದಿಗೆ ನೋಡಬಲ್ಲನು."[22]

ಕೀರ್ತನೆ 40:7 ಮೂಲ ಇಬ್ರಿಯ ಭಾಷೆಯ ವಾಕ್ಯದಲ್ಲಿ **ಗ್ರಂಥದ ಸುರುಳಿಯಲ್ಲಿ** (ವ. 7) ಎಂಬ ಪದಗುಚ್ಛವು "ಯಾವದೇ ಕಾರ್ಯದ ತುತ್ತತುದಿಯನ್ನು – ಒಂದು ಬೂಟಿನ ತುದಿ, ಒಂದು ಮೇಜಿನ ಕಾಲು – ಸೂಚಿಸುತ್ತದೆ." ಅಲ್ಲದೆ ಅದು ಹಸ್ತಪ್ರತಿಯು ಸುತ್ತಲ್ಪಟ್ಟಿರುವ ಕೋಲಿನ ತಲೆ ಅಥವಾ ಹಿಡಿಕೆಯನ್ನು ಸಹ ಸೂಚಿಸುತ್ತದೆ. ಇಲ್ಲಿ, ಹಿಡಿಕೆಯು ಆ ವಿಧವಾದ ಒಂದು ಸುರುಳಿಯನ್ನು ಪ್ರತಿನಿಧಿಸುತ್ತದೆ, ಮತ್ತು ವಚನವು ಅದೇ ರೀತಿಯಾಗಿ ಅನುವಾದಿಸಲ್ಪಟ್ಟಿದೆ.[23] "ಗ್ರಂಥದ ಸುರುಳಿ" ಅಕ್ಷರಶಃ ಯೋಚನೆಯಾಗಿದೆ, ಯಾಕೆಂದರೆ ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುವ ವೇಳೆಯಲ್ಲಿ ಬಹುಪಾಲು ಪ್ರಾಚೀನ ಪುಸ್ತಕಗಳು ಸುರುಳಿಗಳಾಗಿ ರೂಪಿಸಲ್ಪಟ್ಟಿರುತ್ತಿದ್ದವು. ಈ ಸಂದರ್ಭದಲ್ಲಿ "ಗ್ರಂಥ" ಎಂಬುದು ದೇವರ ಧರ್ಮಶಾಸ್ತ್ರವಾಗಿರುತ್ತದೆ. ಯೇಸು ಮಾಡಿದ್ದೆಲ್ಲವೂ ಧರ್ಮಶಾಸ್ತ್ರದ "ಗ್ರಂಥದ ಸುರುಳಿಯಲ್ಲಿ" ಬರೆದದ್ದನ್ನು ನೆರವೇರಿಸುವದಕ್ಕಾಗಿಯೇ ಆಗಿತ್ತು, ಆತನು ತನ್ನ ಮರಣವನ್ನು ಅನುಭವಿಸುವದಕ್ಕೆ ಹೋದಾಗ ಅದು ನಿರ್ದಿಷ್ಟವಾಗಿ ಸಾಧಿಸಲ್ಪಟ್ಟಿತು (ಮಾರ್ಕ 14:49). 8ನೇ ವಚನದಲ್ಲಿ "ಧರ್ಮಶಾಸ್ತ್ರ"ದ ಉಲ್ಲೇಖವು 7ನೇ ವಚನದಲ್ಲಿರುವ "ಸುರುಳಿ" ಬಗ್ಗೆ ಸ್ಪಷ್ಟಪಡಿಸುತ್ತದೆ. "ಗ್ರಂಥದ ಸುರುಳಿಯಲ್ಲಿ ಬರೆದದೆ" ಎಂಬುದನ್ನು "'ಅದು ಬರೆಯಲ್ಪಟ್ಟದ್ದಾಗಿ

ಉಳಿಯುತ್ತದೆ' ಉತ್ತಮವಾಗಿ [ಎಂಬ ಅರ್ಥ ಬರುವಂತೆ ಮಾರ್ಟಿನ್ ಲೂಥರನ ಮೂಲಕ] ಉತ್ತಮವಾಗಿ ಬರೆಯಲ್ಪಟ್ಟಿದೆ. ಬರೆಯಲ್ಪಟ್ಟದ್ದಾಗಿ ಉಳಿಯುವಂಥದ್ದು ಒಂದು ಉಲ್ಲಂಘಿಸಕೂಡದ ಗುಣಸ್ವಭಾವವನ್ನು ಹೊಂದಿರುತ್ತದೆ."[24]

ಯೇಸು ಯೋಹಾನ 10:34ರಲ್ಲಿ ಕೀರ್ತನೆ 82:6ನ್ನು ಉಲ್ಲೇಖಿಸುವ ಮೂಲಕ ಕೀರ್ತನೆಯನ್ನು "ಧರ್ಮಶಾಸ್ತ್ರದ" ಭಾಗವೆಂದು ಸೂಚಿಸಿದನು. ಕೆಲ ಸಮಯಗಳಲ್ಲಿ ಇಡೀ ಹಳೆಯ ಒಡಂಬಡಿಕೆಯನ್ನು "ಧರ್ಮಶಾಸ್ತ್ರ" ಎಂದು ಕರೆಯಬಹುದೆಂಬುದನ್ನು ಇದು ಸೂಚಿಸುತ್ತದೆ. ಇಬ್ರಿಯ 10:7ರಲ್ಲಿ ಪ್ರಸ್ತಾಪಿಸಲಾಗಿರುವ ಸುರುಳಿಯು ಏಕೈಕ ಪಂಚಪುಸ್ತಕಗಳು ಆಗಿದ್ದಲ್ಲಿ, ಆ ಐದು ಭಾಗಗಳುಳ್ಳ ಸಂಪುಟವು ಯೇಸುವಿನ ಕುರಿತ ಉಲ್ಲೇಖನಗಳನ್ನು ಒಳಗೊಂಡಿರತಕ್ಕದ್ದು (ನೋಡಿರಿ ಆದಿಕಾಂಡ 3:15; 49:10; ಧರ್ಮೋಪದೇಶಕಾಂಡ 18:15-18). ತನ್ನ ಮಗನು ಒಂದು ಯಜ್ಞವಾಗಿರಬೇಕೆಂಬುದು ತಂದೆಯ ಚಿತ್ತವಾಗಿತ್ತಾದರೂ, ಅದು ಮಗನ ಸ್ವಯಂಪ್ರೇರಿತ ಚಿತ್ತವೂ ಆಗಿತ್ತು.

ದಾವೀದನು ಹೀಗೆ ಬರೆದನು, **ಇಗೋ, ದೇವರೇ, ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ**, ಆದರೆ ಅದು ನಿಜವಾಗಿಯೂ ಆತ್ಮದಲ್ಲಿ ಕ್ರಿಸ್ತನು ಈ ಹೇಳಿಕೆಯನ್ನು ಮಾಡುವವನಾಗಿದ್ದನು. ಆತನು ಈ ಲೋಕದೊಳಗೆ ಬರುವದರ ಮೂಲಕ ಪ್ರವಾದನೆಯು ನೆರವೇರಿತು, ಮತ್ತು ಆತನು ದೇವರ ಚಿತ್ತವನ್ನು ಪರಿಪೂರ್ಣವಾಗಿ ಪೂರ್ತಿಗೊಳಿಸಿದನು. ದಾವೀದನು ಭಾಗಶಃ ಮಾತ್ರವೇ ದೇವರ ಚಿತ್ತವನ್ನು ಮಾಡಿದನೆಂದು ನಾವು ಹೇಳಬಲ್ಲೆವು; ಆದರೆ ಯೇಸುವಿನ ವಿಷಯದಲ್ಲಾಗದರೋ ಅದು ಸತ್ಯಭರಿತವಾಗಿಯೂ ಸಂಪೂರ್ಣವಾಗಿಯೂ ಹೇಳಲ್ಪಡಬಹುದಾಗಿದೆ (ನೋಡಿರಿ ಯೋಹಾನ 6:38; 17:4). ಹಳೆಯ ಒಡಂಬಡಿಕೆಯ ಪ್ರವಾದಿಗಳಲ್ಲಿ "ಕ್ರಿಸ್ತನ ಆತ್ಮನು" ಇದ್ದನೆಂಬುದನ್ನು ನೆನಪಿಸಿಕೊಳ್ಳಿರಿ; ಅವರು ಅನೇಕ ಸಾರಿ ತಾವು ಹೇಳುತ್ತಿರುವದನ್ನು ಅಥವಾ ಬರೆಯುತ್ತಿರುವದನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲಿಲ್ಲ (ನೋಡಿರಿ 1 ಪೇತ್ರ 1:10, 11). ಕೇವಲ ಇಚ್ಛಾಶಕ್ತಿಯುಳ್ಳ ವ್ಯಕ್ತಿ, ತಾನು ಸ್ವತಃ ನಿರ್ಧಾರಮಾಡಿಕೊಳ್ಳುವ ಸಾಮರ್ಥ್ಯವುಳ್ಳವನು ಮಾತ್ರವೇ ಒಂದು ಸೂಕ್ತವಾದ ಯಜ್ಞವನ್ನು ಮಾಡಬಲ್ಲವನಾಗಿದ್ದನು. ಚಿತ್ತ ಅಥವಾ ಆಯ್ಕೆಯನ್ನಾಗಲಿ ಹೊಂದಿಲ್ಲದಿರುವದು ಅಂತಿಮವಾಗಿ ದೇವರ ನ್ಯಾಯಕ್ಕೆ ಅಗತ್ಯವಾದದ್ದನ್ನು ಸಂಧಿಸುವದಕ್ಕೆ ಆಗುತ್ತಿರಲಿಲ್ಲ. ಯೇಸು ತನ್ನ ಪ್ರಾಣವನ್ನು "ತಿರುಗಿ ಅದನ್ನು ಪಡಕೊಳ್ಳುವಂತಾಗಲು" ಒಪ್ಪಿಸಿ ಕೊಟ್ಟನು (ನೋಡಿರಿ ಯೋಹಾನ 10:11, 15, 17, 18).

## ಅವುಗಳು ಮೊದಲನೆಯ ಒಡಂಬಡಿಕೆಯಾಗಿದ್ದವು (10:8-10)

**8ಧರ್ಮಶಾಸ್ತ್ರದ ಪ್ರಕಾರ ಸಮರ್ಪಣೆಯಾಗುತ್ತಾ ಬರುವ ಯಜ್ಞನೈವೇದ್ಯಗಳೂ ಸರ್ವಾಂಗಹೋಮಗಳೂ ದೋಷಪರಿಹಾರಕಯಜ್ಞಗಳೂ ನಿನಗೆ ಇಷ್ಟವಾಗಿರಲಿಲ್ಲ. ನೀನು ಅವುಗಳಲ್ಲಿ ಸಂತೋಷಪಡುವದಿಲ್ಲ ಎಂದು ಮೇಲೆ ಹೇಳಿದ ತರುವಾಯ – 9ಇಗೋ, ನಿನ್ನ ಚಿತ್ತವನ್ನು ನೆರವೇರಿಸವದಕ್ಕೆ ಬಂದಿದ್ದೇನೆ ಎಂದು ಹೇಳಿದ್ದಾನೆ. ಆತನು ಎರಡನೆಯದನ್ನು ಸ್ಥಾಪಿಸುವದಕ್ಕಾಗಿ ಮೊದಲನೆಯದನ್ನು ತೆಗೆದುಬಿಡುತ್ತಾನೆ. 10ಯೇಸು ಕ್ರಿಸ್ತನು ಒಂದೇ ಸಾರಿ ದೇಹ ಸಮರ್ಪಣೆಮಾಡಿ ದೇವರ ಚಿತ್ತವನ್ನು ನೆರವೇರಿಸಿದ್ದರಿಂದಲೇ ನಾವು ಶುದ್ಧರಾದೆವು.**

**ವಚನಗಳು 8-10.** ಈ ಯಜ್ಞಗಳು ಹಳೆಯ (ಮೊದಲನೆಯ) ಒಡಂಬಡಿಕೆಯ ಭಾಗವಾಗಿದ್ದವೆಂದು ಲೇಖಕನು ಹೇಳುತ್ತಾನೆ. ಕೀರ್ತನೆ 40:6-8ರ ಉಲ್ಲೇಖವನ್ನು

ವಿವರಿಸುವದಕ್ಕೆ ಆತನು ಅದರ ಒಂದು ಭಾಗವನ್ನು ಪುನಃ ಉಲ್ಲೇಖನ ಮಾಡಿ ಒತ್ತಿ ಹೇಳುತ್ತಾನೆ. ಮತ್ತೊಂದಾವರ್ತಿ, ಇದು 13:22ರಂತೆಯೇ, ಒಂದು ಪ್ರಸಂಗದ ಸ್ವಭಾವವನ್ನು ಹೊಂದಿದೆ. ಈ ಉಲ್ಲೇಖನದಲ್ಲಿ ಕ್ರಿಸ್ತನು ಮಾತಾಡುತ್ತಿದ್ದಾನೆ. ಆತನು ಹೊಸ ಒಡಂಬಡಿಕೆಯನ್ನು ತರುವದಕ್ಕೆ ಬಹಳ ಕಾಲದ ಹಿಂದೆಯೇ ಹಳೆಯ ಯಜ್ಞಗಳ ಕ್ರಮವು ನಿಷ್ಪ್ರಯೋಜನವಾದದ್ದೆಂದು ಬಲ್ಲವನಾಗಿದ್ದನು. ಆತನು ದೇವರ ಚಿತ್ತಕ್ಕೆ ಪರಿಪೂರ್ಣವಾಗಿ ವಿಧೇಯನಾಗುವದಕ್ಕಾಗಿ ಭೂಮಿಗೆ ಬಂದನು. ಈ ಪ್ರವಾದನೆಯು ದಾವೀದನ ಮೂಲಕ ಬಂದಿತು, ಆದರೆ ಆತನೇ ಮೂಲ ಆಗಿರಲಿಲ್ಲ. ದೇವರ ಚಿತ್ತವನ್ನು ಮಾಡುವದಕ್ಕೆ, ಯೇಸುವು **ಮೊದಲನೆಯ** ಉಯಿಲು ಅಥವಾ ವ್ಯವಸ್ಥೆಯನ್ನು **ತೆಗೆದುಬಿಡು**ವನು (ವ. 9). Ἀναιρέω (*anaireō*, "ತೆಗೆದು ಬಿಡುತ್ತಾನೆ") ಎಂಬ ಪದವು "ರದ್ದುಗೊಳಿಸುತ್ತಾನೆ" (NRSV) ಎಂದು ಅನುವಾದಿಸಲ್ಪಡಬಹುದಾಗಿದೆ ಮತ್ತು ಸಾಮಾನ್ಯವಾಗಿ "ಕೊಲ್ಲು"[25] ಎಂಬ ಅರ್ಥವನ್ನು ಹೊಂದಿದೆ. "ಹಳೆಯದು 'ತೆಗೆದು ಹಾಕಲ್ಪಟ್ಟಿದೆ,' ಸಂಪೂರ್ಣ ರದ್ದುಗೊಳಿಸುವಿಕೆಯನ್ನು ಸೂಚಿಸುವ ಒಂದು ಬಲವಾದ ಪದವಾಗಿದೆ."[26]

ಹೊಸದಕ್ಕೆ ದಾರಿಯನ್ನು ಮಾಡಿಕೊಡುವದಕ್ಕೆ ಹಳೆತದ್ದನ್ನು ತೆಗೆದು ಹಾಕಬೇಕಾಗಿತ್ತು. ಲೇಖಕನು ಈ ಅಂಶವನ್ನು ಒತ್ತಿ ಹೇಳುತ್ತಾ, ತತ್ಪರಿಣಾಮವಾಗಿ ಈ ವಿಧದಲ್ಲಿ ಹೇಳುತ್ತಾನೆ, "ಕೀರ್ತನೆ 40:6-8ರಲ್ಲಿ, ಉಲ್ಲೇಖಿಸಲ್ಪಟ್ಟ ಪ್ರಕಾರವೇ, ಯೇಸು ತಾನು ಬಂದ ವೇಳೆಯಲ್ಲಿ ತನ್ನ ತಂದೆಯ ಚಿತ್ತವನ್ನು ಮಾಡುತ್ತಿದ್ದಾನೆ. ಆತನು ಧರ್ಮಶಾಸ್ತ್ರದಿಂದ ಹೊರಿಸಲಾಗಿದ್ದ ನೊಗದ ಬಂಧನದಿಂದ ನಮ್ಮನ್ನು ವಿಮುಕ್ತಗೊಳಿಸುವದಕ್ಕೆ ತನ್ನ ಸ್ವಂತ ದೇಹವನ್ನು ಸಮನರ್ಪಿಸಿದನು, ಮತ್ತು ಎರಡನೆಯ ಉಯಿಲನ್ನು ಮತ್ತು ಒಡಂಬಡಿಕೆಯನ್ನು ಕೊಟ್ಟನು." **ಎರಡನೆಯದ್ದನ್ನು ಸ್ಥಾಪಿಸುವದಕ್ಕಾಗಿ** "ಮೊದಲನೆಯದ್ದನ್ನು" ತೆಗೆದು ಹಾಕುವದರಲ್ಲಿ (ವ. 9), ಕ್ರಿಸ್ತನು ಹಳೆಯ ಒಡಂಬಡಿಕೆಯನ್ನು ತೆಗೆದು ಹಾಕಿದನು. (ನೋಡಿರಿ ರೋಮಾ 7:1-7.)

ಇಬ್ರಿಯರಿಗೆ ಪತ್ರಿಕೆಯ ಲೇಖಕನು **ಧರ್ಮಶಾಸ್ತ್ರವು ಯಜ್ಞನೈವೇದ್ಯಗಳಿಗೆ** ಅಧಿಕಾರವನ್ನು ಕೊಟ್ಟಿತ್ತೆಂದು ಬಲ್ಲವನಾಗಿದ್ದನು (ವ. 8; ನೋಡಿರಿ ಯಾಜಕಕಾಂಡ 1-7), ಆದರೆ ಯಜ್ಞವನ್ನು ಸಮರ್ಪಿಸುವ ವೇಳೆ ಆರಾಧಕನು ಪ್ರಾಮಾಣಿಕವಾಗಿ ಪಶ್ಚಾತ್ತಾಪವುಳ್ಳವನಾಗಿರದ ಕಾರಣದಿಂದ ಪ್ರವಾದಿಗಳು ಅವುಗಳನ್ನು ಪ್ರಯೋಜನವಿಲ್ಲದವುಗಳೆಂದು ಪರಿಗಣಿಸಿದರೆಂಬುದು ಸಹ ಆತನಿಗೆ ಗೊತ್ತಿತ್ತು. (ಉದಾಹರಣೆಗೆ, ನೋಡಿರಿ ಹೋಶೇಯ 6:6; ಯೆಶಾಯ 1:11-14; ಮೀಕ 6:6-8.) ಆದುದರಿಂದ, ನಾವು ಹೀಗೆ ಓದುತ್ತೇವೆ, **ನಿನಗೆ ಇಷ್ಟವಾಗಿರಲಿಲ್ಲ. ನೀನು ಅವುಗಳಲ್ಲಿ ಸಂತೋಷಪಡುವದಿಲ್ಲ** (ವ. 8). ಇದು ಸತ್ಯವಾಗಿತ್ತಾದ್ದರಿಂದ, ದೇವರು ಅನಾದಿಕಾಲ ದಿಂದಲೇ ಉತ್ತಮವಾದ ಯಜ್ಞವೊಂದನ್ನು ಒದಗಿಸುವದಕ್ಕೆ ಯೋಜನೆ ಮಾಡಿಕೊಂಡಿದ್ದನು (ವಚನಗಳು 9, 10). **ಕ್ರಿಸ್ತನು ದೇಹಸಮರ್ಪಣೆಮಾಡಿ ಒಂದೇ ಸಾರಿ** (ἐφάπαξ, *ephapax*)[27] ಸಮಸ್ಯೆಯನ್ನು ಬಗೆಹರಿಸಿದನು.

ಕ್ರಿಸ್ತನ ಸಮರ್ಪಣೆಯ ಮೂಲಕ, ನಾವು **ಶುದ್ಧರಾದೆವು**, ಅಥವಾ "ಪರಿಶುದ್ಧಗೊಳಿಸಲ್ಪಟ್ಟೆವು." ಇದು ಕಾಲದ ಒಂದು ಹಂತದಲ್ಲಿ ರಕ್ಷಿಸಲ್ಪಟ್ಟವರಾಗಿರುವದಕ್ಕೆ ಸಮವಾಗಿರುತ್ತದೆ (ಅನಿಶ್ಚಿತಭೂತಕಾಲರೂಪ ಬಳಸಲ್ಪಟ್ಟಿದೆ).[28] ಕ್ರಿಸ್ತನ ಸಾಧನೆಯು ಮನುಷ್ಯರೊಂದಿಗೆ ದೇವರು ಮಾಡಿಕೊಳ್ಳುವ ಹೊಸ ಉಯಿಲು ಅಥವಾ ಒಡಂಬಡಿಕೆಯನ್ನು ಸಹ ಜಾರಿಗೆ ತಂದಿತು. ಕ್ರಿಸ್ತನು ತಂದೆಯ ಚಿತ್ತವನ್ನು ಮಾಡದೆ ಇದ್ದಿದ್ದರೆ, ನಮಗೆ ರಕ್ಷಣೆಯ ನಿರೀಕ್ಷೆಯೇ ಇದ್ದಿರುತ್ತಿರಲಿಲ್ಲ. ಯೆಹೂದ್ಯರ ಮನಸ್ಸಿಗಾದರೋ, "ಶುದ್ಧರಾಗಿ" ಇರುವದೆಂದರೆ ಒಬ್ಬನು ಆರಾಧನೆಯಲ್ಲಿ ದೇವರ ಸಮೀಪಕ್ಕೆ ಹೋಗುವಂತಾಗಲು ಶುದ್ಧೀಕರಿಸಲ್ಪಟ್ಟಿದ್ದಾನೆ ಎಂದರ್ಥವಾಗಿರುತ್ತಿತ್ತು. ಅದು ನಮಗೆ ಆ ರೀತಿಯಲ್ಲಿ ಮತ್ತು ಇನ್ನು ಎಷ್ಟೋ ಅಧಿಕವಾದದ್ದಾಗಿದೆ.

"ಶುದ್ಧೀಕರಣ" ವು ನಾವು ಕ್ರಿಸ್ತನಿಗೆ ಆರಂಭದಲ್ಲಿ ಪರಿವರ್ತನೆಗೊಳ್ಳುವಾಗ ಸಂಭವಿಸುವ ಏಕ-ಸಾರಿ ಘಟನೆ ಮತ್ತು ಕ್ರೈಸ್ತೀಯ ಗುಣಸ್ವಭಾವದಲ್ಲಿ ಒಂದು ನಿರಂತರವಾದ ಬೆಳವಣಿಗೆ ಎರಡೂ ಆಗಿರುತ್ತದೆ. ನಾವು ಈ ಯೋಚನೆಯನ್ನು 2 ಕೊರಿಂಥ 7:1ರಲ್ಲಿ ಕಾಣುತ್ತೇವೆ, ಅದು ನಮಗೆ "ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ"[29] ಎಂದು ಬುದ್ಧಿವಾದ ಹೇಳುತ್ತದೆ.

ತಂದೆಯ ಚಿತ್ತವನ್ನು ಜಾರಿಗೆ ತರುವದಕ್ಕೆ ಯೇಸುವಿಗೆ ಎರಡು ಸಂಗತಿಗಳು ಅಗತ್ಯವಾಗಿದ್ದವು. ಮೊದಲನೆಯದ್ದು, ಆತನಿಗೋಸ್ಕರ ಒಂದು ದೇಹವು ಸಿದ್ಧಗೊಳಿಸಲ್ಪಡಬೇಕಿತ್ತು (ವ. 5), ಅದು ಆತನ ಜನನದ ವೇಳೆ ಸಂಭವಿಸಿತು. ಎರಡನೆಯದಾಗಿ, ಆತನು ಹಳೆಯ ವ್ಯವಸ್ಥೆಯನ್ನು ತೆಗೆದು ಹಾಕಬೇಕಾಗಿತ್ತು (ವ. 9). ನಮ್ಮ ಕರ್ತನು ಭೂಮಿಗೆ ಬರುವದಕ್ಕೆ ಬಹಳ ಕಾಲದ ಮುಂಚೆಯೇ ತನ್ನ ಬರೋಣದ ಉದ್ದೇಶವನ್ನು ಬಲ್ಲವನಾಗಿದ್ದನು. ಆತನ ಯಜ್ಞವು ಎಷ್ಟೊಂದು ಪರಿಪೂರ್ಣವಾಗಿತ್ತೆಂದರೆ ಪುನಃ ಮತ್ತೆಂದೂ ಅದನ್ನು ಪುನರಾವರ್ತಿಸುವ ಅಗತ್ಯವಿರಲಿಲ್ಲ![30] ದೇವರು ಈ ಒಂದು ವಿಧೇಯತೆಯುಳ್ಳ ಹಾಗೂ ತನ್ನನ್ನೇ ಅರ್ಪಿಸುವ ಯಜ್ಞದಲ್ಲಿ ಸಂತೋಷಗೊಂಡನು, ಮತ್ತು ಆ ಮೂಲಕ ಪಾಪವನ್ನು ಕ್ಷಮಿಸಿದನು. ಪರಲೋಕದಲ್ಲಿ ಯೇಸು ಮಾನವರನ್ನು ರಕ್ಷಿಸುವದಕ್ಕೆ ಅವಶ್ಯವಾಗಿದ್ದ ಎಲ್ಲವನ್ನೂ ಬಲ್ಲವನಾಗಿದ್ದನು. ಆತನು ಸ್ವಯಂಪ್ರೇರಿತನಾಗಿ ತನ್ನ ಜೀವದ ರಕ್ತವನ್ನು ಮಾನವ ಜೀವಿಗಳ ರಕ್ಷಣೆಗೋಸ್ಕರ ಸಮರ್ಪಿಸಿದನು (ಯೋಹಾನ 3:16).

## ಕ್ರಿಸ್ತನಿಂದ ಶುದ್ಧರಾದೆವು (10:11-18)

ಪ್ರಾಣಿಗಳ ಯಜ್ಞಗಳಲ್ಲಿನ ಕೊರತೆಯನ್ನು ಒತ್ತಿ ಹೇಳಿದವನಾಗಿ, ಲೇಖಕನು ಮುಂದೆ ಕ್ರಿಸ್ತನ ಯಜ್ಞದ ಪರಿಣಾಮಕಾರಿತ್ವವನ್ನು ತೋರಿಸಿ ಕೊಡುತ್ತಾನೆ. ಕ್ರಿಸ್ತನು ತನ್ನ ಯಜ್ಞವನ್ನು ಅಂತಿಮಗೊಳಿಸಿದಾಗ ಆತನು ಈಗ ಉನ್ನತಕ್ಕೇರಿಸಲ್ಪಟ್ಟಿದ್ದಾನೆಂಬುದನ್ನು (ವಚನಗಳು 11–14) ಮತ್ತು ಪವಿತ್ರಾತ್ಮನ ಸಾಕ್ಷಿಯನ್ನು ತೋರ್ಪಡಿಸುತ್ತಾನೆ (ವಚನಗಳು 15–18).[31]

ವಾಸ್ತವದಲ್ಲಿ ಕ್ರಿಸ್ತನು ನಮಗೋಸ್ಕರ ಏನು ಮಾಡಿದನು? ಆತನ ಮರಣವು ಹೇಗೆ ನ್ಯಾಯದ ಬೇಡಿಕೆಗಳನ್ನು ತೃಪ್ತಿಪಡಿಸಿತು ಮತ್ತು ನಮ್ಮನ್ನು ಶುದ್ಧೀಕರಣಕ್ಕೆ ಕರೆ ತಂದಿತು? ಇಬ್ರಿಯ 10:11–18 ವಚನಗಳು ಈ ಪ್ರಶ್ನೆಗಳಿಗೆ ಉತ್ತರಿಸುತ್ತವೆ.

### ಕ್ರಿಸ್ತನು, ನಮ್ಮ ಆಸೀನನಾಗಿರುವ ಕರ್ತನು (10:11, 12)

**11ಇದಲ್ಲದೆ ಯಾಜಕರೆಲ್ಲರು ದಿನಾಲು ಸೇವೆ ಮಾಡುತ್ತಾ ಎಂದಿಗೂ ಪಾಪನಿವಾರಣೆ ಮಾಡಲಾರದಂಥ ಒಂದೇ ವಿಧವಾದ ಯಜ್ಞಗಳನ್ನು ಪದೇ ಪದೇ ಸಮರ್ಪಿಸುತ್ತಾ ನಿಂತುಕೊಂಡಿರುವರು. 12ಆದರೆ ಈ ಯಾಜಕನು ಪಾಪನಿವಾರಣೆಗೋಸ್ಕರ ನಿರಂತರವಾಗಿ ನಿಲ್ಲುವ ಒಂದೇ ಯಜ್ಞವನ್ನು ಸಮರ್ಪಿಸಿ ದೇವರ ಬಲಗಡೆಯಲ್ಲಿ ಕೂತುಕೊಂಡನು.**

**ವಚನಗಳು 11, 12.** ಮೊಟ್ಟ ಮೊದಲನೆಯದಾಗಿ, ನಾವು ಯೇಸುವನ್ನು ನಮ್ಮ ಆಸೀನನಾಗಿರುವ ರಕ್ಷಕನನ್ನಾಗಿ ಕಾಣುತ್ತೇವೆ. 11ನೇ ವಚನವು **ಯಾಜಕರೆಲ್ಲರು ದಿನಾಲು ಸೇವೆ ಮಾಡುತ್ತಾ . . . ನಿಂತುಕೊಂಡಿರುವರು** ಎಂದು ಹೇಳುತ್ತದೆ. ಯಾಜಕರು ದೇವದರ್ಶನ ಗುಡಾರ ಅಥವಾ ದೇವಾಲಯದಲ್ಲಿ ಎಂದಿಗೂ ಆರಾಮದಾಯಕ ಭಾವನೆಯಿಂದಿರಲು ಸಾಧ್ಯವಿರಲಿಲ್ಲ; ಅವರು ಯಾವಾಗಲೂ ನಿಂತುಕೊಂಡೇ ಇರಬೇಕಿತ್ತು. ನಿಂತುಕೊಂಡಿರುವದು ಹಳೆಯ

ವ್ಯವಸ್ಥೆಯ ಅಡಿಯಲ್ಲಿ ಪಾಪಪ್ರಾಯಶ್ಚಿತ್ತದ ಕೆಲಸವು ಎಂದಿಗೂ ಪೂರ್ತಿಗೊಂಡಿರಲಿಲ್ಲ ಎಂಬುದನ್ನು ತೋರಿಸುತ್ತದೆ. ಅದಕ್ಕೆ ತದ್ವಿರುದ್ಧವಾಗಿ, ಯೇಸು ತನ್ನ ಯಜ್ಞದ ಕೆಲಸವನ್ನು ಪೂರ್ತಿಗೊಳಿಸಿ ಮಹಿಮೆಯೊಂದಿಗೆ ಕೂತುಕೊಂಡಿರುತ್ತಾನೆ. "ಒಬ್ಬ ಆಸೀನನಾಗಿರುವ ಯಾಜಕನು ಒಂದು ಪೂರ್ತಿಗೊಂಡ ಕೆಲಸ ಹಾಗೂ ಅಂಗೀಕರಿಸಲ್ಪಟ್ಟ ಯಜ್ಞಕ್ಕೆ ಖಾತ್ರಿಯಾಗಿರುತ್ತಾನೆ."[32] ಕ್ರಿಸ್ತನು **ದೇವರ ಬಲಗಡೆಯಲ್ಲಿ** ಕೂತುಕೊಂಡಿರುವ ಯೋಚನೆಯು ಹೊಸ ಒಡಂಬಡಿಕೆಯ ಪ್ರಧಾನ ಯೋಚನೆಯಾಗಿರುತ್ತದೆ ಮತ್ತು ಯೆಹೂದ್ಯರನ್ನು ಪರಿವರ್ತನೆಗೊಳಿಸುವದರಲ್ಲಿ ಸಹಾಯಕವಾಗಿತ್ತು. ಅದು ಸಾಮಾನ್ಯವಾಗಿ "ಕರ್ತನು ನನ್ನ ಕರ್ತನಿಗೆ ಹೇಳಿದನು" ಎಂಬ ಪದಗುಚ್ಛದ ಜೊತೆಯಲ್ಲಿ ಮುಂದಿಡಲ್ಪಡುತ್ತದೆ (ಅಪೊಸ್ತಲರ ಕೃತ್ಯಗಳು 2:34-36; ನೋಡಿರಿ ಕೀರ್ತನೆ 110:1).

ಹಳೆಯ ಯಾಜಜಕತ್ವದಿಂದ **ಒಂದೇ ವಿಧವಾದ ಯಜ್ಞವನ್ನು** ನಿರಂತರವಾಗಿ ಅರ್ಪಿಸುವದು ಕೇವಲ ಒಂದು "ಸೊನ್ನೆಗಳ ಮಾಲೆ"[33] ಆಗಿತ್ತು. "ಒಂದೇ ವಿಧವಾದ ಯಜ್ಞ" ಎಂಬುದರ ಮೇಲೆ ಒತ್ತು ಕೊಟ್ಟಿರುವದು ಪ್ರತಿ ದಿನವೂ ಸಂಸ್ಕಾರಿಕವಾದ ಯಜ್ಞಗಳನ್ನು ಸಮರ್ಪಿಸಬೇಕಾಗಿತ್ತೆಂಬುದನ್ನು ಎತ್ತಿ ತೋರಿಸುತ್ತದೆ. ಧರ್ಮಶಾಸ್ತ್ರದ ಅಡಿಯಲ್ಲಿ ಯಾಜಕತ್ವದ ಕೆಲಸವು ಎಷ್ಟು ಎಡೆಬಿಡದೆ ಇರುತ್ತಿತ್ತೆಂದರೆ ಅನೇಕ ಯಾಜಕರು ಒಬ್ಬರಾದ ಮೇಲೊಬ್ಬರು ಅವರ ಕೆಲಸವನ್ನು ವಹಿಸಿಕೊಂಡು ಮುಂದುವರೆಸಬೇಕಾಗಿತ್ತು. ಪ್ರಥಮ ಶತಮಾನದಲ್ಲಿನ ಅನ್ಯಜನಾಂಗದ ನಿಗೂಢ ಧರ್ಮಗಳು ತಮ್ಮ ದೇವರುಗಳಿಗೆ ನಿರಂತರವಾಗಿ "ಯಜ್ಞಗಳನ್ನು" ಸಮರ್ಪಿಸುತ್ತಿದ್ದವು, ಆದರೆ ಕ್ರೈಸ್ತತ್ವವು ಮಾತ್ರವೇ ಒಂದೇ ಸಾರಿ ಸಮರ್ಪಿಸಲ್ಪಟ್ಟ ಯಜ್ಞವನ್ನು ಹೊಂದಿದ್ದು ಅದು ನಮ್ಮನ್ನು **ನಿರಂತರವಾಗಿ ನಿಲ್ಲುವ** ಹಾಗೆ ನಮ್ಮನ್ನು ಪಾಪದಿಂದ ರಕ್ಷಿಸುವದು. ರಕ್ಷಣೆಗಾಗಿರುವ ಇಡೀ ಲೋಕದ ಬಯಕೆಗಳನ್ನು ಪೂರೈಸುವಂತಹ ಒಂದೇ ಸಾರಿ ಸಮರ್ಪಿಸುವ ಘಟನೆಯನ್ನು ಇತಿಹಾಸದಲ್ಲಿ ಕ್ರೈಸ್ತತ್ವವು ಮಾತ್ರವೇ ಹೊಂದಿದೆ. ಯಾವ ಯಾಕನೂ ಅಲ್ಲ ಆದರೆ ಕ್ರಿಸ್ತನೇ ಕೂತುಕೊಳ್ಳಲು ಶಕ್ತನಾದನು, ತನ್ನ ಕೆಲಸವನ್ನು ಸಂಪೂರ್ಣವಾಗಿ ಮಾಡಿ ಮುಗಿಸಿದ್ದಾನೆ (ವ. 12). ನಮ್ಮ ವಿಮೋಚನೆಯನ್ನು ಸಂಪಾದಿಸಿಕೊಳ್ಳುವ ಯೇಸುವಿನ ಕೆಲಸವು ಪೂರ್ತಿಗೊಂಡಿದೆ.

## ಕ್ರಿಸ್ತನು, ನಮ್ಮ ಕಾಯುತ್ತಿರುವ ಕರ್ತನು (10:13, 14)

**13ಅಂದಿನಿಂದ ತನ್ನ ವಿರೋಧಿಗಳು ತನ್ನ ಪಾದಪೀಠವಾಗಿ ಹಾಕಲ್ಪಡುವ ತನಕ ಆತನು ಕಾದಿರುವನು. 14ಪವಿತ್ರರಾಗುತ್ತಿರುವವರನ್ನು ಒಂದೇ ಸಮರ್ಪಣೆಯಿಂದ ನಿರಂತರವಾಗಿ ಸಿದ್ಧಿಗೆ ತಂದಿದ್ದಾನಷ್ಟೆ.**

**ವಚನ 13.** ಎರಡನೆಯದಾಗಿ, ನಾವು ಯೇಸುವನ್ನು ನಮ್ಮ ಕಾಯುತ್ತಿರುವ ಕರ್ತನನ್ನಾಗಿ ಕಾಣುತ್ತೇವೆ. ಆತನು **ತನ್ನ ವಿರೋಧಿಗಳು ತನ್ನ ಪಾದಪೀಠವಾಗಿ ಹಾಕಲ್ಪಡುವ ತನಕ ಕಾದಿರುವನು.** ಇಲ್ಲಿ ನಾವು ಕೀರ್ತನೆ 110ರಿಂದ ಮತ್ತೊಂದು ಉಲ್ಲೇಖನವನ್ನು ಹೊಂದಿದ್ದೇವೆ (ವ. 1). 5 ಮತ್ತು 7 ಅಧ್ಯಾಯಗಳಲ್ಲಿ ಕೀರ್ತನೆಯು ಪದೇ ಪದೇ ಬಳಸಲ್ಪಟ್ಟಿರುತ್ತದೆ. ಈ ವಾಕ್ಯಭಾಗದ ಕುರಿತು ಹೆಚ್ಚಿನ ಹೇಳಿಕೆಗಳನ್ನು ಪೌಲನು 1 ಕೊರಿಂಥ 15ನೇ ಅಧ್ಯಾಯದಲ್ಲಿ ನೀಡುತ್ತಾನೆ. ಕ್ರಿಸ್ತನು ತನ್ನ ಒಂದೇ ಶ್ರೇಷ್ಠ ಯಜ್ಞವನ್ನು ಮಾಡಿದವನಾಗಿ, ಈಗ ಅಂತ್ಯಕಾಲದ ತನಕ ಕಾಯುತ್ತಿದ್ದಾನೆ, ಆಗ ಆತನು ರಾಜ್ಯವನ್ನು ತಂದೆಯ ಕೈಗೆ ಪುನಃ ಒಪ್ಪಿಸುವನು. ಇದು ಕಡೇ ವೈರಿಯು ಮರಣ – ಪುನರುತ್ಥಾನದಲ್ಲಿ ನಾಶಗೊಳಿಸಲ್ಪಟ್ಟ ಮೇಲೆ ಸಂಭವಿಸುವದು. ಯೇಸುವಿನ

ಪುನರಾಗಮನದ ವೇಳೆ, ಪುನರುತ್ಥಾನವು ಸಂಭವಿಸಿದಾಗ, ಆತನು ತನ್ನ ರಾಜ್ಯಭಾರವನ್ನು ತಂದೆಗೆ ಪುನಃ ಒಪ್ಪಿಸುವನು (1 ಕೊರಿಂಥ 15:23-28). ಇದು ಆತನು ಹಿಂದಿರುಗಿ ಬಂದಾಗ ಒಂದು ಆಳ್ವಿಕೆಯನ್ನು ಆರಂಭಿಸುತ್ತಾನೆಂಬ ಯೋಚನೆಗೆ ನೇರವಾಗಿ ವಿರೋಧದಲ್ಲಿರುತ್ತದೆ.

ಭೂಮಿಯು ಅಂತಿಮ ದಿನದ ಕಡೆಗೆ ಸಾಗುತ್ತಿದ್ದು ಆ ದಿನದಲ್ಲಿ ಕ್ರಿಸ್ತನು ನಮಗಿರುವ ಪ್ರತಿಯೊಬ್ಬ ವೈರಿಯ ಮೇಲೆ ಜಯಗೊಳ್ಳುವನು. ಕಡೆಯದಾಗಿ ಮರಣವು ನಿರ್ಮೂಲಗೊಳಿಸಲ್ಪಡುವದು (1 ಕೊರಿಂಥ 15:26). ಕ್ರಿಸ್ತನು ಬರುವಾಗ, ಅಂತ್ಯವು ಸಂಭವಿಸುವದು, ಯಾಕೆಂದರೆ ಆತನ ಬರೋಣವು "ಕಡೇ ದಿನದಲ್ಲಿ" ಇರುವದು (ಯೋಹಾನ 6:39, 44). ಆ ದಿನದಂದು ಸತ್ತಿರುವ ನೀತಿವಂತರು ಮತ್ತು ಅನೀತಿವಂತರು ಇಬ್ಬರೂ ಎಬ್ಬಿಸಲ್ಪಡುವರು (ಯೋಹಾನ 5:28, 29). ಇದರಿಂದ ಅದು ಅಂತಿಮ ನ್ಯಾಯತೀರ್ಪನ ಕಾಲವಾಗಿರುವದೆಂಬುದನ್ನು ಪರೋಕ್ಷವಾಗಿ ಸೂಚಿತವಾಗುತ್ತದೆ, ಅದು ಸತ್ತವರಿಗೆ ಪುನರುತ್ಥಾನವಾಗುವ ವೇಳೆ ಸಂಭವಿಸುವದು.

**ವಚನ 14. ಒಂದೇ ಯಜ್ಞ** ಸಾಕು ಎಂಬ ಯೋಚನೆಯು ಪುನರಾವರ್ತಿಸಲ್ಪಟ್ಟಿದೆ. ಕ್ರಿಸ್ತನು ಮಾಡಿದ ಕಾರ್ಯದ ಮೂಲಕ, ವಿಶ್ವಾಸಿಗಳು **ಪವಿತ್ರರಾಗುತ್ತಿರುವರು**. Ἁγιάζω (*hagiazō*) ಎಂಬದರಿಂದ ಅನುವಾದಿಸಲ್ಪಟ್ಟಿದ್ದು, "ಪವಿತ್ರಗೊಳಿಸು" ಎಂಬುದರ ಅರ್ಥವು "ಶುದ್ಧೀಕರಿಸು" ಅಥವಾ "ಒಂದು ಪವಿತ್ರ ಉದ್ದೇಶಕ್ಕಾಗಿ ಪ್ರತಿಷ್ಠೆಗೊಳಿಸು" ಎಂದಾಗಿದೆ.[34] ಈ ಪ್ರಕ್ರಿಯೆಯು ಕ್ರಿಸ್ತನನ್ನು ಧರಿಸಿಕೊಂಡಿರುವವರೆಲ್ಲರಿಗೆ ಅನ್ವಯಿಸಲ್ಪಟ್ಟಿದೆ (ಗಲಾತ್ಯ 3:26, 27). ಅವರು ಹೊಸ ಜೀವನದಲ್ಲಿ (ಕೊಲೊಸ್ಸೆ 2:12; 3:1), ಒಂದು ಪರಿಶುದ್ಧ ಜೀವತದಲ್ಲಿ (1 ಥೆಸಲೋನಿಕ 4:1-8) ನಡೆಯುವದಕ್ಕಾಗಿ ಎಬ್ಬಿಸಲ್ಪಟ್ಟಿದ್ದಾರೆ. ನಾವು ಈ ವಿಧದಲ್ಲಿ ಜೀವಿಸುವ ಹಂಗಿನಲ್ಲಿದ್ದೇವೆ ಯಾಕೆಂದರೆ ನಾವು ಕ್ರಿಸ್ತನಿಂದ ಪವಿತ್ರಗೊಳಿಸಲ್ಪಟ್ಟಿರುತ್ತೇವೆ. ಯೇಸು ತನ್ನ ಅಪೊಸ್ತಲರನ್ನು ಸೇವೆಗಾಗಿ ಪ್ರತಿಷ್ಠೆಗೊಳಿಸಿ ಬಹಳ ಕಾಲದ ಬಳಿಕ, ಆತನು ಅವರಿಗೆ ನಿರಂತರವಾಗಿ ಪವಿತ್ರಗೊಳ್ಳುವಿಕೆಯು ನಡೆಯಬೇಕೆಂದು ಪ್ರಾರ್ಥನೆ ಮಾಡಿದನು (ಯೋಹಾನ 17:17). ಆತನಲ್ಲಿ ನಾವು ಈ ಶುದ್ಧೀಕರಣವನ್ನು ಸಾಧಿಸಿಕೊಳ್ಳುತ್ತೇವೆ, ಅದು "ಧರ್ಮಶಾಸ್ತ್ರಕ್ಕೆ ಕೊಡುವದಕ್ಕೆ ಎಂದಿಗೂ ಸಾಧ್ಯವಾಗದಂತಹ ಮನಸ್ಸಿನ ಸಮಾಧಾನವನ್ನು ಉಂಟು ಮಾಡುತ್ತದೆ."[35] ಒಂದು ದಿನ ನಾವು ವಿಮೋಚಿಸಲ್ಪಟ್ಟ ಲಕ್ಷಾಂತರ ಜನರನ್ನು ಕೂಡಿಕೊಳ್ಳುವೆವು.

"ಪವಿತ್ರರಾಗುವದು" ಎಂದರೆ **ಸಿದ್ಧಿಗೆ** ತರಲ್ಪಡುವದು ಎಂದರ್ಥವಾಗಿದೆ (τελειόω, *teleioō*; ನೋಡಿರಿ 2:10; 7:11, 19, 28; 10:1). ಶುದ್ಧೀಕರಣವು ಸಭೆಯ ಸದಸ್ಯರಿಗೆ ಒದಗಿಸಲ್ಪಡುತ್ತದೆ ಮತ್ತು ವಾಕ್ಯದ ಮೂಲಕ ಸಾಧಿಸಲ್ಪಡುವದು (ಯೋಹಾನ 17:17). ಅಲ್ಲದೆ ಅದು "ಜಲ ಸ್ನಾನದಿಂದ" ಸಹ ಬರುತ್ತದೆ (ಎಫೆಸ 5:25, 26; ನೋಡಿರಿ ಇಬ್ರಿಯ 10:22). ನಮ್ಮ ಶುದ್ಧೀಕರಣಕ್ಕೆ ಎರಡೂ ವಸ್ತುಗಳು ಅವಶ್ಯಕವಾಗಿರುತ್ತವೆ.

## ಕ್ರಿಸ್ತನು, ನಮ್ಮ ಸಂಪೂರ್ಣ ಪಾಪಪ್ರಾಯಶ್ಚಿತ್ತ (10:15-18)

**15ಪವಿತ್ರಾತ್ಮನು ಸಹ ನಮಗೆ ಸಾಕ್ಷಿಕೊಡುವವನಾಗಿ –**

**16ಆ ದಿನಗಳು ಬಂದ ಮೇಲೆ ನಾನು ಅವರ ಸಂಗಡ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವದು –**
**ನನ್ನ ಆಜ್ಞೆಗಳನ್ನು ಅವರ ಹೃದಯದಲ್ಲಿ ಇಡು ವೆನು,**
**ಅವರ ಮನಸ್ಸಿನ ಮೇಲೆ ಅವುಗಳನ್ನು ಬರೆ ಯುವೆನು**
**ಎಂದು ಕರ್ತನು ನುಡಿಯುತ್ತಾನೆ**

**ಎಂಬುದಾಗಿ ಹೇಳಿದ ಮೇಲೆ ಇನ್ನು –**

**[17]ಅವರ ಪಾಪಗಳನ್ನೂ ಅವರ ದುಷ್ಕೃತ್ಯ**

**ಗಳನ್ನೂ ನನ್ನ ನೆನಪಿಗೆ ಎಂದಿಗೂ ತರುವದಿಲ್ಲ ಎಂದು ಹೇಳುತ್ತಾನೆ. [18]ಪಾಪಗಳು ಪರಿಹಾರವಾದಲ್ಲಿ ಇನ್ನೂ ಅವುಗಳ ವಿಷಯದಲ್ಲಿ ಸಮರ್ಪಣೆಮಾಡುವದು ಅವಶ್ಯವಿಲ್ಲ.**

ಮೂರನೆಯದಾಗಿ, ಎಲ್ಲಕ್ಕಿಂತಲೂ ಶ್ರೇಷ್ಠ ಸುದ್ದಿಯು ಏನೆಂದರೆ, ನಾವು ಕ್ರಿಸ್ತನನ್ನು ನಮ್ಮ ಪೂರ್ಣ ಪಾಪ ಪ್ರಾಯಶ್ಚಿತ್ತವಾಗಿ ಕಾಣುತ್ತೇವೆ (ವಚನಗಳು 15-18). ಒಬ್ಬ ಬೋಧಕನು ಮಾಡಬಹುದಾದ ರೀತಿಯಲ್ಲಿಯೇ, ಲೇಖಕನು ಪ್ರಧಾನ ವಾಕ್ಯಕ್ಕೆ ಹಿಂದಿರುಗುತ್ತಾನೆ, ತನ್ನ ವಾಚಕರಿಗೆ ಅದನ್ನು ಜ್ಞಾಪಿಸುವದಕ್ಕಾಗಿ ಮತ್ತು ತನ್ನ ಪ್ರಾಥಮಿಕ ಸಂದೇಶವನ್ನು ಒತ್ತಿ ಹೇಳುವದಕ್ಕಾಗಿ ಅದರಿಂದ ಸಾಕಷ್ಟು ಉಲ್ಲೇಖನಗಳನ್ನು ಮಾಡುತ್ತಾನೆ. ಉಲ್ಲೇಖಿಸಲ್ಪಟ್ಟ ವಾಕ್ಯಭಾಗವು ಯೆರೆಮೀಯ 31:31-34ರಿಂದಾಗಿದೆ ಮತ್ತು ಅದು ಪವಿತ್ರಾತ್ಮನಿಂದ ಬಂದದ್ದೆಂದು ಹೇಳಲಾಗಿರುತ್ತದೆ. ನಿರ್ದಿಷ್ಟವಾಗಿ ಒಂದು "ಹೊಸ ಒಡಂಬಡಿಕೆ"ಯ ಕಡೆಗೆ ಬೆರಳು ತೋರಿಸುವ ಹಳೆಯ ಒಡಂಬಡಿಕೆಯ ಏಕೈಕ ವಾಕ್ಯಭಾಗವು ಇದಾಗಿರುತ್ತದೆ. ಇದು ವಿಶೇಷವಾಗಿ ಕ್ರೈಸ್ತ ಯುಗಕ್ಕಾಗಿ ಬರೆಯಲ್ಪಟ್ಟಿದ್ದೆಂದು ಲೇಖಕನು ಸೂಚಿಸುತ್ತಾನೆ, ಪೌಲನು 1 ಕೊರಿಂಥ 10:6, 11ರಲ್ಲಿ ಹೇಳಿದ ಅದೇ ಯೋಚನೆಯನ್ನು ಒತ್ತಿ ಹೇಳುತ್ತಾನೆ, ಹಳೆಯ ಒಡಂಬಡಿಕೆಯ ಕಟ್ಟಳೆಗಳ ನಿರ್ಬಂಧವು ನಮ್ಮ ಮೇಲೆ ಇಲ್ಲವಾದಾಗ್ಯೂ ಹಳೆಯ ಒಡಂಬಡಿಕೆಯು ನಿರ್ದಿಷ್ಟವಾಗಿ ನಮಗೆ ಬರೆಯಲ್ಪಟ್ಟಿವೆ ಎಂಬಂತೆ ಅದನ್ನು ನಾವು ಓದುವ ಅಗತ್ಯವಿರುತ್ತದೆ. ವಿಧೇಯತೆಯು ಅಗತ್ಯವೆಂದು ದೇವರು ಕೇಳುವ ಆತನ ಪ್ರಾಥಮಿಕ ತತ್ವಗಳು ಎಂದಿಗೂ ಬದಲಾಗುವದಿಲ್ಲ. ಧರ್ಮಶಾಸ್ತ್ರವು ಅನ್ಯಜನಾಂಗದವರನ್ನು ಸಹ ಕ್ರಿಸ್ತನ ಬಳಿಗೆ ಕರೆ ತಂದಿತೆಂಬುದನ್ನು ನೆನಪಿಸಿಕೊಳ್ಳಿರಿ. (ನೋಡಿರಿ ಗಲಾತ್ಯ 3:24; ಬಹುಪಾಲು ಗಲಾತ್ಯದವರು ಅನ್ಯಜನಾಂಗದವರಾಗಿದ್ದರೆಂದು ನಾವು ಊಹಿಸಿಕೊಳ್ಳಬಹುದು.)

**ವಚನಗಳು 15, 16. ಪವಿತ್ರಾತ್ಮನು ನಮಗೆ ಸಾಕ್ಷಿಕೊಡುವವನಾಗಿದ್ದಾನೆ** (μαρτυρέω, *martureō*), ಅಥವಾ "ಸಾಕ್ಷಿಯಾಗುತ್ತಾನೆ." 8:8ರಲ್ಲಿ ಲೇಖಕನು ಮಾತಾಡುತ್ತಿರುವವನು ದೇವರೆಂಬ ಸುಳಿವು ನೀಡುತ್ತಾನೆ, ಆದರೆ ಅರ್ಥದಲ್ಲಿ ನಿಜವಾದ ಭೇದವು ಇರುವದಿಲ್ಲ. ಶಾಸ್ತ್ರಗಳೆಲ್ಲವೂ "ದೈವಪ್ರೇರಿತ" ಆಗಿರುತ್ತವೆ, ಪವಿತ್ರಾತ್ಮನಿಂದ "ಪ್ರೇರಿತ" ವಾಗಿವೆ (2 ತಿಮೊಥೆ 3:16, 17).

ಇಲ್ಲಿರುವ ಉಲ್ಲೇಖನವು 8:8-12ರಲ್ಲಿರುವ ಪ್ರಕಾರವೇ ಇರುವದಿಲ್ಲ, ಆದರೆ ಅದು ಅದೇ ಸತ್ಯವನ್ನು ಒಳಗೊಂಡಿರುತ್ತದೆ. ಲೇಖಕನು ಪ್ರಸಂಗಶಾಸ್ತ್ರದ ದಾರಿಯನ್ನು ಅನುಸರಿಸುತ್ತಾನೆ, ಹಳೆಯ ಒಡಂಬಡಿಕೆಯ ವಾಕ್ಯವನ್ನು ಬೇರೆ ಪದಗಳಲ್ಲಿ ಹೇಳುತ್ತಾನೆ ಮತ್ತು ಉಪದೇಶಗಳನ್ನು ಇನ್ನಷ್ಟು ಸರಳ ಹಾಗೂ ಹೆಚ್ಚು ಒತ್ತು ಕೊಟ್ಟು ಹೇಳುವದಕ್ಕೆ ಅದರ ಮೇಲೆ ವಿವರಣೆಯನ್ನು ಕೊಡುತ್ತಾನೆ. Hughes ಹೀಗೆ ಬರೆದನು,

> ಈ ಉಲ್ಲೇಖನವು ಯೆರೆಮೀಯ 31:33ರಿಂದ ನಂತರದ ವಚನಗಳಲ್ಲಿರುವ ಪ್ರತಿಯೊಂದು ಮಾತಿನಂತೆಯೇ ಇರುವದಿಲ್ಲ ಎಂಬ ವಾಸ್ತವಾಂಶವು ಪದಗಳ ಅರ್ಥವು ಪ್ರಾಥಮಿಕವಾಗಿ ಪ್ರಾಮುಖ್ಯವೇ ಹೊರತು ಪ್ರತಿಯೊಂದು ಪದದಂತೆಯೇ ಅಂಧಾನುಕರಣೆ ಅಲ್ಲ ಎಂಬುದನ್ನು ತೋರ್ಪಡಿಸುತ್ತದೆ (ಖಂಡಿತವಾಗಿಯೂ ಒಂದು ಭಾವಶೂನ್ಯ ಸಾಹಿತ್ಯಕರಣವು ನ್ಯಾಯಸಮ್ಮತೆಯನ್ನು ತಳ್ಳ ಹಾಕುತ್ತದೆ ಮತ್ತು ಅನುವಾದ ಮತ್ತು ಸ್ಪಷ್ಟೀಕರಣದ ಸಾಧ್ಯತೆಯನ್ನು ಸಹ ತಳ್ಳಿ ಹಾಕುತ್ತದೆ) . . . ಅದರ ಹಿಂದೆಯೇ ಪವಿತ್ರಾತ್ಮನೇ . . . ಸ್ವತಃ ತಾನು ಮೂಲವಾಗಿರುವ ಸತ್ಯದ ಅರ್ಥಮಾಡಿಕೊಳ್ಳುವಿಕೆ ಮತ್ತು ಅನ್ವಯಿಸಿಕೊಳ್ಳುವಿಕೆ ಬಗ್ಗೆ

ಕಳಕಳಿಯನ್ನು ಹೊಂದಿರುತ್ತಾನೆ.[36]

ಬೇರೆ ರೀತಿಯಲ್ಲಿ ಹೇಳುವದು ಮತ್ತು ವಿವರಣೆ ನೀಡುವದು ಇಬ್ರಿಯರಿಗೆ ಪತ್ರಿಕೆಯಲ್ಲಿ ಆಗಾಗ್ಗೆ ಕಂಡು ಬರುತ್ತವೆ. ಉಲ್ಲೇಖನದಲ್ಲಿರುವ ಅಲ್ಪಸ್ವಲ್ಪವಾದ ವ್ಯತ್ಯಾಸಗಳು ಈ ವಾಕ್ಯಭಾಗವು ಅಥವಾ ಬೇರೆ ಯಾವದೇ ಶಾಸ್ತ್ರಗಳು ಪವಿತ್ರಾತ್ಮನಿಂದ ಪೂರ್ಣವಾಗಿ ಪ್ರೇರಿತವಾಗಿವೆ ಎಂಬುದನ್ನು ನಿರಾಕರಿಸುವದಿಲ್ಲ.

ಪವಿತ್ರಾತ್ಮನು ಸಾಕ್ಷಿಯನ್ನು ಕೊಡುವದು ದೇವರ ವಾಕ್ಯದಲ್ಲಿ ಮತ್ತು ಮೂಲಕ ಮಾಡಲ್ಪಡುತ್ತದೆ. ಪ್ರವಾದಿಗಳಿಂದ ಮತ್ತು ಇತರ ಪ್ರೇರಿತ ಮನುಷ್ಯರಿಂದ ಬರೆಯಲ್ಪಟ್ಟಂಥದ್ದು ಈಗ ಶಾಸ್ತ್ರಗಳಲ್ಲಿ ಸಿಕ್ಕುತ್ತದೆ. ಆದುದರಿಂದ, ಒಬ್ಬ ಪ್ರೇರಿತ ಮನುಷ್ಯನು ಹಳೆಯ ಒಡಂಬಡಿಕೆಯನ್ನು ಓದಿ ವ್ಯಾಖ್ಯಾನವನ್ನು ಮಾಡಿದಾಗ, ನಮ್ಮ ಮುಂದೆ ಉಲ್ಲೇಖಿಸಲ್ಪಟ್ಟ ಮೂಲ ವಾಕ್ಯದಷ್ಟೇ ಪೂರ್ಣ ಅಧಿಕಾರಯುತವಾದ ವಿವರಣೆಯು ಇರುತ್ತದೆ. ಪ್ರವಾದಿಗಳು (1) ದೇವರಿಂದ ಪ್ರೇರಿತರಾಗಿ ಮತ್ತು ಆತನಿಂದ ಪಡೆದ ಅಧಿಕಾರದಿಂದ ಬರೆದರು ಮತ್ತು (2) ನಾವು ಆತನ ವಾಕ್ಯವನ್ನು ಈಗಿನ ಅನುವಾದದಲ್ಲಿ ಓದಬಲ್ಲೆವು (2 ಪೇತ್ರ 1:20, 21) ಎಂಬುದು ಒಂದು ದೃಢವಾದ ಹೇಳಿಕೆಯಾಗಿದೆ.

ಯೆರೆಮೀಯನು ಬರಲಿದ್ದ "ಹೊಸ ಒಡಂಬಡಿಕೆ" ಯ ಕುರಿತು ಬರೆದನು (ಯೆರೆಮೀಯ 31:31-34), ಆದರೆ ಆತನು ತನ್ನ ಸ್ವಂತ ಮಾತುಗಳಿಗಿಂತ ಹೆಚ್ಚು ಅಧಿಕಾರ ಹೊಂದಿದ್ದನು ಯಾಕೆಂದರೆ ಆತನು ಪವಿತ್ರಾತ್ಮನಿಂದ ಪ್ರೇರಿತನಾಗಿದ್ದನು. ಈ ಹೊಸದು ಯೇಸುವು ಕೊಡಲ್ಪಟ್ಟ ಒಡಂಬಡಿಕೆಯಲ್ಲದೆ ಬೇರೆ ಇನ್ನಾವ ಒಡಂಬಡಿಕೆಯಾಗಿರಬಲ್ಲದು?

**ವಚನ 17.** ಹಳೆಯ ಮತ್ತು ಹೊಸ ಒಡಂಬಡಿಕೆಗಳ ನಡುವಿನ ವಿರುದ್ಧ ಹೋಲಿಕೆಯ ಪ್ರಮುಖ ಅಂಶವು ಏನೆಂದರೆ ಹೊಸ ಒಡಂಬಡಿಕೆಯಲ್ಲಿ ಮತ್ತೊಮ್ಮೆ ಯಜ್ಞವನ್ನು ಸಮರ್ಪಿಸುವ ಯಾವದೇ ಅಗತ್ಯವಿಲ್ಲದೆ **ಪಾಪಗಳ** ಸಂಪೂರ್ಣ ಪರಿಹಾರವಾಗುವಿಕೆಯೇ ಆಗಿದೆ. ದೇವರು ತನ್ನ **ನೆನಪಿಗೆ ಎಂದಿಗೂ ತರದಿರುವ** ಸಾಮರ್ಥ್ಯ ಹೊಂದಿದ್ದಾನೆ. ಯೇಸುವಿನ ಮರಣದ ಕಾರಣದಿಂದ ದೇವರು ನಮ್ಮನ್ನು ಕ್ಷಮಿಸುವದರಲ್ಲಿ ಪೂರ್ಣ ನ್ಯಾಯವಂತನಾಗಿ ಕಂಡಿರುವದರಿಂದ, ಯಾವದೇ ವಿಧವಾದ ಯಜ್ಞವನ್ನು ನಿರಂತರವಾಗಿ ಸಮರ್ಪಿಸಬೇಕೆಂಬುದು ಶಾಸ್ತ್ರಗಳಲ್ಲಿ ನಿರಾಧಾರವಾಗಿರುತ್ತದೆ. ಕ್ರಿಸ್ತನ ದೇಹವು ಒಂದು ಪವಿತ್ರಪೂಜೆಯಲ್ಲಿ (mass) ಅಥವಾ ಬೇರೆ ಯಾವದೇ ವಿಧವಾದ ಆರಾಧನೆಯಲ್ಲಿ ಸಮರ್ಪಿಸಲ್ಪಡುವದಕ್ಕೆ ಸಾಧ್ಯವಿಲ್ಲ ಯಾಕೆಂದರೆ ಅದು "ನಿರಂತರವಾಗಿ ನಿಲ್ಲುವ ಒಂದೇ" ಯಜ್ಞವಾಗಿ ಸಮರ್ಪಿಸಲ್ಪಟ್ಟಿರುತ್ತದೆ (ವ. 12) ಮತ್ತು ಸಂಪೂರ್ಣ ರಕ್ಷಣೆಯನ್ನು ಒದಗಿಸುತ್ತದೆ (9:26-28; 10:14).

**ವಚನ 18.** ದೇವರು ಪಾಪವನ್ನು "ನೆನಪಿಗೆ ಎಂದಿಗೂ ತರದಿರುವದು" **ಪಾಪಗಳ ಪರಿಹಾರ** ಎಂಬ ಯೋಚನೆಯಂತೆಯೇ ಇರುತ್ತದೆ (ಅಪೊಸ್ತಲರ ಕೃತ್ಯಗಳು 2:38). ಅದು ಈಗ ಕ್ರಿಸ್ತನಲ್ಲಿ ಸಾಧಿಸಲ್ಪಟ್ಟಿದೆ. ನಾವು ಅಂತಿಮ ನ್ಯಾಯತೀರ್ಪಿಗಾಗಿ ಕಾಯುವದರ ಅಗತ್ಯವಿಲ್ಲ; ನಾವು ಸುವಾರ್ತೆಗೆ ವಿಧೇಯರಾಗುವಾಗ ನಮ್ಮ ಪಾಪಗಳ ಕ್ಷಮಾಪಣೆಯನ್ನು ಹೊಂದುತ್ತೇವೆ. ಅದು ಸಾಧಿಸಲ್ಪಟ್ಟಿತೆಂದರೆ, **ಅವುಗಳ ವಿಷಯದಲ್ಲಿ ಸಮರ್ಪಣೆಮಾಡುವದು** ಅನಾವಶ್ಯಕವಾಗುತ್ತದೆ.

ಈ ವಾಕ್ಯಭಾಗದೊಂದಿಗೆ, ಪತ್ರಿಕೆಯ ಸಿದ್ಧಾಂತಿಕ ಭಾಗವು ಅಂತ್ಯಗೊಳ್ಳುತ್ತದೆ. ಪುಸ್ತಕರ ಉಳಿದ ಭಾಗವು ನಂಬಿಕೆಯ ಉದಾಹರಣೆಗಳು, ನಮ್ಮ ನಂಬಿಕೆಯನ್ನು ಪರಿಪೂರ್ಣಕ್ಕೆ ತರುವವನಾಗಿರುವ ಕ್ರಿಸ್ತನನ್ನು ಅನುಸರಿಸುವದು ಇವುಗಳ ಮೇಲೆ ಮುಖ್ಯ ಗಮನವನ್ನು ಹರಿಸುತ್ತದೆ.

## ದೇವರ ಬಳಿಗೆ ಹೋಗಲು ಶ್ರೇಷ್ಠವಾದ ದಾರಿ (10:19-39)

ಈ ವಾಕ್ಯಭಾಗದೊಂದಿಗೆ, ನಾವು "ಆರಾಧಿಸುವದಕ್ಕೆ ಸಿದ್ಧರಾಗೋಣ"[37] ಎಂದು ಕರೆಯಬಹುದಾದ ಒಂದು ವಿಭಾಗವನ್ನು ಆರಂಭಿಸುತ್ತೇವೆ. ಒಬ್ಬ ವ್ಯಾಖ್ಯಾನಕಾರನು ತನ್ನ 10:19–12:29ರ ಮೇಲಿನ ಚರ್ಚೆಗೆ "ಆರಾಧನೆಗೆ, ನಂಬಿಕೆಗೆ, ಮತ್ತು ಸ್ಥಿರಚಿತ್ತದಿಂದಿರುವದಕ್ಕೆ ಕರೆ"[38] ಎಂಬ ಶೀರ್ಷಿಕೆಯನ್ನು ಕೊಟ್ಟನು. ಇಬ್ರಿಯರಿಗೆ ಪತ್ರಿಕೆಯಲ್ಲಿನ ಸಿದ್ಧಾಂತಿಕ ಬೋಧನೆಗಳು ಈಗ ಬಹುತೇಕ ಮುಕ್ತಾಯವಾಗಿರುತ್ತವೆ, ಅದರ ಬಳಿಕ ಈಗ ನಂಬಿಕೆಯ ನಡೆಗಾಗಿ ಕಾರ್ಯರೂಪದ ಸಲಹೆಗಳು ಕೊಡಲ್ಪಡುತ್ತಿರುತ್ತವೆ. ಹೊಸ ಒಡಂಬಡಿಕೆಯು ಯಾವಾಗಲೂ ಕ್ರಿಯೆಗಳನ್ನು ಸಿದ್ಧಾಂತದೊಂದಿಗೆ ಸಂಬಂಧಗೊಳಿಸುತ್ತದೆ. ಸಿದ್ಧಾಂತವು ಏಕಾಂಗಿಯಾಗಿ ನಿಲ್ಲಲು ಸಾಧ್ಯವಿಲ್ಲ; ನಮ್ಮ ಸ್ವಂತ ಜೀವಿತಗಳಿಗಾಗಿ ಯೇಸುವಿನ ಬೋಧನೆಯ ಬೇಡಿಕೆಗಳನ್ನು ನೆರವೇರಿಸುವದಕ್ಕೆ ಮನಸ್ಸಿರತಕ್ಕದ್ದು. ಈ ಉತ್ತೇಜಕರವಾದ (ಹುರದುಂಭಿಸುವ) ವಿಭಾಗವು ಕ್ರಿಸ್ತನ ರಕ್ತದ ಪರಿಣಾಮಕಾರಿತ್ವ (9:11–28) ಮತ್ತು ಆತನ ಯಜ್ಞದ ಶಾಶ್ವತವಾದ ಶಕ್ತಿಯ ಮೇಲೆ ಆಧಾರವಾಗಿರುತ್ತದೆ (10:1–18).[39]

ಗ್ರೀಕ್ ವಾಕ್ಯವು 19ನೇ ವಚನದಿಂದ ಆರಂಭಗೊಂಡು 25ನೇ ವಚನದ ತನಕ ಮುಂದುವರೆಯುವ ಒಂದು ದೀರ್ಘವಾದ, ನಿರಂತರವಾದ ವಾಕ್ಯವನ್ನು ಹೊಂದಿರುತ್ತದೆ. 19ನೇ ವಚನವು "ಹೀಗಿರುವಲ್ಲಿ" ಎಂಬ ಮಾತಿನೊಂದಿಗೆ ಆರಂಭಗೊಳ್ಳುತ್ತದೆ, ಒಂದು ಬಲವಾದ ಪದವಾಗಿದ್ದು, 4:14; 9:1, 23ರಲ್ಲಿರುವಂತೆಯೇ ಒಂದು ವಿಭಾಗವೆಂದು ಸೂಚಿಸುತ್ತದೆ. "ಇದು ಒಂದು ಹೇಳಿಕೆಯಿಂದ ಒಂದು ಮನವಿಯಾಗಿ ಮಾರ್ಪಡುವಿಕೆ ಆಗಿರುತ್ತದೆ."[40] ಮೂರು ಸಾರಿ, 19 ರಿಂದ 21 ವಚನಗಳು "ಆದ್ದರಿಂದ" ಎಂಬ ಯೋಚನೆಯನ್ನೊಳಗೊಂಡಿವೆ. 19 ಮತ್ತು 21 ವಚನಗಳಲ್ಲಿ ಅದು ನಿರ್ದಿಷ್ಟವಾಗಿದ್ದರೆ, 20ನೇ ವಚನದಲ್ಲಿ ಅದು ಪರೋಕ್ಷವಾಗಿ ಸೂಚಿಸಲ್ಪಟ್ಟಿದೆ. ಇಲ್ಲಿರುವ ಯೋಚನೆಯು "ಒಂದು ಜೀವವುಳ್ಳ ಹೊಸ ದಾರಿ" ಯು ನಮಗೆ ಬಂದಿದೆ - ಮತ್ತು ಇದು ಸತ್ಯ "ಆದ್ದರಿಂದ," ನಾವು ಅದರ ಬಗ್ಗೆ ಏನಾದರೂ ಮಾಡತಕ್ಕದ್ದು ಎಂದಾಗಿರುತ್ತದೆ.

### ಧೈರ್ಯವುಂಟಾಗುವದಕ್ಕೆ ಕಾರಣ (10:19-25)

**19-20ಹೀಗಿರುವಲ್ಲಿ ಸಹೋದರರೇ, ಯೇಸು ನಮಗೋಸ್ಕರ ಪ್ರತಿಷ್ಠಿಸಿದ ಜೀವವುಳ್ಳ ಹೊಸ ದಾರಿಯಲ್ಲಿ ಆತನ ರಕ್ತದ ಮೂಲಕ ಆತನನ ಶರೀರವೆಂಬ ತೆರೆಯ ಮುಖಾಂತರ ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು. 21ದೇವರ ಮನೆಯ ಮೇಲೆ ಅಧಿಕಾರಿಯಾಗಿರುವ ಶ್ರೇಷ್ಠನಾದ ಮಹಾಯಾಜಕನು ನಮಗಿದ್ದಾನೆ. 22ಆದಕಾರಣ ನೀನಪರಾಧಿಯೆಂದು ನಮ್ಮ ಮನಸ್ಸು ನಮಗೆ ಸಾಕ್ಷಿಹೇಳದಂತೆ ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಯಥಾರ್ಥಹೃದಯವುಳ್ಳವರಾಗಿಯೂ ದೇವರ ಬಳಿಗೆ ಬರೋಣ. 23ನಮ್ಮ ನಿರೀಕ್ಷೆಯನ್ನು ಕುರಿತು ನಾವು ಮಾಡಿದ ಪ್ರತಿಜ್ಞೆಯನ್ನು ನಿಶ್ಚಂಲವಾಗಿ ಪರಿಗ್ರಹಿಸೋಣ; ವಾಗ್ದಾನ ಮಾಡಿದಾತನು ನಂಬಿಗಸ್ತನು, 24ನಾವು ಪರಸ್ಪರ ಹಿತಚಿಂತಕರಾಗಿದ್ದು ಪ್ರೀತಿಸುತ್ತಿರಬೇಕೆಂತಲೂ ಸತ್ಕಾರ್ಯ ಮಾಡಬೇಕಂತಲೂ ಒಬ್ಬರನ್ನೊಬ್ಬರು ಪ್ರೇರಿಪಿಸೋಣ. 25ಸಭೆಯಾಗಿ ಕೂಡಿಕೊಳ್ಳುವದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟು ಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ. ಕರ್ತನ ಪ್ರತ್ಯಕ್ಷತೆಯು ಸಮೀಪಿಸುತ್ತಾ ಬರುತ್ತದೆ ಎಂದು ನೀವು ನೋಡುವದರಿಂದ ಇದನ್ನು ಮತ್ತಷ್ಟು ಮಾಡಿರಿ.**

**ವಚನ 19-20.** ಮೊದಲನೆಯ "ಹೀಗಿರುವಲ್ಲಿ" ಎಂಬುದು **ಹೀಗಿರುವಲ್ಲಿ . . . ನಮಗೆ ಧೈರ್ಯವುಂಟಾಯಿತು**. ಇದು ಪಾಪಪರಿಹಾರದಿಂದಾದ ಧೈರ್ಯವಾಗಿರುತ್ತದೆ. ಈ ದಾರಿಯು ನಮಗಿರುತ್ತದೆಂಬ ಭರವಸ ನಮಗಿರುವದರಿಂದ, ನಾವು ಅದರಲ್ಲಿ ಪ್ರವೇಶಿಸಬೇಕು ಮತ್ತು ಜೀವಿಸಬೇಕು.

ಈ ಪತ್ರಿಕೆಯನ್ನು ಸ್ವೀಕರಿಸಿಕೊಂಡವರು **ಸಹೋದರರು** ಆಗಿದ್ದರು, ಅದು ಕ್ರಿಸ್ತನು ತನ್ನ ಹಿಂಬಾಲಕರಿಗಾಗಿ ಸಂಪಾದಿಸಿಕೊಂಡ ಶ್ರೇಷ್ಠ ಪ್ರಯೋಜನಗಳಲ್ಲಿ ಅವರ ಜೊತೆಯಾಗಿ ಪಾಲ್ಗೊಳ್ಳುವಿಕೆ, ಅಥವಾ ಅನ್ಯೋನ್ಯತೆಯನ್ನು ಸೂಚಿಸುತ್ತದೆ. ಸಹೋದರರಾಗಿ, ಅವರು "ಜೊತೆಗೆಲಸದವರು" ಅಥವಾ ದೇವರ "ಜೊತೆಯ ಕೆಲಸದವರು" ಆಗಿದ್ದರು (1 ಕೊರಿಂಥ 3:9; ನೋಡಿರಿ KJV). ಇಬ್ರಿಯರಿಗೆ ಪತ್ರಿಕೆಯಲ್ಲಿ ಒತ್ತಿ ಹೇಳಲಾಗಿರುವ ಆರಾಧನೆಯ ಹೊಸ ದಾರಿಯು "ಸಹೋದದರಿಗೆ," "ಪರಲೋಕದ ಕರೆಯುವಿಕೆಯಲ್ಲಿ ಪಾಲುಗಾರರು" (3:1)[41] ಆಗಿರುವವರಿಗೆ ಮಾತ್ರವೇ ತೆರೆದಿರುತ್ತದೆ. ಇದೊಂದು ಉದಾತ್ತ ಪದವಾಗಿದ್ದು ಅದರಿಂದ ಲೇಖಕನು ತನ್ನನ್ನು ವಾಚಕರೊಂದಿಗೆ ಗುರುತಿಸಿಕೊಂಡನು.

4:16ರಲ್ಲಿ ಸೂಚಿಸಲ್ಪಟ್ಟಿರುವ ಪ್ರಕಾರ, ಈಗ ನಾವು "ಧೈರ್ಯದಿಂದ" ದೇವರ ಸಮೀಪಕ್ಕೆ ಬರಬಹುದಾಗಿದೆ. ನಮಗೆ ಕ್ರಿಸ್ತನಲ್ಲಿರುವ "ಉತ್ತಮವಾದ" ನಿರೀಕ್ಷೆಯ ಕಾರಣದಿಂದ ಅಂಥ ಧೈರ್ಯವು ಸಾಧ್ಯವಿರುತ್ತದೆ (7:19). ನಮ್ಮ ಧೈರ್ಯ ಮತ್ತು ದೃಢವಿಶ್ವಾಸವು ನಾವು ಇಬ್ರಿಯರಿಗೆ ಪತ್ರಿಕೆಯಲ್ಲಿ ಕಲಿತಿರುವ ರೀತಿಯ ಜ್ಞಾನದಿಂದ ಪೂರ್ಣವಾಗಿ ಒದಗಿಸಲ್ಪಟ್ಟಿರುತ್ತದೆ. ದೇವರನ್ನು ಆರಾಧಿಸುವದಕ್ಕೆ ಆತನ ಸಮೀಪಕ್ಕೆ ಬರುವಾಗ ಕ್ಷಮಿಸಲ್ಪಟ್ಟಿರುವಂಥ ಜನರು ಹೆದರುವ ಅಗತ್ಯವಿಲ್ಲ.

ನಮ್ಮ ಧೈರ್ಯದಲ್ಲಿ (ದೃಢವಿಶ್ವಾಸದಲ್ಲಿ) ಈ ಕೆಳಗಿನವುಗಳು ಸೇರಿರುತ್ತವೆ:

ಅತಿಪವಿತ್ರ ಸ್ಥಳದೊಳಗೆ ಪ್ರವೇಶಿಸುವ ದಾರಿಯು ಕ್ರಿಸ್ತನಲ್ಲಿ ಲಭ್ಯವಿರುತ್ತದೆ.
ಕ್ರಿಸ್ತನು ಸ್ವತಃ ತನ್ನ ರಕ್ತದ ಮೂಲಕವಾಗಿ ಪ್ರವೇಶಿಸಿರುತ್ತಾನೆ.
ಆತನು ಸದಾಕಾಲವೂ ನಮಗೋಸ್ಕರ ವಿಜ್ಞಾಪನೆ ಮಾಡುವ ಯಾಜಕನಾಗಿ ಜೀವಿಸುತ್ತಾನೆ (7:25).
ಆತನ ಪಾಪ ಪ್ರಾಯಶ್ಚಿತ್ತ ಮಾಡುವ ರಕ್ತದ ಆಧಾರದಲ್ಲಿ, ಆತನನ್ನು ಹಿಂಬಾಲಿಸು ವದಕ್ಕೆ ನಮಗೆ ಅನುಮತಿಯಿರುತ್ತದೆ. ನಮಗೆ "ದೇವರಿಂದುಂಟಾದ ಒಂದು ಕಟ್ಟಡವು ಪರಲೋಕದಲ್ಲಿ ನಮಗುಂಟೆಂದು . . . ಅದು ಕೈಯಿಂದ ಕಟ್ಟಿದ ಮನೆಯಲ್ಲ" ಎಂಬ ಭರವಸವು ನಮಗೆ ಕೊಡಲ್ಪಟ್ಟಿದೆ (2 ಕೊರಿಂಥ 5:1).

ಈ ಭರವಸಗಳಲ್ಲಿ ನಮ್ಮ ನಂಬಿಕೆಯನ್ನಿಟ್ಟಿರುವದರ ಫಲಿತವಾಗಿ, ನಾವು ಈಗಾಗಲೇ ದೇವರೊಂದಿಗಿರುವ ಭಾವಿಸಬೇಕು.[42]

19ರಿಂದ 21 ವಚನಗಳು ಇಬ್ರಿಯರಿಗೆ ಪತ್ರಿಕೆಯಲ್ಲಿ ಈಗಾಗಲೆ ಬರೆದಿರುವ ಕೆಲವೊಂದು ಯೋಚನೆಗಳನ್ನು ಸಾರಾಂಶಗೊಳಿಸುತ್ತದೆ. ಒಂದು ಚರ್ಚೆಯಲ್ಲಿ ಒಂದಕ್ಕಿಂತ ಹೆಚ್ಚು ಸಾರಾಂಶವು ಹೇಳಲ್ಪಟ್ಟ ಅಂಶಗಳನ್ನು ನೆನಪಿಟ್ಟುಕೊಳ್ಳುವಂತೆ ಶ್ರೋತೃಗಳಿಗೆ ಸಹಾಯ ಮಾಡಬಲ್ಲದು. ಈ ವಾಕ್ಯಭಾಗವು ಧೈರ್ಯತನವನ್ನು, ಹೊಸ ದಾರಿ, ಮತ್ತು ನಮ್ಮ ನೂತನ ಮಹಾಯಾಜಕನದಲ್ಲಿ ಸಿಕ್ಕುವ ಸಹಾಯಕತೆ ಇವುಗಳ ಕುರಿತು ಒತ್ತಿ ಹೇಳುತ್ತದೆ.

ನಾವು ಮಾಡುವ ದೇವಾರಾಧನೆಯಲ್ಲಿ, ಈಗ ನಾವು **ದೇವರ ಸಮಕ್ಷಮದಲ್ಲಿ** (ಪರಿಶುದ್ಧ ಸ್ಥಳದೊಳಗೆ) ಪ್ರವೇಶಿಸಬಲ್ಲೆವು, ಅದರಲ್ಲಿ ಪ್ರವೇಶಿಸುವದನ್ನು ಈ ಮುಂಚೆ ಮಹಾಯಾಜಕನನ್ನು

ಬಿಟ್ಟು ಮಿಕ್ಕ ಎಲ್ಲರಿಗೂ ನಿಷೇಧಿಸಲಾಗಿತ್ತು. ಇಬ್ರಿಯ 9:3ನೇ ವಚನವು ಈ ಸ್ಥಳವನ್ನು ಅತಿಪವಿತ್ರ ಸ್ಥಳವೆಂದು ಸೂಚಿಸುತ್ತದೆ. ಈಗ ನಾವು ಆತ್ಮೀಕ ಆರಾಧನೆಯಲ್ಲಿ ದೇವರ ಸಮೀಪಕ್ಕೆ ಬರಬಲ್ಲೆವು ಮತ್ತು ನಂಬಿಕೆ ಹಾಗೂ ಪ್ರಾರ್ಥನೆಗಳ ಮೂಲಕ ಆತ್ಮೀಕವಾಗಿ ಪರಲೋಕದೊಳಕ್ಕೆ ಏರಿ ಹೋಗಬಲ್ಲೆವು. ನಾವು ಇದನ್ನು **ಆತನ** [ಯೇಸುವಿನ] **ರಕ್ತದ ಮೂಲಕ** ಮಾಡುವದಕ್ಕೆ ಶಕ್ತರಾಗಿದ್ದೇವೆ.

ಇಲ್ಲಿ "ಹೀಗಿರುವದರಿಂದ" ಎಂಬ ಸೂಚ್ಯಾರ್ಥವನ್ನು ನೋಡುತ್ತೇವೆ, ಅದು ನಮಗೆ ಕಾಲುದಾರಿಯ ದೃಢವಿಶ್ವಾಸವನ್ನು ಕೊಡುತ್ತದೆ. ಯೇಸು ನಮಗಾಗಿ ಒಂದು **ಜೀವವುಳ್ಳ ಹೊಸ ದಾರಿಯನ್ನು** ಒದಗಿಸಿದ್ದಾನೆ. ಆತನೇ "ಮಾರ್ಗ" (ಯೋಹಾನ 14:6). "ಹೊಸ" (*πρόσφατος, prosphatos*) ಎಂಬುದು ತಾಜಾ ದ್ರಾಕ್ಷೆ ಹಣ್ಣಗಳು, ತಾಜಾ ಒಲೀವ್, ತಾಜಾ ಮೀನು, ತಾಜಾ ನೀರು, ಅಥವಾ ಇತ್ತೀಚೆಗೆ ಸಂಭವಿಸಿದ ಯಾವದೋ ಒಂದಕ್ಕೆ ಅನ್ವಯಿಸಲ್ಪಡುತ್ತದೆ.[43] ದಾರಿಯು "ಹೊಸ" ದಾಗಿದೆ ಯಾಕೆಂದರೆ ಅದು ಕ್ರಿಸ್ತನು ಬಂದು ತಂದೆಯ ಬಳಿಗೆ "ದಾರಿ"ಯನ್ನು, ದ್ವಾರವನ್ನು ತೆರೆಯುವ ತನಕ ಪರಿಚಿತವಿರಲಿಲ್ಲ. ಆತನು ತನ್ನ ಮರಣದ ಮೂಲಕವಾಗಿ ನಮಗೋಸ್ಕರ ಪರಲೋಕವನ್ನು ತೆರೆದನು. **ಆತನ ಶರೀರವು** ಶಿಲುಬೆಯ ಮೇಲೆ ಹರಿಯಲ್ಪಟ್ಟಿತು; ಆತನು ಮರಣಿಸುತ್ತಿದ್ದಂತೆ **ತೆರೆಯು** ಹರಿಯಲ್ಪಟ್ಟಿತು (ನೋಡಿರಿ ಮತ್ತಾಯ 27:51). ಈ ಹೊಸ ದಾರಿಯು ಹಳೆಯದ್ದಕ್ಕೆ ವಿರುದ್ಧ ಹೋಲಿಕೆ ಮಾಡಲ್ಪಟ್ಟಿದೆ, ಈಗ ಅದು ನೆರವೇರಿರುತ್ತದೆ ಮತ್ತು ಅದರ ಸ್ಥಾನದಲ್ಲಿ ಬಂದಿರುತ್ತದೆ. ಒಂದು "ಜೀವವುಳ್ಳ ದಾರಿ" ಯಾಗಿದ್ದು, ಅದು ಯೇಸುವಿನ ಕಾರಣದಿಂದ ಎಂದಿಗೂ ಹೊಸದಾಗಿ ಉಳಿಯುತ್ತದೆ; ಯಾವ ಮರಣಿಸಿದ ಯಜ್ಞವೂ ಅದನ್ನು ತೆರೆದಿರುವದಕ್ಕೆ ಸಾಧ್ಯವಿರಲಿಲ್ಲ. ಯೇಸುವಿನ ರಕ್ತದ ಯೋಗ್ಯತೆಯೇ ಈ ಪ್ರವೇಶವನ್ನು ಒದಗಿಸುತ್ತದೆ, ಹೊರತು ನಮ್ಮ ಸ್ವಂತ ಯೋಗ್ಯತೆ ಅಲ್ಲ (ವ. 19). ನಮ್ಮ ಕರ್ತನಾದ ಕ್ರಿಸ್ತನು ನಿರಂತರವಾಗಿ ನಮ್ಮ ಅಗತ್ಯತೆಗಳನ್ನು ಒದಗಿಸುವದರಿಂದ ಅದು "ಹೊಸ" ಮತ್ತು "ಜೀವವುಳ್ಳ"ದ್ದಾಗಿದೆ (ನೋಡಿರಿ 7:25).

ದೇವಾಲಯದೊಳಗೆ ಪ್ರವೇಶವು "ತೆರೆಯ" **ಮುಖಾಂತರ** ಮಾತ್ರವೇ ಆಗಿತ್ತಾದ್ದರಿಂದ, ನಮಗೆ ನಮ್ಮ ಆತ್ಮೀಕ "ತೆರೆ"ಯಾದ, ಸ್ವತಃ ಕ್ರಿಸ್ತನ ದೇಹದ ಮೂಲಕ ಪ್ರವೇಶವು ಇರುತ್ತದೆ. ಆತನ ಮರಣವು ಪುನಃ ಈ ಸಂಕೇತದಲ್ಲಿ ಚಿತ್ರಿಸಲ್ಪಟ್ಟಿರುತ್ತದೆ, ಮತ್ತು ಲೇಖಕನು ಅದರ ಅವಶ್ಯಕತೆಯನ್ನು ತೋರಿಸಿದನು. ದೇವದರ್ಶನ ಗುಡಾರದಲ್ಲಿದ್ದ ತೆರೆಯು ಮನುಷ್ಯರನ್ನು ದೇವರಿಂದ ದೂರವಿಟ್ಟಿತ್ತು; ಆದರೆ ಈಗ ಯೇಸುವಿನ ಶರೀರವೇ ಹರಿಯಲ್ಪಟ್ಟಿದೆ, ತಂದೆಯ ಬಳಿಗೆ ದಾರಿಯನ್ನು ತೆರೆದಿರುತ್ತದೆ. Hughesನು ಹೀಗೆ ಹೇಳಿದನು,

> ಶಿಲುಬೆಯ ಮೇಲೆ ತನ್ನ ಮರಣದ ಕ್ಷಣದಲ್ಲಿ, ಅದು ನಮ್ಮ ಪಾಪ ಪ್ರಾಯಶ್ಚಿತ್ತದ ಕ್ಷಣ ಸಹ ಆಗಿದ್ದು, ಆಗ ಕಿರುಕುಳ ಕೊಡುತ್ತಿದ್ದ ಮತ್ತು ಅಡ್ಡಿಯಾಗಿದ್ದ ತೆರೆಯು ಮೇಲಿನಿಂದ ಕೆಳಗಿನ ವರೆಗೂ ಹರಿಯಲ್ಪಟ್ಟಿತು [ಮಾರ್ಕ 15:38], ದೇವರು ಕಾರ್ಯ ಮಾಡಿದ್ದಾನೆ ಮತ್ತು ಕೊನೆಗೂ ಆತನ ಪರಿಶುದ್ಧ ಸಮ್ಮುಖದೊಳಗೆ ದಾರಿಯು ತೆರೆಯಲ್ಪಟ್ಟಿದೆ ಎಂಬುದನ್ನು ಸೂಚಿಸುವದಾಗಿತ್ತು.[44]

**ವಚನ 21.** ಮುಂದಿನ "ಹೀಗಿರುವಲ್ಲಿ" ಎಂಬುದ **ಶ್ರೇಷ್ಠನಾದ ಮಹಾಯಾಜಕನು ನಮಗಿರುವದರಿಂದ** ಎಂದಾಗಿದೆ. ಇದು ಒದಗಿಸುವಾತನ ದೃಢವಿಶ್ವಾಸವಾಗಿರುತ್ತದೆ. ನಾವು ಹೊಸ ಒಡಂಬಡಿಕೆಯ ಆರಾಧನೆಯಲ್ಲಿನ ಪ್ರಯೋಜನಗಳನ್ನು ನೋಡಿದ್ದೇವೆ; ನಂತರ, ಲೇಖಕನು ನಮ್ಮ ಶ್ರೇಷ್ಠ ಮಹಾಯಾಜಕನು ನಮ್ಮನ್ನು ಆಶೀರ್ವದಿಸಿದ್ದಾನೆಂಬುದನ್ನು ವಿವರಿಸುತ್ತಾನೆ.

ನಮ್ಮ ಹೊಸ ಮತ್ತು **ದೇವರ ಮನೆಯ ಮೇಲೆ** "ಶ್ರೇಷ್ಠ ಯಾಜಕನು" ಆಗಿರುವ ಕ್ರಿಸ್ತನು ಸಭೆಯ ಶಿರಸ್ಸಾಗಿದ್ದಾನೆ (ವ. 1; ಎಫೆಸ 1:22, 23; 1 ತಿಮೊಥೆ 3:15; ನೋಡಿರಿ ಇಬ್ರಿಯ 3:6; 8:1). "ದೇವರ ಮನೆ" ಎಂಬುದು ಕ್ರೈಸ್ತ ಯುಗದಲ್ಲಿರುವ ದೇವಜನರನ್ನು ಸೂಚಿಸುತ್ತದೆ (ನೋಡಿರಿ 3:6). "ಶ್ರೇಷ್ಠ" ಎಂಬುದು ಇಡೀ ಆರೋನಿಕ ಯಾಜಕತ್ವದೊಂದಿಗೆ ವಿರುದ್ಧ ಹೋಲಿಕೆಯನ್ನು ಪರೋಕ್ಷವಾಗಿ ಸೂಚಿಸಬಹುದು, ಆದರೆ ಅದು ಖಂಡಿತವಾಗಿ ಕ್ರಿ.ಶ. 70ರಲ್ಲಿ ಯೆರೂಸಲೇಮ್ ಪಟ್ಟಣವು ಪತನಗೊಳ್ಳುವ ಮುನ್ನ ಇದ್ದ ಕಡೇ ಕೆಲವು ಮಹಾಯಾಜಕರಲ್ಲಿನ ಶ್ರೇಷ್ಠತೆಯ ಕೊರತೆಯನ್ನು ಎದ್ದು ಕಾಣುವಂತೆ ಮಾಡುತ್ತದೆ.

**ವಚನ 22.** ನಾವು **ಬಳಿಗೆ ಬರೋಣ** ಎಂದು ಹೇಳಲ್ಪಟ್ಟಿದ್ದೇವೆ. ಅಡ್ಡಿಯಾಗಿದ್ದ ತೆರೆಯು ತೆಗೆದು ಹಾಕಲ್ಪಟ್ಟಿರುವಾಗ, ನಮಗೆ "ಬಳಿಗೆ ಬರುವ" ವಿಷಯದಲ್ಲಿ **ಪೂರ್ಣವಾದ ನಂಬಿಕೆ** ಇರುತ್ತದೆ, ನಮ್ಮ ಪ್ರಾರ್ಥನೆಗಳು ಉತ್ತರಿಸಲ್ಪಡುವವೆಂದು ಬಲ್ಲವರಾಗಿದ್ದೇವೆ. ಇದನ್ನು "ಬಳಿಗೆ ಬರುತ್ತಲೇ ಇರ್ರಿ" ಎಂದು ಅನುವಾದಿಸಲ್ಪಟ್ಟರೆ ಸೂಕ್ತವಾಗಿರುತ್ತದೆ.[45] ಬೇರೆ ಮಾತುಗಳಲ್ಲಿ ಹೇಳುವದಾದರೆ, ಒಂದು ಪಶ್ಚಾತ್ತಾಪದ ಜೀವನವು ನಮಗೆ ಸ್ವಾಭಾವಿಕವಾಗಬೇಕು. ಆ ಮಾತುಗಳು ವಾಸ್ತವದಲ್ಲಿ ನಮಗೆ "ಬಳಿಗೆ ಬರೋಣ" ಎಂದು ಆಜ್ಞಾಪಿಸುತ್ತವೆ.[46] ನಾವು ದೇವರ ಮಾತಿನಂತೆ ಆತನನ್ನು ವಿಶ್ವಾಸಿಸಬೇಕು, ಪ್ರತಿಯೊಂದು ವಾಗ್ದಾನವನ್ನು ನಂಬುವವರು ಮತ್ತು ಪ್ರತಿಯೊಂದು ಆಜ್ಞೆಗೆ ವಿಧೇಯರಾಗುವವರು ಆಗಿರಬೇಕು. ಇಸ್ರಾಯೇಲ್ಯರು ಸೀನಾಯ್ ಪರ್ವತದ ಮೇಲೆ ದೇವರನ್ನು ಸಂಧಿಸುವದಕ್ಕೆ ಮುಂಚೆ ತಮ್ಮನ್ನು ಶುದ್ಧ ಮಾಡಿಕೊಳ್ಳಬೇಕಾಗಿದ್ದ ರೀತಿಯಲ್ಲಿಯೇ (ವಿಮೋಚನಕಾಂಡ 19:10), ನಾವು ಸಹ ಆತನ ಬಳಿಗೆ ಬರುವದಕ್ಕೆ ನಮ್ಮನ್ನು ಶುದ್ಧ ಮಾಡಿಕೊಳ್ಳಬೇಕು (1 ಪೇತ್ರ 1:22, 23).

**ಬರೋಣ** ಎಂದು ಹೇಳುವದರಲ್ಲಿ ಲೇಖಕನ ಉಪಕಾರಹೃದಯ ತಗ್ಗಿಸುವ ಮನೋಭಾವವನ್ನ, ಮತ್ತು ಬಹುಶಃ ದೀನತೆಯನ್ನು ಕಾಣುತ್ತೇವೆ. ಆತನು ತನ್ನನ್ನು ವಾಚಕರೊಂದಿಗೆ ಗುರುತಿಸಿಕೊಳ್ಳುತ್ತಾ ಹೀಗೆ ಕರೆ ಕೊಡುತ್ತಾನೆ, "ನಾವು ಮುಂದಕ್ಕೆ ಸಾಗೋಣ."[47] 22ರಿಂದ 24 ವಚನಗಳೊಳಗೆ ಮೂರು ಸಾರಿ ವರ್ತಮಾನಕಾಲರೂಪದ ಕ್ರಿಯಾಪದವು ಕಾಣಿಸಿಕೊಳ್ಳುವದಾಗಿದ್ದು ಅದರಲ್ಲಿ ಇದು ಮೊದಲನೆಯದ್ದಾಗಿದೆ, ನಿರಂತರವಾದ ಕ್ರಿಯೆ ಅಥವಾ ಪ್ರೋತ್ಸಾಹವನ್ನು ಸೂಚಿಸುತ್ತದೆ.

ಹಳೆಯ ಒಡಂಬಡಿಕೆಯ ಯಾಜಕರು ಗುಡಾರವನ್ನು ಮತ್ತು ಅದರ ಅತಿಪವಿತ್ರ ಸ್ಥಳವನ್ನು ಸಮೀಪಿಸಿದ ರೀತಿಯಲ್ಲಿಯೇ ನಾವು ದೇವರ ಮತ್ತು "ಕೃಪಾಸನದ ಬಳಿಗೆ" ಬರುವವರಾಗಿದ್ದೇವೆ (4:16), ಆದರೆ ಒಂದು ಹೆಚ್ಚು ಪೂರ್ಣವಾದ ಹಾಗೂ ನಿಜವಾದ ರೀತಿಯಲ್ಲಿ ಬರುತ್ತೇವೆ. ನಾವು ಆರಾಧನೆಯಲ್ಲಿ ದೇವರ ಸಮೀಪಕ್ಕೆ ಬರುವಾಗ ನಿಜಕ್ಕೂ ಕ್ರಿಯೆಯಲ್ಲಿರುವ ಯಾಜಕರಾಗಿದ್ದೇವೆ.

ಮುಂದಕ್ಕೆ ಸಾಗುವದಕ್ಕೆ ನಮಗೆ ಅಗತ್ಯವಿರುವದನ್ನು ಲೇಖಕನು ನಮ್ಮ ಮುಂದಿಡುತ್ತಾನೆ: ಒಂದು "ಪೂರ್ಣನಂಬಿಕೆಯಲ್ಲಿರುವ" **ಯಥಾರ್ಥಹೃದಯ**. ಇದು ಇಲ್ಲದೆ ಹೋದರೆ, ನಾವು ಆತ್ಮೀಕ ಭಕ್ತಿಯಲ್ಲಿ ದೇವರ ಸಮೀಪಕ್ಕೆ ಬರುವದಕ್ಕೆ ಆರಂಭವನ್ನು ಸಹ ಮಾಡಲಾಗುವದಿಲ್ಲ. ಈ ಪದಗುಚ್ಛವು ಪರಿಪೂರ್ಣ ಯಥಾರ್ಥತೆ ಮತ್ತು ಕಪಟತನವಿಲ್ಲದ ಹೃದಯವುಳ್ಳ ಮನುಷ್ಯನನ್ನು ಬಣ್ಣಿಸುತ್ತದೆ (ನೋಡಿರಿ ಯೋಹಾನ 4:24). ಅಲ್ಲದೆ ನಮ್ಮಲ್ಲಿರುವ ಪಾಪದ ಎಲ್ಲಾ ಅಶುದ್ಧತೆಗಳನ್ನು ನಿವಾರಿಸಿಕೊಂಡವರಾಗಿರುವಂತೆ, ನಾವು ಯೇಸುವಿನ ರಕ್ತದಿಂದ **ಹೃದಯವನ್ನು ಪ್ರೋಕ್ಷಿಸಿಕೊಂಡವರಾಗಿ** ಸಹ ಬರತಕ್ಕದ್ದು. ನಮ್ಮ ಹೃದಯಗಳು ನಮ್ಮನ್ನು ದೋಷಿಯೆಂದು ತೀರ್ಪು ಮಾಡುವದಾದರೆ, ನಮ್ಮ ಹಾಗೂ ದೇವರ ನಡುವೆ ಒಂದು ವಿಘ್ನವನ್ನು ಹೊಂದಿದ್ದೇವೆಂದರ್ಥವಾಗುತ್ತದೆ. ಹೇಗೂ, ಯೇಸುವಿನ ಮೂಲಕ ದೇವರ ಕರುಣೆಯಿಂದ

ಅಪರಾಧದ ಅಡೆತಡೆಯನ್ನು ಜಯಿಸಬಹುದಾಗಿದೆ, ಯಾಕೆಂದರೆ "ದೇವರು ನಮ್ಮ ಹೃದಯಕ್ಕಿಂತ ದೊಡ್ಡವನಾಗಿದ್ದು ಎಲ್ಲವನ್ನೂ ಬಲ್ಲವನಾಗಿದ್ದಾನೆ" (1 ಯೋಹಾನ 3:20). ಆತನು ಪಾಪದ ಎಲ್ಲಾ ಕಾರಣಗಳನ್ನು ಬಲ್ಲನು ಮತ್ತು ನಮ್ಮ ದುರ್ಬಲತೆಯ ಎಲ್ಲಾ ಕಾರಣಗಳನ್ನು ಅರಿತವನಾಗಿದ್ದಾನೆ. ಈ ಜ್ಞಾನವನ್ನು ಹೊಂದದವನಾಗಿ, ತನ್ನ ಮಗನ ಶ್ರೇಷ್ಠ ಹಾಗೂ ಅದ್ಭುತವಾದ ಯಜ್ಞದ, ಜೊತೆಗೆ ಮಗನ ನಿರಂತರವಾದ ವಿಜ್ಞಾಪನೆಯ ಆಧಾರದಲ್ಲಿ ಆತನು ಕ್ಷಮಿಸುವದಕ್ಕೆ ಶಕ್ತನಾಗಿದ್ದಾನೆ (7:25).

ದೇವರ ಸಮೀಪಕ್ಕೆ ಬರುವಾಗ "ಯಥಾರ್ಥ ಹೃದಯವನ್ನು ಹೊಂದಿರುವದರ" ಜೊತೆಗೆ, ನಾವು ನಮ್ಮ **ದೇಹಗಳನ್ನು ತಿಳಿನೀರಿನಿಂದ ತೊಳೆದುಕೊಂಡವರಾಗಬೇಕು**. ನಂಬಿಕೆಯಿಲ್ಲದೆ ದೇವರ ಬಳಿಗೆ ಬರುವದಕ್ಕೆ ಸಾಧ್ಯವಿಲ್ಲ. ನಮ್ಮ ನಂಬಿಕೆಯು "ಪರಿಪೂರ್ಣವಾದ ಭರವಸ"ದಿಂದ, "ಕ್ರಿಸ್ತನ ಯಾಜಕತ್ವ, ಮತ್ತು ಹಳೆಯದಕ್ಕಿಂತ ಹೊಸ ಒಡಂಬಡಿಕೆಯು ಶ್ರೇಷ್ಠವಾದದ್ದೆಂಬದರಲ್ಲಿ ಒಂದು ದೃಢವಾದ ಮತ್ತು ಅಚಲವಾದ ಮನವೋಲಿಕೆ" ಯಿಂದ ಕೂಡಿರತಕ್ಕದ್ದು.[48] ಇಬ್ರಿಯ ಕ್ರೈಸ್ತರ ಹಾಗೆಯೇ, ದೇವರ ಬಳಿಗೆ ಬರುವಂತಾಗಲ ನಾವು ದೀಕ್ಷಾಸ್ನಾನದ ಮೂಲಕ ರಕ್ತದಿಂದ "ತೊಳೆಯ"ಲ್ಪಟ್ಟಿದ್ದೇವೆ (ನೋಡಿರಿ ಪ್ರಕಟನೆ 1:5, 6; ಅಪೊಸ್ತಲರ ಕೃತ್ಯಗಳು 22:16).

22ನೇ ವಚನದಲ್ಲಿ "ನೀರು" ಎಂಬುದರ ಪ್ರಸ್ತಾಪವು ದೀಕ್ಷಾಸ್ನಾನವನ್ನು ಸೂಚಿಸತಕ್ಕದ್ದು.[49] ದೀಕ್ಷಾಸ್ನಾನವು ಅಥವಾ ನೀರಿನಲ್ಲಿ ಮುಳುಗಿಸುವಿಕೆಯು ಪಾಪಗಳ ಪರಿಹಾರಾರ್ಥವಾಗಿ ಮಾಡಿಸಲ್ಪಡುತ್ತಿತ್ತೆಂಬುದು ಹೊಸ ಒಡಂಬಡಿಕೆಯಲ್ಲಿ ಹೇರಳವಾಗಿ ಸ್ಪಷ್ಟವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 2:38; 22:16). ಒಬ್ಬ ವ್ಯಾಖ್ಯಾನಕಾರನು ಈ ಅಭಿಪ್ರಾಯವನ್ನು ತಿಳಿಸಿದನು, "ಯಾವನಾದರೂ ಬಳಿಗೆ ಬರುವದಕ್ಕೆ ಮುಂಚೆ ಅದಕ್ಕೆ ಸಾರ್ವಜನಿಕ ಸ್ವಭಾವದ ಒಂದು ಧಾರ್ಮಿಕ ವಿಧಿಯೊಂದರ ಅಗತ್ಯವಿರುತ್ತದೆ."[50] ರಕ್ತದ ಮತ್ತು ನೀರಿನ ಮಹತ್ವಪೂರ್ಣತೆಯನ್ನು ಎಷ್ಟು ಒತ್ತಿ ಹೇಳಿದರೂ ಅದು ಅಧಿಕವೇನಿಸದು. ಯೋಹಾನನು ಸಹ ನೀರು ಮತ್ತು ರಕ್ತಕ್ಕೆ ಹೆಚ್ಚು ಗಮನವನ್ನು ಕೊಟ್ಟನು (1 ಯೋಹಾನ 5:7, 8).

ದೋಷಪರಿಹಾರಕ ದಿನದ ಕಾರ್ಯಕಲಾಪಗಳನ್ನು ನಡಿಸಿ ಕೊಡುವ ಯಾಜಕನು "ಸ್ನಾನ ಮಾಡಬೇಕು" (ಯಾಜಕಕಾಂಡ 16:4). ನೂತನ ನೀರಿನ ಸ್ನಾನವು ಕೇವಲ ದೇಹವನ್ನು ಅದರ ಶಾರೀರಿಕ ಹೊಲಸನ್ನು ಶುಚಿ ಮಾಡುವದಷ್ಟೆ ಅಲ್ಲ; ಬದಲಾಗಿ ನಮ್ಮನ್ನು ರಕ್ಷಿಸುವಂತೆ ನಮ್ಮ ಮನಸ್ಸಾಕ್ಷಿಯನ್ನು ಶುದ್ಧ ಮಾಡುವದಕ್ಕೆ ಸಂಬಂಧಿಸಿರುತ್ತದೆ (1 ಪೇತ್ರ 3:21). ದೀಕ್ಷಾಸ್ನಾನವು ಅನೇಕ ಸಾರಿ ಒಂದು ಸ್ನಾನ ಎಂಬ ಪದಗಳಲ್ಲಿ ಸೂಚಿಸಲ್ಪಟ್ಟಿರುತ್ತದೆ (ಅಪೊಸ್ತಲರ ಕೃತ್ಯಗಳು 22:16; ಎಫೆಸ 5:26; ತೀತನಿಗೆ 3:5).[51] "ಪ್ರೋಕ್ಷಿಸುವಿಕೆ" ಯು ದೀಕ್ಷಾಸ್ನಾನದೊಂದಿಗೆ ನೇರವಾದ ಸಂಬಂಧವನ್ನು ಹೊಂದಿರಲಿಲ್ಲ, ಆದರೆ ಅದು "ಪರಿವರ್ತನೆಯನ್ನು ಪ್ರತಿನಿಧಿಸುತ್ತದೆ, ಪಶ್ಚಾತ್ತಾಪ ಮತ್ತು ದೀಕ್ಷಾಸ್ನಾನದ ಸೂಚ್ಯಾರ್ಥವನ್ನೊಳಗೊಂಡಿರುತ್ತದೆ."[52] ಈ ವಾಕ್ಯಭಾಗವು ನಮಗೆ ಹೀಗೆ ಹೇಳುತ್ತದೆ, "[ಕ್ರೈಸ್ತನು] ಕ್ರಿಸ್ತನ ಪ್ರಾಯಶ್ಚಿತ್ತದ ಕೆಲಸದಲ್ಲಿ ನಂಬಿಕೆಯನ್ನಿಡುವದರ ಮೂಲಕ ಪಾಪಗಳು ಕ್ಷಮಿಸಲ್ಪಟ್ಟಿವೆಯೆಂಬ ಪ್ರಜ್ಞೆಯನ್ನು ಹೊಂದಿಕೊಂಡ ಬಳಿಕ, ಮತ್ತು ಆತನು ಕ್ರೈಸ್ತೀಯ ದೀಕ್ಷಾಸ್ನಾನದಲ್ಲಿ ಪಾಲ್ಗೊಂಡ ಬಳಿಕ ಮಾತ್ರವೇ ಸಭೆಯಾಗಿ ಕೂಡಿಕೊಳ್ಳುವದರಲ್ಲಿ ಭಾಗಿಯಾಗತಕ್ಕದ್ದು."[53] "ತಿಳಿನೀರು" ಸ್ಪಷ್ಟವಾಗಿ ದೀಕ್ಷಾಸ್ನಾನದ ವೇಳೆ ಒಬ್ಬನ ಪಾಪಗಳು ನಿವಾರಿಸಲ್ಪಡುವದನ್ನು ಸೂಚಿಸುತ್ತದೆ. ಯೆಹೂದಿ ಧಾರ್ಮಿಕ ಸಂಸ್ಕಾರದ ದೃಷ್ಟಿಕೋನದಲ್ಲಿ ಸಹ, ದೀಕ್ಷಾಸ್ನಾನ ಮಾಡಿಸಿಕೊಂಡ ವ್ಯಕ್ತಿಯುಶುದ್ಧನು ಎಂದಾಗಿದೆ. ಹೇಗೂ, ಯೆಹೂದಿ ದೀಕ್ಷಾಸ್ನಾನವಾದ ಬಳಿಕ ನೀರು ಅಶುದ್ಧವಾಗಿರುತ್ತಿದ್ದ ರೀತಿಯಲ್ಲಿ, ಆತನು ಮುಳುಗಿಸಲ್ಪಟ್ಟ ಬಳಿಕ ನೀರು ಅಶುದ್ಧಗೊಳ್ಳುವದಿಲ್ಲ. ಅಷ್ಟುಮಾತ್ರವಲ್ಲದೆ, ಲೇವಿಕ ವ್ಯವಸ್ಥೆಯ ಅಡಿಯಲ್ಲಿರುತ್ತಿದ್ದ

ರೀತಿಯಲ್ಲಿ, ಕ್ರೈಸ್ತನ ಶುದ್ಧತೆಯು ತಾತ್ಕಾಲಿಕವಾದದ್ದಲ್ಲ; ಕ್ರಿಸ್ತನಲ್ಲಿರುವವನು ಆತನ ರಕ್ತದಿಂದ ಶುದ್ಧ ಮಾಡಲ್ಪಡುತ್ತಲೇ ಇರುವನು (1 ಯೋಹಾನ 1:7).[54]

ರಕ್ತದ ಪ್ರೋಕ್ಷಣೆಯು ಅನೇಕ ಸಾರಿ ಹಳೆಯ ಒಡಂಬಡಿಕೆಯಲ್ಲಿ ಶುದ್ಧೀಕರಿಸುವದರೊಂದಿಗೆ ಸಂಬಂಧ ಹೊಂದಿತ್ತು ಮತ್ತು ಆ ಕಾರಣದಿಂದ ಹೊಸ ಒಡಂಬಡಿಕೆಯಲ್ಲಿ ಯೇಸುವಿನ ರಕ್ತಕ್ಕೆ ಒಂದು ಸಾಂಕೇತಿಕ ಅನ್ವಯವನ್ನು ಹೊಂದಿದೆ (ಇಬ್ರಿಯ 9:13, 14; 11:28). ಇಡೀ ಮನುಷ್ಯನು ಶುದ್ಧೀಕರಿಸಲ್ಪಡಬೇಕು; ಆದದರಿಂದ, ಮನಸ್ಸಾಕ್ಷಿ (ಆತ್ಮ) ಮತ್ತು ದೇಹಗಳು ಅದರಲ್ಲಿ ಪಾಲ್ಗೊಂಡಿರುತ್ತವೆ (ಯೋಹಾನ 3:5). ಮೊದಲ ಪೇತ್ರ 1:2ವು ಒಂದೇ ವಚನದಲ್ಲಿ "ಪ್ರೋಕ್ಷಿಸುವಿಕೆಯನ್ನು," ಯೇಸುವಿನ ರಕ್ತ, ವಿಧೇಯತೆ, ಮತ್ತು ಪವಿತ್ರಾತ್ಮನ ಶುದ್ಧೀಕರಿಸುವ ಕೆಲಸ ಇವುಗಳನ್ನು ಜೋಡಣೆ ಮಾಡುತ್ತದೆ. ಇದು ರಕ್ಷಣೆಯು ಹೇಗೆ ಹೊಂದಿಕೊಳ್ಳಲ್ಪಡುತ್ತದೆಂಬುದರ ಒಂದು ಬಣ್ಣನೆ ಎಂದು ಕಾಣಿಸುತ್ತದೆ.

ಕ್ರಿಸ್ತನ ಒಡಂಬಡಿಕೆಯು "ಹೊಸ ಜೀವವುಳ್ಳ ದಾರಿ" ಆಗಿದ್ದು ಅದರ ಮೂಲಕ ನಾವು ಪರಲೋಕವನ್ನು ಪ್ರವೇಶಿಸುತ್ತೇವೆ. ಆತನ ಮರಣ ಹಾಗೂ ಮಧ್ಯಸ್ಥಿಕೆಯ ಕಾರಣದಿಂದ, ನಮಗೆ ದೇವರ ಸಮಕ್ಷಮದಲ್ಲಿ ಪ್ರವೇಶಿಸುವ ಮತ್ತು ಆತನ ಮುಂದೆ ಶುದ್ಧ ಮನಸ್ಸಾಕ್ಷಿ ಹಾಗೂ ನಿರ್ಮಲ ಹೃದಯಗಳೊಂದಿಗೆ ನಿಲ್ಲುವ ಸದವಕಾಶವು ನಮಗೆ ಇರುತ್ತದೆ. ಈ ಶ್ರೇಷ್ಠ ವರದಾನವು ನಮ್ಮ ನಂಬಿಕೆಗೆ ತಳಹದಿಯು ಮತ್ತು ದೇವರಿಗೆ ನಾವು ಮಾಡುವ ಸೇವೆಗಾಗಿ ಒಂದು ಉತ್ತೇಜನ ಆಗಿರುತ್ತದೆ.

**ವಚನ 23.** ಸಿದ್ಧಾಂತಿಕ ವಿಷಯಗಳ ಮೇಲಿನ ತನ್ನ ಚರ್ಚೆಯನ್ನು ಮುಕ್ತಾಯ ಮಾಡಿದವನಾಗಿ, ಲೇಖಕನು ಈಗ ಹೊಸ ಹಾಗೂ ಜೀವವುಳ್ಳ ದಾರಿಯಲ್ಲಿ ನೆಲೆಗೊಳ್ಳುವ ಮೂಲಕ ಕ್ರಿಸ್ತನಿಗೆ ನಂಬಿಗಸ್ತರಾಗಿ ಉಳಿಯುವದರ ಮೂಲಭೂತ ವಿಷಯಗಳ ಕಡೆಗೆ ತಿರುಗಿಕೊಳ್ಳುತ್ತಾನೆ. ಇಬ್ರಿಯ 10:23-25 ವಚನಗಳು ಇನ್ನು ಎರಡು "ಮಾಡೋಣ" ಎಂಬ ವಾಗ್ದಂಡಗಳ ಸುತ್ತ ಕೇಂದ್ರಿಕೃತವಾಗಿರುತ್ತವೆ, ಮೊದಲನೆಯದು 22ನೇ ವಚದಲ್ಲಿ ಕೊಡಲ್ಪಟ್ಟಿತ್ತು. 25ನೇ ವಚನವು ನಾಲ್ಕನೆಯ "ಮಾಡೋಣ" ಎಂದು ಕರೆಯಲ್ಪಡಬಹುದು.

23ನೇ ವಚನವು ಎರಡನೆಯ **ಸೋಣ** ಎಂಬದರೊಂದಿಗೆ ಆರಂಭಗೊಳ್ಳುತ್ತದೆ. ಇಲ್ಲಿ ಯೋಚನೆಯು "ಈಗ ನಮ್ಮ ದೇಹಗಳನ್ನು ನೀರಿನಲ್ಲಿ ತೊಳೆದುಕೊಂಡವರಾಗಿದ್ದು, ನಮ್ಮ ನಂಬಿಕೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳೋಣ" ಎಂದಾಗಿರುತ್ತದೆ.

ಲೇಖಕನು ಕ್ರೈಸ್ತರಿಗೆ **ನಿಶ್ಚಂಚಲರಾಗಿ ಪರಿಗ್ರಹಿಸೋಣ** ಎಂದು ಪ್ರೋತ್ಸಾಹಿಸುತ್ತಾನೆ. ಇದು ಇಬ್ರಿಯರಿಗೆ ಪತ್ರಿಕೆಯಲ್ಲಿ ಮುಖ್ಯ ಯೋಚನೆಯಾಗಿದೆ. ಇಬ್ರಿಯ 3:6ರ ಪ್ರಕಾರ, ದೃಢವಿಶ್ವಾಸವನ್ನು ಗಟ್ಟಿಯಾಗಿ ಹಿಡಿದುಕೊಳ್ಳುವದು ಒಬ್ಬನಿಗೆ ಸಭೆಯ ಅಥವಾ ದೇವರ ಮನೆಯ ಭಾಗವಾಗಿ ಉಳಿಯುವಂತೆ ಸಹಾಯ ಮಾಡುವದು. ನಾವು 3:14ರಲ್ಲಿ ಅಂತ್ಯದ ತನಕ ದೃಢವಾಗಿ ಹಿಡಿದುಕೊಳ್ಳುವದು ಕ್ರಿಸ್ತನಲ್ಲಿ ಪಾಲುಗಾರನಾಗುವದರ ಭಾಗವಾಗಿರುತ್ತದೆ ಎಂದು ಓದುತ್ತೇವೆ. ಇಲ್ಲಿನ ತರ್ಕವು ರೋಮಾ 6:1-5ರಲ್ಲಿರುವ ತರ್ಕದಂತೆಯೇ ಇರುತ್ತದೆ, ಅಲ್ಲಿ ದೇವಜನರು-ದೀಕ್ಷಾಸ್ನಾನ ಮಾಡಿಸಿಕೊಂಡವರು — ಪಾಪದಲ್ಲಿ ಮುಂದುವರೆಯಬಾರದೆಂದು ಬುದ್ಧಿ ಹೇಳಲ್ಪಟ್ಟಿದ್ದಾರೆ. ದೇವರು ತನ್ನ ವಾಗ್ದಾನಗಳನ್ನು ಕಾಪಾಡಿಕೊಳ್ಳುವನೆಂಬ ನಂಬಿಗಸ್ತಿಕೆಯು ನಮಗೆ ಪ್ರೋತ್ಸಾಹವಾಗಿರುತ್ತದೆ, ಯಾಕೆಂದರೆ ನಿತ್ಯಜೀವದ ಆಶೀರ್ವಾದವು ಅದನ್ನೆಲ್ಲಾ ಯೋಗ್ಯವಾಗಿಸುತ್ತದೆ.

"ನಿಶ್ಚಂಚಲರಾಗಿ ಹಿಡಿದುಕೊಳ್ಳಿರಿ" ಎಂದು ಬೇಡಿಕೊಳ್ಳುವದು ಕ್ರೈಸ್ತೀಯ ಜೀವಿತದಲ್ಲಿ ಅವಶ್ಯಕವಾಗಿರುತ್ತದೆ. ಕ್ಯಾಲ್ವಿನ್‌ವಾದಿ ಉಪದೇಶಗಳ ಪ್ರಕಾರ, ನಿಜವಾಗಿಯೂ ಪರಿವರ್ತ

ನೆಗೊಂಡವನು ಹಿಡಿದುಕೊಳ್ಳದೆ ಬಿಟ್ಟು ಬಿಡುವದಕ್ಕೆ ಸಾಧ್ಯವಿಲ್ಲ. ಖಂಡಿತವಾಗಿಯೂ, ಒಬ್ಬನು ದೇವರ ಕೃಪೆಯಿಂದ ತಪ್ಪಿಹೋಗಲು ಸಾಧ್ಯವಿಲ್ಲವಾದರೆ, ನಂಬಿಕೆಯನ್ನು ಹಿಡಿದುಕೊಂಡಿರಬೇಕೆಂಬ ವಿಷಯದಲ್ಲಿ ಕಳಕಳಿಯನ್ನು ಹೊಂದಿರುವದರಲ್ಲಿ ಯಾವ ನ್ಯಾಯಯುತವಾದ ಕಾರಣವೂ ಇರುವದಿಲ್ಲವಷ್ಟೆ.

**ಪ್ರತಿಜ್ಞೆ** ಎಂಬುದು ಗ್ರೀಕ್ ಭಾಷೆಯಲ್ಲಿ ὁμολογία (*homologia*), ಇದರರ್ಥವು ಸತ್ಯವೆಂದು ಒಪ್ಪಿಕೊಂಡದ್ದು, ಅರಿಕೆ ಮಾಡಿದ್ದು, ಅಥವಾ ಘೋಷಿಸಿಕೊಂಡದ್ದು ಎಂದಾಗಿದೆ. ನಾವು ಒಮ್ಮೆ ಕ್ರಿಸ್ತನಲ್ಲಿ ನಮ್ಮ ನಂಬಿಕೆಯನ್ನು ಒಪ್ಪಿಕೊಂಡೆವು, ಅದು ತಿಮೊಥೆಯನು ತಾನು ಆರಂಭದಲ್ಲಿ ಕರ್ತನೊಂದಿಗೆ ನಡೆಯಲ್ಲಿ ಮಾಡಿದ್ದ "ಒಳ್ಳೇ ಪ್ರತಿಜ್ಞೆಯನ್ನು" ಮಾಡಿದಂತೆಯೇ ಆಗಿರಬಹುದು. ಪೌಲನು ಇದನ್ನು ಯೇಸು ಪಿಲಾತನ ಮುಂದೆ ಮಾಡಿದ ಒಪ್ಪಿಕೊಳ್ಳುವಿಕೆಯೊಂದಿಗೆ ಸಮಾನಗೊಳಿಸಿದನು (1 ತಿಮೊಥೆ 6:12, 13). ಕರ್ತನು ದೇವಕುಮಾರನೆಂದು ಒಬ್ಬನು ಎಲ್ಲರ ಮುಂದೆ ತನ್ನ ನಂಬಿಕೆ ಹಾಗೂ ನಿರೀಕ್ಷೆಗಳನ್ನು ಘೋಷಿಸಿರುವದಾದರೆ, ಆತನು ತನ್ನ ನಂಬಿಕೆಯನ್ನು ಜೀವಿಸುವ ಮೂಲಕ ನಿರಂತರವಾಗಿ ಅದನ್ನು ಒಪ್ಪಿಕೊಳ್ಳುವ ನಿರ್ಬಂಧದಲ್ಲಿದ್ದಾನೆ. ಆತನು ಇದನ್ನು ಭಾಗಶಃ ಬೇರೆಯವರಿಗೆ ತನ್ನ ನಂಬಿಕೆಯನ್ನು ತೋರ್ಪಡಿಸುವ ಮೂಲಕ ಮಾಡುವವನಾಗಿದ್ದಾನೆ, ಅವರಿಗೆ ಸಹ ಈತನಂತೆಯೇ ಪ್ರೋತ್ಸಾಹದ ಅಗತ್ಯವಿರುತ್ತದೆ (ನೋಡಿರಿ 3:12, 13). ನಮ್ಮ ಕರ್ತನು ನಮಗೆ ನಂಬಿಗಸ್ತನಾಗಿದ್ದಾನೆ ಮತ್ತು ನಾವು ಆತನಿಗೆ ನಂಬಿಗಸ್ತರಾಗಿರತಕ್ಕದ್ದು.

ನಮ್ಮ **ನಿರೀಕ್ಷೆಯ ಕುರಿತು** ಮಾಡಿದ "ಪ್ರತಿಜ್ಞೆ" ಎಂಬುದು ಇಬ್ರಿಯರಿಗೆ ಪತ್ರಿಕೆಯಲ್ಲಿ ಇನ್ನೊಂದು ಪ್ರಾಥಮಿಕ ಯೋಚನೆಯಾಗಿರುತ್ತದೆ. ಹಿಡಿದುಕೊಳ್ಳಬೇಕಾಗಿರುವ "ನಿರೀಕ್ಷೆಯು" ಇಡೀ ಕ್ರೈಸ್ತೀಯ ಧರ್ಮವನ್ನೊಳಗೊಂಡಿದೆ; ದೇವರ ಕುರಿತು ನಮಗಿರುವ ಜ್ಞಾನವು ನಿರೀಕ್ಷೆಯನ್ನು ಸ್ಫೂರ್ತಿಗೊಳಿಸುತ್ತದೆ. ಈ ನಿರೀಕ್ಷೆಯನ್ನು ನಮ್ಮ ಜೀವಿತಗಳಲ್ಲಿ ಬರುವಂತಹ ಅಡೆತಡೆಗಳ ಹೊರತಾಗಿಯೂ ಕಾಪಾಡಿಕೊಂಡು ಹೋಗಬಲ್ಲದ್ದಾಗಿದೆ ಯಾಕೆಂದರೆ ದೇವರು ತನ್ನ ವಾಗ್ದಾನಗಳಲ್ಲಿ ನಂಬಿಗಸ್ತನಾಗಿರುತ್ತಾನೆ.

ನಮ್ಮ ನಿರೀಕ್ಷೆಯು ನಮ್ಮ ನಂಬಿಕೆಯಲ್ಲಿ ಜೀವಾಳವಾಗಿರುವ ಅಂಶವಾಗಿದೆ (11:1). ದೇವರು "ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ" ಎಂಬುದನ್ನು ವಿಶ್ವಾಸಿಸದೆ ನಿಜವಾದ ನಂಬಿಕೆಯನ್ನು ಹೊಂದಿರುವದಕ್ಕೆ ಸಾಧ್ಯವಿಲ್ಲ (11:6). ಕ್ರಿಸ್ತನು ನಮ್ಮ ನಿರೀಕ್ಷೆ ಕೇಂದ್ರಬಿಂದುವಾಗಿದ್ದಾನೆ (6:19, 20). ಆತನಲ್ಲಿಯೇ ನಮಗೆ ನಿಜವಾದ ನಿರೀಕ್ಷೆಯು ಇದ್ದು ಅದರಲ್ಲಿ ನಾವು ಸಂತೋಷಿಸಬಲ್ಲೆವು (3:6; NKJV). ನಿರೀಕ್ಷೆಯು ಆತ್ಮಕ್ಕೆ ಒಂದು "ಲಂಗರು" ಆಗಿರುತ್ತದೆ (6:11, 12, 18-20).

**ವಾಗ್ದಾನ ಮಾಡಿದಾತನು ನಂಬಿಗಸ್ತನು** ಎಂಬುದನ್ನು ನಾವು ತಿಳಿದವರಾಗಿದ್ದೇವಾದ್ದರಿಂದ ನಾವು "ನಿಶ್ಚಂಚಲರಾಗಿ ಹಿಡಿದುಕೊಂಡು" ಇರಬಲ್ಲೆವು. ದೇವರು ತನ್ನ ಮಾತನ್ನು ಕಾಪಾಡಿಕೊಳ್ಳುವನು, ಅದು ಪರಲೋಕದಲ್ಲಿ ವಿಶ್ರಾಂತಿಯಾಗಿರಬಹುದು, ಕ್ಷಮಾಪಣೆ, ಅಥವಾ ನಮ್ಮ ಮನವಿಗಳೊಂದಿಗೆ ಕೃಪಾಸನದ ಬಳಿಗೆ ಬರುವ ಅಧಿಕಾರದ ವಿಷಯದಲ್ಲಾಗಿರಬಹುದು ದೇವರು ತನ್ನ ಮಾತನ್ನು ಕಾಪಾಡಿಕೊಳ್ಳುವನು. ದೇವರು ನಮ್ಮ ಕಡೆಗೆ ಹೇಗೆ ನಿಶ್ಚಂಚಲನಾಗಿದ್ದನೋ ಅದೇ ರೀತಿಯಲ್ಲಿ ನಾವು ನಿಶ್ಚಂಚಲರಾಗಿ ನಂಬಿಗಸ್ತಿಕೆಯಿಂದಿರಬೇಕು. ಆತನ ನಿಶ್ಚಿತವಾದ ನಂಬಿಗಸ್ತಿಕೆಯು ನಮ್ಮನ್ನು ನಿರೀಕ್ಷೆಯುಳ್ಳವರನ್ನಾಗಿ ಮಾಡುತ್ತದೆ.

**ವಚನ 24.** ಇನ್ನೊಂದು "ಮಾಡೋಣ" ಎಂಬುದು ಈ ವಚನದಲ್ಲಿ ಕಾಣಿಸಿಕೊಳ್ಳುತ್ತದೆ: **ನಾವು ಪರಸ್ಪರ ಹಿತಚಿಂತಕರಾಗಿದ್ದು ಪ್ರೀತಿಸುತ್ತಿರಬೇಕಂತಲೂ ಸತ್ಕಾರ್ಯ**

**ಮಾಡುತ್ತಿರಬೇಕಂತಲೂ ಒಬ್ಬರನ್ನೊಬ್ಬರು ಪ್ರೇರೇಪಿಸೋಣ.** NEB ಯು ಹೀಗೆ ಹೇಳುತ್ತದೆ, "ನಾವು ಪ್ರೀತಿಸುವಂತೆ ಮತ್ತು ಒಳ್ಳೇತನದಲ್ಲಿ ಸಕ್ರಿಯವಾಗಿರುವಂತೆ ಬೇರೆಯರಲ್ಲಿ ಹೇಗೆ ಉತ್ತೇಜನವನ್ನು ಎಬ್ಬಿಸುವೆವೆಂಬುದನ್ನು ನೋಡಿಕೊಳ್ಳತಕ್ಕದ್ದು."

"ಪ್ರೇರೇಪಿಸೋಣ" ಎಂಬುದು ಎಷ್ಟೊಂದು ಬಲವಾದ ಪದವೆಂದರೆ ಅದು ಉನ್ಮಾದರೋಗ ಅಥವಾ "ಮೂರ್ಛೆರೋಗ" ಕ್ಕೆ ಅನ್ವಯಿಸಲ್ಪಟ್ಟಿರುತ್ತದೆ. ಇಂದು "ಪ್ರಚೋದಿಸು" ಎಂಬ ಪದವು (KJV)[55] ನಕಾರಾತ್ಮಕ ಅಧಿಕಾರ್ಥವನ್ನು ಹೊಂದಿಲ್ಲವಾಗಿದ್ದರೆ, ಅದು ಬಹುಶಃ ಬಳಸುವದಕ್ಕೆ ಅತ್ಯುತ್ತಮ ಪದವಾಗಿರುತ್ತಿತ್ತು. ಈ ಸನ್ನಿವೇಶದಲ್ಲಿರುವ ಪದವು παροξυσμός (*paroxusmos*), ಇದು ಪರಸ್ಪರ ಪ್ರೀತಿಯನ್ನುಂಟು ಮಾಡುವಂತೆ ಮತ್ತು ಒಳ್ಳೇ ಸೇವಾಕಾರ್ಯಗಳನ್ನು ಮಾಡುವಂತೆ ಬೇರೆಯವರನ್ನು ಬಲವಾಗಿ ಬೇಡಿಕೊಳ್ಳುವಿಕೆಯನ್ನು ಸೂಚಿಸುತ್ತದೆ. ಇಬ್ರಿಯರಿಗೆ ಪತ್ರಿಕೆಯಲ್ಲಿ ಈ ಮಾತಿನ ಅರ್ಥವು "ಕಿರುಕುಳದ ಅರ್ಥದಲ್ಲಿನ ಸಮ್ಮತಿಯ"[56] ಬದಲಾಗಿ ಒಂದು ಒಳ್ಳೇದಕ್ಕಾಗಿ ಪ್ರಚೋದನೆ ಮಾಡುವದಾಗಿರುತ್ತದೆ.

ಕ್ರೈಸ್ತೀಯ ಪ್ರೀತಿಯು ಕಾರ್ಯರೂಪದ ಫಲಿತವನ್ನು ಹೊಂದಿರತಕ್ಕದ್ದು. ಅಪೊಸ್ತಲರ ಕೃತ್ಯಗಳು 15:39ರಲ್ಲಿ *paroxusmos* ಎಂಬುದಕ್ಕೆ "ಅಂಥ ಒಂದು ತೀಕ್ಷ್ಣ ವಾಗ್ವಾದ" ಎಂದು ಅನುವಾದಿಸಲ್ಪಟ್ಟಿದೆ. ಇದರರ್ಥವು ನಾವು "ವಿವಾದ" (KJV) ವನ್ನು ಬೆಳೆಸಿಕೊಳ್ಳುವಷ್ಟರ ಮಟ್ಟಿಗೆ ಒಬ್ಬರನ್ನೊಬ್ಬರು ಶ್ರೇಷ್ಠವಾದ ಕ್ರಿಯೆಗಳನ್ನು ಮಾಡುವಂತೆ ಬೇಡಿಕೊಳ್ಳಬೇಕೆಂಬುದೋ? ಬುದ್ಧಿಹೇಳಲ್ಪಟ್ಟವನು ಸತ್ಕಾರ್ಯಗಳನ್ನು ಮಾಡದಿದ್ದರೆ, ನಮ್ಮ ಬೇಡಿಕೊಳ್ಳುವಿಕೆಯು ವೈಷಮ್ಯಕ್ಕೆ ನಡೆಸಬಹುದು. ಮೊದಲ ಕೊರಿಂಥ 13:5 ಅದೇ ಪದವನ್ನು ಬಳಸುತ್ತಾ ಕ್ರೈಸ್ತೀಯ ಪ್ರೀತಿಯು "ಸಿಟ್ಟುಗೊಳ್ಳುವದಿಲ್ಲ" ಎಂದು ಹೇಳುತ್ತದೆ. ನಾವು ಶಾಸ್ತ್ರಗಳ ಜೊತೆಯಲ್ಲಿ ಅತಿ ಬಲವಾದ ಮತ್ತು ಸಮರ್ಪಕವಾದ ಭಾವವನ್ನು ಬಳಸಿ ಪರಸ್ಪರರೊಳಗೆ ಪ್ರೀತಿಯನ್ನು ಪ್ರಚೋದಿಸಬೇಕು.

24ನೇ ವಚನದಲ್ಲಿ "ಪ್ರೀತಿ" ಯು "ಕ್ರಿಸ್ತನಿಗಾಗಿ ಪ್ರೀತಿ" ಆಗಿರುವದಾದರೆ, 25ನೇ ವಚನವು ನಮಗೆ ಈ ಪ್ರೀತಿಯು ಉತ್ತೇಜಿಸಲ್ಪಡುವ ಮತ್ತು ಕ್ರಿಸ್ತನಿಗೆ ಆರಾಧನೆಯು ಸಂಭವಿಸುವಂತಹ ಆರಾಧನೆಯ ಗಳಿಗೆಗಾಗಿ ನಾವು ರೂಢಿಯಾಗಿ ಕೂಡಿ ಬರಬೇಕು ಎಂದು ಹೇಳುತ್ತಿದೆ ಎಂದಾಗುತ್ತದೆ. ಅದು ಪರಸ್ಪರ ಕಡೆಗಿನ ಪ್ರೀತಿ ಆಗಿರುವದಾದರೆ, ಅದಕ್ಕೆ ಯಾವದಾದರೂ ಕ್ರಿಯೆಯ ಅಗತ್ಯವಿರುತ್ತದೆ: ಸಹೋದರರ ಕಡೆಗೆ ಪ್ರೀತಿಯಲ್ಲಿ ಬೆಳೆಯುವಂತಾಗಲು ನಾವು ನಿಯತಕ್ರಮವಾಗಿ ದೇವಜನರೊಂದಿಗೆ ಕೂಡಿ ಬರಬೇಕು.

**ವಚನ 25.** ಮುಂದಿನ "ಮಾಡೋಣ" ಎಂಬುದು ಸೂಚ್ಯಾರ್ಥವಾಗಿರುತ್ತದೆ: **ಸಭೆಯಾಗಿ ಕೂಡಿಕೊಳ್ಳುವದನ್ನು ಬಿಡದೆ** "ಇರೋಣ." ಈ ವಚನದಲ್ಲಿ ಉತ್ತೇಜಿಸಲ್ಪಟ್ಟಿರುವ ಚಟುವಟಿಕೆಗಳ ಮೂಲಕ, ಅಂದರೆ, "ಸಭೆಯಾಗಿ ಕೂಡಿಕೊಳ್ಳುವ" ಮೂಲಕ ಮತ್ತು **ಒಬ್ಬರನ್ನೊಬ್ಬರು ಎಚ್ಚರಿಸುವ** ಮೂಲಕ ಸ್ಥಿರತೆಯನ್ನು ಸಾಧಿಸಕೊಳ್ಳಬಹುದು. "ಸಭೆಯಾಗಿ ಕೂಡುವದು" ἐπισυναγωγή (*episunagōgē*) ಎಂಬ ಪದದ ಅರ್ಥವು "ಒಂದು ಕೂಟದಲ್ಲಿ ಒಟ್ಟಾಗಿ ಸೇರಿ ಬರುವದು" ಎಂದಾಗಿರುತ್ತದೆ. ಯಾಕೋಬ 2:2ರ ಜೊತೆಯಲ್ಲಿ, ಈ ವಾಕ್ಯಭಾಗವು ಮೊದಲನೆಯ ಶತಮಾನದ ಸಭೆಗೆ ಕೂಡಿ ಬರುವ ಸ್ಥಳವಾಗಿ "ಸಭಾಮಂದಿರ" ವು (συναγωγή, *sunagōgē*) ಬಳಸಲ್ಪಟ್ಟಿತು ಎಂಬುದನ್ನು ಪರೋಕ್ಷವಾಗಿ ಸೂಚಿಸಬಹುದಾಗಿದೆ.[57] ಆರಂಭದಲ್ಲಿ ಈ ಪದವು ಒಂದು "ಕೂಟ" ಎಂಬ ಅರ್ಥವನ್ನು ಹೊಂದಿತ್ತು, ಆದರೆ ಅದು ಕ್ರಮೇಣದಲ್ಲಿ "ಕೂಡಿಬರುವ ಸ್ಥಳ"[58] ಎಂಬ ಅರ್ಥವನ್ನು ಕೊಡುವದಾಯಿತು. ಹೇಗೂ, ಯೆರೂಸಲೇಮಿನ – ಅಲ್ಲಿ ಅನೇಕ ಸಭಾಮಂದಿರಗಳು ಇದ್ದವು – ಸಭಾಮಂದಿರಗಳಲ್ಲಿ ಕೂಡಿ ಬರುವ ಇಡೀ ಗುಂಪುಗಳು

ಪರಿವರ್ತನೆಗೊಂಡ ಜನರಾಗಿದ್ದಿರಬಹುದು. ಬಳಿಕ ಅವರು ಕೂಡಿ ಬರುತ್ತಿದ್ದ ಸ್ಥಳಗಳು ಬಹುಶಃ ಸಭೆಯ ಕೂಟಗಳಿಗೆ ಬಳಸಲ್ಪಟ್ಟಿರಬಹುದು. ಈ ಸಾಧ್ಯತೆಯ ಬೆಳಕಿನಲ್ಲಿ, ಹೊಸ ಒಡಂಬಡಿಕೆಯಲ್ಲಿ "ಸಭಾ ಕಟ್ಟಡಗಳು" ಇರಲೇ ಇಲ್ಲವೆಂದು ಹೇಳುವದು ಸಂಪೂರ್ಣ ಸತ್ಯವಾಗಲಾರದು.

ಕ್ರೈಸ್ತರು ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವದಕ್ಕೂ ಎಚ್ಚರಿಸುವದಕ್ಕೂ ಕೂಡಿ ಬರಬೇಕಾಗಿತ್ತು (ವ. 24). ಇದನ್ನು ದಿನಾಲೂ ಮಾಡಬೇಕೆಂದು ಲೇಖಕನು ಬೇಡಿಕೊಳ್ಳುತ್ತಾನೆ (3:12, 13). 25ನೇ ವಚನವು "ಕೂಡಿ ಬರುವಂತೆ ಪ್ರೋತ್ಸಾಹಿಸಿರಿ" ಎಂದು ಹೇಳುತ್ತಿಲ್ಲ, ಆದರೆ "ಪ್ರೋತ್ಸಾಹಿಸುವದಕ್ಕಾಗಿ ಕೂಡಿ ಬನ್ನಿರಿ" ಎಂದು ಹೇಳುತ್ತಿದೆ. ಆದಿ ಕ್ರೈಸ್ತರು ಒಟ್ಟಾಗಿ ಕೂಡಿ ಬರುವ ಮೂಲಕವಲ್ಲದೆ ಒಬ್ಬರನ್ನೊಬ್ಬರು ಹೇಗೆ ಪ್ರೋತ್ಸಾಹ ಮತ್ತು ಬಲಗೊಳಿಸಿರುವದಕ್ಕೆ ಸಾಧ್ಯ? ಅವರು ನಿರಂತರವಾಗಿ ನಂಬಿಗಸ್ತರಾಗಿರುವಂತೆ ಎಚ್ಚರಿಸುವದನ್ನು ಸಾಧಿಸುವದಕ್ಕಾಗಿ ಕೂಡಿ ಬರಬೇಕಿತ್ತು. ಭಕ್ತಿವೃದ್ಧಿಗೊಳಿಸುವದು, ಎಚ್ಚರಿಸುವದು, ಮತ್ತು ಪ್ರೋತ್ಸಾಹಿಸುವದು ಇವುಗಳು ಸಭೆಯಾಗಿ ಕೂಡಿ ಬರುವದರ ಸಾರಭೂತವಾದ ಉದ್ದೇಶಗಳಾಗಿರುತ್ತವೆ (1 ಕೊರಿಂಥ 14:26–33). ಕರ್ತನಿಗೆ ನಂಬಿಗಸ್ತರಾಗಿರುವಂತೆ ಬೇರೆ ವಿಶ್ವಾಸಿಗಳ ಸಂಗಡ ಕೂಡಿ ಬರದೆ ಇರುವವರಿಂದ ಇದು ಸಾಧ್ಯವಾಗುತ್ತದೆಂದು ಲೇಖಕನು ಪರಿಗಣಿಸಲಿಲ್ಲ. "ಏಕಾಂಗಿ" ಆಗಿರುವವನು ಒಬ್ಬ ವಿಶ್ವಾಸಿಯಾಗಿರಬಹುದು, ಆದರೆ ಆತನು ಸಾಮಾನ್ಯವಾಗಿ ಸ್ಥಿರತೆಯಿಂದಿರುವವನಲ್ಲ.

ಹಾಗಾದರೆ, ಈ ವಚನವು ಸುಮ್ಮನೇ ಪ್ರತಿ ವಾರದ ಕರ್ತನ ದಿನದಂದು ಕೂಡಿ ಬರುವಿಕೆಗಾಗಿ ಬೇಡಿಕೊಳ್ಳುತ್ತಿಲ್ಲ, ಅದು ಸಹ ಅಷ್ಟೇ ಪ್ರಾಮುಖ್ಯವೆಂಬುದು ನಿಜವೇ. ಬದಲಾಗಿ, ಹೆಚ್ಚು ಕೂಟಗಳಲ್ಲಿ ಜೊತೆಯ ಕ್ರೈಸ್ತರನ್ನು ಬಲಪಡಿಸುವದಕ್ಕೆ ಪ್ರೋತ್ಸಾಹವು ಕೊಡಲ್ಪಡತಕ್ಕದ್ದೆಂದು ಈ ಬುದ್ಧಿವಾದವು ಬೇಡಿಕೊಳ್ಳುತ್ತದೆ. ತುರ್ತು ಸಮಯಗಳಲ್ಲಿ ವಿಶೇಷ ಆರಾಧನೆಯ ಕೂಟಗಳು ಆ ಕಾರಣದಿಂದ ಸೂಕ್ತವಾಗಿರುತ್ತವೆ, ಯಾಕೆಂದರೆ ಪರಲೋಕ ತಂದೆಯ ಸಮೀಪಕ್ಕೆ ಬರುವಂತೆ ದೇವಜನರು ಒಟ್ಟಾಗಿ ಸೇರಿ ಬಂದಿರುವಾಗ ಪ್ರಾರ್ಥನೆಯ ಶಕ್ತಿಯನ್ನು ಯಾರು ಅಳೆಯಬಲ್ಲರು?

ಸಭೆಯಾಗಿ ಕೂಡಿ ಬರುವದನ್ನು "ಬಿಟ್ಟು ಬಿಡುವದು" (ἐγκαταλείπω, *egkataleipō*) ಮತಭ್ರಷ್ಟತೆಯ ಖಚಿತ ಸೂಚನೆಯಾಗಿರುತ್ತದೆ – ಅಥವಾ ಮತಭ್ರಷ್ಟತೆಯು ಶೀಘ್ರವೇ ಸಂಭವಿಸುವದು ಎಂಬುದಕ್ಕೆ ಸೂಚನೆಯಾಗಿರುತ್ತದೆ. "ಬಿಟ್ಟು ಬಿಡುವದು" ಎಂಬ ಪದದ ಅರ್ಥವು "ಮರೆತು ಬಿಡು" ಅಥವಾ "ತೊರೆದು ಬಿಡು" ಎಂದಾಗಿರುತ್ತದೆ. ದೇವಜನರು ಸಭೆಯನ್ನು ನಿರ್ಲಕ್ಷಿಸುವದು ಅನೇಕ ಸಾರಿ ನಂಬಿಕೆಯನ್ನು ಸಂಪೂರ್ಣ ತೊರೆದು ಬಿಡುವದಕ್ಕೆ ನಡಿಸುತ್ತದೆ. ಪತ್ರಿಕೆಯ ಆದಿ ವಾಚಕರು ಧರ್ಮಶಾಸ್ತ್ರದ ಪ್ರಕಾರವಾಗಿ ದೇವಾಲಯದ ಆರಾಧನೆಯಲ್ಲಿ ಮುಂದುವರೆಯುವಂತೆ ಬಲವಾದ ಯೆಹೂದಿ ಪ್ರಭಾವದ ಮೂಲಕ ಅವರ ಮೇಲೆ ಹೇರಲಾದ ಒತ್ತಡದ ವಿರುದ್ಧ ಹೋರಾಟದಲ್ಲಿದ್ದರು. ಅವರು ಕ್ರಿಸ್ತನಿಗೆ ನಂಬಿಗಸ್ತಿಕೆಯನ್ನು ಕಾಪಾಡಿಕೊಳ್ಳಬೇಕು ಎಂಬುದು ಲೇಖಕನ ಬುದ್ಧಿವಾದವಾಗಿತ್ತು. ಅವರು ಇನ್ನೂ ಬಿಟ್ಟು ಬಿಟ್ಟಿರಲಿಲ್ಲ, ಆದರೆ ಈ ಹಿಂದೆ ಇದೇ ರೀತಿಯ ಪರಿಶೋಧನೆಗಳಲ್ಲಿ ನಂಬಿಗಸ್ತರಾಗಿ ಉಳಿದಿದ್ದರು (ವಚನಗಳು 32–36).

ಈ ವಾಚಕರು **ದಿನವು ಸಮೀಪಿಸುತ್ತಾ ಬರುತ್ತದೆ** ಎಂಬುದನ್ನು ನೋಡುವದರಿಂದ ಸಹೋದರರಲ್ಲಿ ಪ್ರೋತ್ಸಾಹವು ಮತ್ತಷ್ಟು ಅಗತ್ಯವಾಗಿತ್ತು. ಒಬ್ಬ ವ್ಯಕ್ತಿಯು ತನ್ನ ಸ್ವಂತ ಮರಣ ಅಥವಾ ಕರ್ತನ ಎರಡನೆಯ ಬರೋಣದ ವಿಷಯವಾಗಿ "ದಿನವು ಸಮೀಪಿಸುತ್ತಾ ಬರುವದನ್ನು"

**ನೋಡ**ಲಾರನು. ಆರೋಗ್ಯ ಕೆಟ್ಟಿರುವವನು ಅಥವಾ ವೃದ್ಧನು ಮತ್ತು ದುರ್ಬಲನಾಗುತ್ತಿರುವವನು ತನ್ನ ಮರಣವು ಸಮೀಪಿಸುತ್ತಿದೆಯೆಂಬುದನ್ನು ಅರ್ಥಮಾಡಿಕೊಳ್ಳಬಹುದು. ಹೇಗೂ, ಈ ಎರಡರಲ್ಲಿ ಒಂದರ ಕುರಿತ ನಿಖರವಾದ ಸಮಯದ ಜ್ಞಾನವನ್ನು ಹೊಂದಿರಬೇಕೆಂದರೆ ಅದಕ್ಕೆ ದೇವರಿಂದ ಒಂದು ಪ್ರಕಟನೆಯ ಅಗತ್ಯವಿರುತ್ತದೆ.

ಒಂದು ದೈವಿಕ ಪ್ರಕಟನೆಯು ಬರಲಿದ್ದ ಯೆರೂಸಲೇಮಿನ ನಾಶನವನ್ನು ಕಾಣುವಂತೆ ಕ್ರೈಸ್ತರನ್ನು ಶಕ್ತಗೊಳಿಸಿತ್ತು; ಆ ಪ್ರವಾದನೆಗಳು ಮತ್ತಾಯ 24, ಮಾರ್ಕ 13, ಮತ್ತು ಲೂಕ 21ರಲ್ಲಿ ದಾಖಲಿಸಲ್ಪಟ್ಟಿವೆ. ಯೇಸುವಿನ ಹೇಳಿಕೆಗಳು ವಿಶೇಷವಾಗಿ ಯೂದಾಯದ ಯೆಹೂದಿಗಳಿಗೆ "ದಿನವು ಸಮೀಪಿಸುತ್ತಿದೆ" ಎಂಬುದರ ಕಾಲವನ್ನು ತಿಳಿಯುವ ದಾರಿಯನ್ನು ಒದಗಿಸಿದನು. "ದಿನ" ಎಂಬುದು ಕ್ರಿ.ಶ. 70ರಲ್ಲಿ ದೇವಾಲಯದ ನಾಶನದ ಜೊತೆಗೆ ಯೆರೂಸಲೇಮಿನ ಮುತ್ತಿಗೆ ಮತ್ತು ಪತನದ ಮೂಲಕವಾಗಿ ಸಾವಿರಾರು ಯೆಹೂದ್ಯರ ಮೇಲೆ ಉಂಟಾದ ಬಾಧೆಯ ಕಾಲದ ಒಂದು ಭಾಗವಾಗಿರಬಹುದಾಗಿದೆ.

ನಾವು ಕ್ರಿಸ್ತನ ಎರಡನೆಯ ಬರೋಣವನ್ನು ಮುಂತಿಳಿಸುವದಕ್ಕೆ ಸಾಧ್ಯವಿಲ್ಲ ಯಾಕೆಂದರೆ ಆ ಕಾಲವನ್ನು ಸೂಚಿಸುವಂತಹ ಯಾವದೇ ಸೂಚನೆಗಳಿರುವದಿಲ್ಲ. ಯೇಸುವಿನಿಂದ ಕೊಡಲ್ಪಟ್ಟಿರುವ ಸೂಚನೆಗಳು ಟೈಟಸ್ ಮತ್ತು ಆತನ ರೋಮನ್ ಸೈನ್ಯದ ಕೈಯಲ್ಲಿ ಯೆರೂಸಲೇಮ್ ಪತನಗೊಳ್ಳುವದಕ್ಕೆ ಸಂಬಂಧಿಸಿದ ಪ್ರವಾದನೆಗಳಾಗಿವೆ – ಹೊರತು ಅಂತ್ಯಕಾಲದ ಕುರಿತಾಗಿ ಅಲ್ಲ. ಯೆರೂಸಲೇಮಿನ ಅಂತ್ಯದ ಕುರಿತು ಯೇಸು ಪ್ರವಾದನೆಗಳನ್ನು ನೀಡಿದ ವೇಳೆಯಲ್ಲಿ, ಆತನು ಅಂತ್ಯಕಾಲದ ಬಗ್ಗೆಯಾಗಲಿ ಅಥವಾ ತನ್ನ ಎರಡನೆಯ ಬರೋಣದ ಬಗ್ಗೆಯಾಗಲಿ ತನಗೆ ತಿಳಿಯದು ಎಂದು ಘೋಷಿಸಿದನು (ಮತ್ತಾಯ 24:36). ಏನು ಸಂಭವಿಸಬಹುದೆಂಬುದನ್ನು ತಾನು ಬಲ್ಲವನಾಗಿದ್ದರಿಂದ, ಯೇಸು ಆ ಪಟ್ಟಣದ ವಿಷಯದಲ್ಲಿ ಕಣ್ಣೀರಿಟ್ಟನು (ಲೂಕ 19:41, 42). (ನೋಡಿರಿ "ಹೆಚ್ಚಿನ ಅಧ್ಯಯನಕ್ಕಾಗಿ: 'ಸೂಚನೆಗಳು' ಮತ್ತು 'ಸಮೀಪಿಸುತ್ತಿರುವ ದಿನ,'" ಪುಟ 204-6).

ಲೇಖಕನು 23ರಿಂದ 25 ವಚನಗಳಲ್ಲಿ ಏನು ಹೇಳುತ್ತಿದ್ದಾನೆಂಬುದರ ಬಗ್ಗೆ Moses Stuartನು ಒಂದು ಅಂದವಾ ಸಾರಾಂಶವನ್ನು ಕೊಡುತ್ತಾನೆ: "'ಸಹೋದರರೇ, ಮತಭ್ರಷ್ಟತೆಯ ವಿರುದ್ಧ ನಿಮ್ಮನ್ನು ಕಾಪಾಡಿಕೊಳ್ಳುವದಕ್ಕೆ ಸಾಧ್ಯವಾದದ್ದನ್ನೆಲ್ಲಾ ಮಾಡಿರಿ. ಮತ್ತು ಯೆಹೂದಿಮತಕ್ಕೆ ಹಿಂದಿರುಗುವದು ಅತ್ಯಂಥ ಕೇಡುಗಾಲ ಆಗುತ್ತದಾದ್ದರಿಂದ ಇದನ್ನು ಮತ್ತಷ್ಟು ಮಾಡಿರಿ; ಯೆಹೂದಿ ದೇವಾಲಯ ಮತ್ತು ರಾಜ್ಯವು ನಾಶಗೊಳಿಸಲ್ಪಡುವಂತಹ ಕಾಳವು ಸಮೀಪವಾಗಿದೆ.'"[59]

### ಎಚ್ಚರಿಕೆ: ಮರಣವನ್ನುಂಟು ಮಾಡುವ ಪಾಪ (10:26-31)

**26ಯಾಕೆಂದರೆ ಸತ್ಯದ ಪರಿಜ್ಞಾನವನ್ನು ನಾವು ಹೊಂದಿದ ಮೇಲೆ ಬೇಕೆಂದು ಪಾಪಮಾಡಿದರೆ ಪಾಪರಿಹಾರಕ್ಕೆ ಇನ್ನಾವ ಯಜ್ಞವೂ ಇರುವದಿಲ್ಲ; 27ಅತ್ಯಂತ ಭಯದಿಂದ ಎದುರುನೋಡತಕ್ಕ ನ್ಯಾಯತೀರ್ಪೂ ದೇವರ ವಿರೋಧಿಗಳನ್ನು ಧಹಿಸುವ ತೀಕ್ಷ್ಣವಾದ ಅಗ್ನಿಯೂ ಇವೇ ನಮ್ಮ ಮುಂದೆ ಇರುವವು. 28ಮೋಶೆಯ ವಿಧಿಗಳನ್ನು ಅಸಡ್ಡೆ ಮಾಡಿದವನಿಗೆ ಇಬ್ಬರು ಇಲ್ಲವೆ ಮೂವರು ಸಾಕ್ಷಿಗಳ ಮಾತಿನ ಮೇಲೆ ಕನಿಕರವಿಲ್ಲದೆ ಮರಣದಂಡನೆ ಆಗುತ್ತದಷ್ಟೆ. 29ಯಾವನು ದೇವಕುಮಾರನನ್ನು ತುಳಿದು ಒಡಂಬಡಿಕೆಯನ್ನು ಸ್ಥಿರಪಡಿಸಿದಂಥ ತನ್ನನ್ನು ಪವಿತ್ರಮಾಡಿದಂಥ ರಕ್ತವನ್ನು ಅಶುದ್ಧವೆಂದೆಣಿಸಿ ದೇವರ ಕೃಪಾವರವಾಗಿರುವ ಆತ್ಮನನ್ನು ತಿರಸ್ಕಾರ ಮಾಡಿದ್ದಾನೋ ಅವನು ಇನ್ನೂ ಎಷ್ಟೋ ಕ್ರೂರವಾದ ದಂಡನೆಗೆ**

**ಪಾತ್ರನಾಗಬೇಕೆಂಬದನ್ನು ಯೋಚಿಸಿರಿ. [30]ಮುಯ್ಯಿಗೆ ಮುಯ್ಯಿ ತೀರಿಸುವದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನೆಂದು ಹೇಳಿದಾತನನ್ನು ಬಲ್ಲೆವು; ಇದಲ್ಲದೆ ಕರ್ತನು ತನ್ನ ಜನರ ನ್ಯಾಯವನ್ನು ವಿಚಾರಿಸುವನೆಂತಲೂ ಹೇಳಿಯದೆ. [31]ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿಬೀಳುವದು ಭಯಂಕರವಾದದ್ದು.**

ಶಾಸ್ತ್ರಗಳ ಒಬ್ಬ ವ್ಯಾಖ್ಯಾನಕಾರನ ದೈವಶಾಸ್ತ್ರೀಕ ದೃಷ್ಟಿಕೋನವು ಈ 10:26-31ರಂತಹ ವಾಕ್ಯಭಾಗದ ಕುರಿತ ಆತನ ತಿಳುವಳಿಕೆಯ ಮೇಲೆ ಅತ್ಯಂಥ ಬಹಳವಾಗಿ ಪರಿಣಾಮ ಬೀರುವದು. ಸ್ವಾಭಾವಿಕವಾಗಿಯೇ, "ಒಂದು ಸಾರಿ ರಕ್ಷಿಸಲ್ಪಟ್ಟರೆ, ಸದಾಕಾಲವೂ ರಕ್ಷಿಸಲ್ಪಟ್ಟಂತೆ" ಎಂದು ನಂಬುವ ವ್ಯಕ್ತಿಯು ಈ ವಾಕ್ಯಭಾಗದೊಂದಿಗೆ ನಿಜವಾದ ಸಮಸ್ಯೆಯನ್ನು ಎದುರಿಸುವನು. ಕೆಲವರು ಇದು ಕೇವಲ ಮೊದಲನೆಯ ಶತಮಾನದಲ್ಲಿ ಪರಿವರ್ತನೆಗೊಂಡ ಯೆಹೂದ್ಯರಿಗೆ ಮಾತ್ರವೇ ಅನ್ವಯಿಸುತ್ತದೆ ಎಂದು ಹೇಳುತ್ತಾರೆ; ಅಂದರೆ, ಯೆಹೂದಿ ಮತಕ್ಕೆ ಹಿಂದಿರುಗಿ ಹೋದವನು ನಿಜವಾಗಿಯೂ ಪರಿವರ್ತನೆಗೊಂಡವನಾಗಿ ಇರಲೇ ಇಲ್ಲವೆಂದು ಅವರು ನಂಬುತ್ತಾರೆ. ಈ ವಾಕ್ಯಭಾಗವವು ಅಂತಹ ಅರ್ಥವನ್ನು ಹೊಂದಿರಲಾರದು. ನಾವು 6:4-6ರಲ್ಲಿನ ನಮ್ಮ ಅಧ್ಯಯನದಲ್ಲಿ ನೋಡಿದ ಪ್ರಕಾರ, ನಿಜವಾಗಿಯೂ ಪರಿವರ್ತನೆಗೊಂಡವರು ಸಹ ಬಿದ್ದುಹೋಗಬಲ್ಲರು.

ಲೇಖಕನು ಮತಭ್ರಷ್ಟತೆಯ ಭಯಂಕರವಾದ ಪಾಪವನ್ನು ಮೂರು ದೃಷ್ಟಿಕೋನಗಳಿಂದ ಬಣ್ಣಿಸುತ್ತಾನೆ.

**ವಚನ 26.** ಈ ವಚನದಲ್ಲಿ ಹೇಳಲಾಗಿರುವ ಪಾಪವು ಒಂದು ಬೇಕೆಂದು ಮಾಡಿದ ಪಾಪವಾಗಿದೆ. ಅದು ನಿರಂತರವಾದ ಬಂಡಾಯವಾಗಿರುವದು.

**ಯಾಕೆಂದರೆ** (*γάρ*, *gar*) ಎಂಬುದು ಈ ಯೋಚನೆಯನ್ನು ಹಿಂದಿನ ಪರಿಚ್ಛೇದದ ಯೋಚನೆಯೊಂದಿಗೆ ಜೋಡಿಸುವದಾಗಿದೆ. ಈ ಭಯ ಹುಟ್ಟಿಸುವ ಹೇಳಿಕೆಯು ಸಭೆಯಾಗಿ ಕೂಡಿಕೊಳ್ಳುವದನ್ನು ಬಿಟ್ಟು ಬಿಡಬೇಡಿರಿ ಎಂದು ಬುದ್ಧಿವಾದ ಹೇಳಿದ ನಂತರದಲ್ಲಿ ಬರುತ್ತದೆ. ಸಭೆಯಾಗಿ ಕೂಡಿಕೊಳ್ಳುವದನ್ನು ಬಿಡುವದರ ಮತ್ತು ಆ ಮೂಲಕ ಕರ್ತನನ್ನು ತೊರೆದು ಬಿಡುವದರ ಅಪಾಯಕರವಾದ ದುಷ್ಪರಿಣಾಮಗಳ ಬಗ್ಗೆ ವಾಚಕನ ಮನಸ್ಸಿನ ಮೇಲೆ ಛಾಪು ಮೂಡಿಸುವದಕ್ಕಾಗಿ ಈ ಎಚ್ಚರಿಕೆಯು ಕೊಡಲ್ಪಟ್ಟಿತು. ಇದು ಕೇವಲ ಒಬ್ಬ ದುರ್ಬಲ ಕ್ರೈಸ್ತನನ್ನು ಅಥವಾ ಒಬ್ಬ ಹೊಸದಾಗಿ ಪರಿವರ್ತನೆಗೊಂಡವನನ್ನು ಸೂಚಿಸುವದಕ್ಕೆ ಸಾಧ್ಯವಿಲ್ಲ. ಇದು ನಂಬಿಕೆಯಿಂದ ಬೇಕೆಂದೇ ಭ್ರಷ್ಟನಾಗಿರುವವನಿಗೆ ಸರಿಹೊಂದುತ್ತದೆ (ಬಹಳ ಮಟ್ಟಿಗೆ 6:4-6ರಲ್ಲಿ ಪ್ರಸ್ತಾಪಿಸಲ್ಪಟ್ಟವರ ರೀತಿಯಲ್ಲಿಯೇ).

ಆರಾಧನೆಯ ಸಭೆಗಳನ್ನು ನಿರ್ಲಕ್ಷಿಸುವದು ಮತಭ್ರಷ್ಟತೆಯ ದಿಕ್ಕಿಗೆ ಬೆರಳು ತೋರಿಸುತ್ತದೆ ಮತ್ತು ಅದರ ತೀವ್ರ ಅಪಾಯದ ಕುರಿತು ಇಲ್ಲಿ ಪ್ರಸ್ತಾಪಿಸುವದಕ್ಕೆ ಕಾರಣವಾಗಿರಬಹುದಾಗಿದೆ. ನಾವು "ಸಭೆಯಾಗಿ ಕೂಡಿಕೊಳ್ಳುವದನ್ನು ಬಿಟ್ಟುಬಿಟ್ಟಿರುವ" ದರಿಂದ, ಕ್ರಿಸ್ತನನ್ನು ಇಚ್ಛಾಪೂರ್ವಕವಾಗಿ ತಿರಸ್ಕರಿಸುವದರ ಅಪಾಯದ ಬಗ್ಗೆ ತಿಳಿಸುವದಕ್ಕೆ ಲೇಖಕನು ಮುಂದಕ್ಕೆ ಸಾಗುತ್ತಾನೆ. ಇಂದು ಜನಪ್ರಿಯವಾಗಿರುವ ಅಭಿಪ್ರಾಯದಲ್ಲಿ, ಈ ಎರಡು ಕಾರ್ಯಗಳು ನಿಕಟವಾಗಿ ಸಂಬಂಧ ಹೊಂದಿರುವದಿಲ್ಲ. ಅನೇಕರು ಸಭೆಗಳನ್ನು ಬಿಟ್ಟು ಬಿಡುತ್ತಾರೆ ಆದಾಗ್ಯೂ ಕ್ರಿಸ್ತನಿಗೆ ಸತ್ಯವಂತರಾಗಿದ್ದೇವೆಂದು ಹೇಳಿಕೊಳ್ಳುತ್ತಾರೆ. ಅದು ಹಾಗೆ ಮಾಡುವದಕ್ಕೆ ಸಾಧ್ಯವಿರುವದಿಲ್ಲ. ನಾವು ಹೇಡಿತನ ಅಥವಾ ಅಸಡ್ಡೆಯಿಂದ ಸಭೆಯನ್ನು ಬಿಟ್ಟು ಬಿಡುವದಾದರೆ, ಅದು ದೇವರ ಕಟ್ಟಳೆಗಳನ್ನು ಮುಕ್ತವಾಗಿ ಧಿಕ್ಕಾರ ಮಾಡುವದಕ್ಕೆ ನಡಿಸುತ್ತದೆ. ಆಗ ಹೇಡಿತನದ ಪಾಪವು ಬಹಳ ಸರ್ವಸಾಧಾರಣವಾಗಿತ್ತು, ಮತ್ತು ಸಾಧ್ಯವಾದಷ್ಟು ಕಠೋರ

ಭಾಷೆಯಲ್ಲಿ ಖಂಡಿಸಲ್ಪಟ್ಟಿರುತ್ತದೆ (ನೋಡಿರಿ ಪ್ರಕಟನೆ 21:8).

**ನಾವು** ಎಂದು ಹೇಳುವ ಮೂಲಕ, ಲೇಖಕನು ಮತಭ್ರಷ್ಟತೆಯ ತುದಿಯಲ್ಲಿದ್ದ ವ್ಯಕ್ತಿಗಳೊಂದಿಗೆ ಸೌಮ್ಯದಿಂದ ತನ್ನನ್ನು ಸೇರ್ಪಡೆಗೊಳಿಸಿಕೊಳ್ಳುತ್ತಾನೆ. ಈ ಸೇರ್ಪಡೆಗೊಳಿಸಿಕೊಳ್ಳುವಿಕೆಯು ಆತನ ಸರಿಹೊಂದಿಸಿಕೊಳ್ಳುವಿಕೆಯಾಗಿತ್ತು.

ಗ್ರೀಕ್ ವಾಕ್ಯದಲ್ಲಿ, **ಬೇಕೆಂದು** ಅಥವಾ "ಉದ್ದೇಶಪೂರ್ವಕವಾಗಿ" ಎಂಬ ಪದವು ಒತ್ತಿ ಹೇಳುವದಕ್ಕಾಗಿ ಮೊದಲಲ್ಲಿಯೇ ಇಡಲ್ಪಟ್ಟಿದೆ. ಈ ವಚನವು ಬೇಕೆಂದು ಮತ್ತು ನಿರಂತರವಾಗಿ ಮಾಡುವ ಪಾಪವನ್ನು ಕುರಿತು ಮಾತಾಡುತ್ತದೆ. "ಸ್ಪಷ್ಟವಾಗಿ, ಇಡೀ ವಾಕ್ಯಭಾಗವು ನಿರ್ಲಜ್ಜ ಅವಿಧೇಯತೆ ಹಾಗೂ ಮತಭ್ರಷ್ಟತೆಯನ್ನು ಕುರಿತಾಗಿರುತ್ತದೆ."[60]

26ನೇ ವಚನದಲ್ಲಿ ಪ್ರಸ್ತಾಪಿಸಲಾಗಿರುವ **ಪರಿಜ್ಞಾನ** (ἐπίγνωσις, *epignōsis*) ಎಂಬುದರ ಅರ್ಥವು ಪ್ರಾಥಮಿಕ ತಿಳುವಳಿಕೆಗೆ (γνῶσις, *gnōsis*). ತದ್ವಿರುದ್ಧವಾಗಿ, "ಪೂರ್ಣವಾಗಿ ತಿಳಿದಿರುವದು" ಎಂದಾಗಿರುತ್ತದೆ. ಈ ಬೇಕೆಂದು ಪಾಪ ಮಾಡಿದವನು ಸಾಧಾರಣವಾದ *gnosis* ಕ್ಕಿಂತ ಹೆಚ್ಚಿನದ್ದನ್ನು ಪಡೆದವನಾಗಿದ್ದನು, ಅದು ಆತನನ್ನು **ಸತ್ಯದ**[61] ಕಡೆಗೆ ಕರೆ ತಂದಿತ್ತು. ಆತನು ಹೊಸದಾಗಿ ಪರಿವರ್ತನೆಗೊಂಡವನು ಆಗಿರಲಿಕ್ಕೆ ಸಾಧ್ಯವಿಲ್ಲ, ಬದಲಾಗಿ ವಾಕ್ಯಭಾಗವು ಸತ್ಯದ ಪೂರ್ಣ ತಿಳುವಳಿಕೆ ಇದ್ದವನಿಗೆ ಅನ್ವಯವಾಗುತ್ತದೆ, ಅದರಿಂದ ಆತನು ಉದ್ದೇಶಪೂರ್ವಕವಾಗಿ ವಿಮುಖನಾಗುತ್ತಿದ್ದನು. ಈ ವಚನವು "ಪಾಪದ ಬೇಕೆಂದೇ ಮಾಡುವಿಕೆಯನ್ನು ಎತ್ತಿ ತೋರಿಸುತ್ತದೆ," ಯಾಕೆಂದರೆ "'ಸತ್ಯದ' ಒಂದು ಬುದ್ಧಿಪೂರ್ವಕ ತಿಳುವಳಿಕೆಯು ಈಗಾಗಲೆ ಹೊಂದಿಕೊಳ್ಳಲಾಗಿತ್ತು."[62]

ಹಾಗಾದರೆ, ಈ ವಿಭಾಗವು, ಒಂದು ಕಾಲದಲ್ಲಿ ನಿಜವಾಗಿಯೂ ಪರಿವರ್ತನೆಗೊಂಡವರನ್ನು ಕುರಿತು ಮಾತಾಡುತ್ತದೆ. 2 ತಿಮೊಥೆ 3:7ರ ಪ್ರಕಾರ, ಕೆಲವರು "ಯಾವಾಗಲೂ ಉಪದೇಶ ಕೇಳುತ್ತಿದ್ದರೂ ಸತ್ಯದ ಪರಿಜ್ಞಾನವನ್ನು [*epignōsis*] ಹೊಂದಲಾರದವರು" ಆಗಿದ್ದಾರೆ. ರೋಮಾ 10:2ನೇ ವಚನವು "ದೇವರ ವಿಷಯದಲ್ಲಿ ಆಸಕ್ತರಾಗಿದ್ದ" ಆದರೂ "ಜ್ಞಾನದ" ಕೊರತೆಯಿದ್ದ ಯೆಹೂದ್ಯರ ಬಗ್ಗೆ ಮಾತಾಡುತ್ತದೆ. ಇಬ್ರಿಯ 10:26ನೇ ವಚನವು ಕ್ರೈಸ್ತ ನಂಬಿಕೆಗೆ ಒಂದು "ನಿಶ್ಚಲವಾದ ಸಮರ್ಪಣೆ ಹೊಂದಿದ್ದ" ಜ್ಞಾನವನ್ನು ಹೊಂದಿದವನ ಬಗ್ಗೆ ಮಾತಾಡುತ್ತದೆ.[63] ಒಬ್ಬನು ಈ ಪ್ರಮಾಣದ ನಂಬಿಕೆಯನ್ನು ಹೊಂದಿ ಹಿಂಜರಿದು ಹೋಗುವದಾದರೆ, ಆತನು ಅದನ್ನು ಮಾಡಲು ಶಕ್ತನಾಗಿದ್ದಾನಷ್ಟೆ, ಆಗ ಆತನ ಅಂತ್ಯಾವಸ್ಥೆಯು ಭಯಾನಕ. ಒಬ್ಬನು ಪರಿವರ್ತನೆಗೊಂಡು ಈ ಜ್ಞಾನವನ್ನು ಪಡೆದುಕೊಂಡು, ಮತ್ತು ಬಳಿಕ ಬೇಕೆಂದು ನಿರಂತರವಾದ ರೀತಿಯಲ್ಲಿ ಪಾಪ ಮಾಡುವದಾದರೆ, ಆತನಿಗೆ ನಿರೀಕ್ಷೆಯೇ ಇರುವದಿಲ್ಲ. ಅಂಥ ವ್ಯಕ್ತಿಯು ಹುಚ್ಚುತನದಿಂದ ವಿಮುಖನಾಗಿ ಹೋಗುವದಕ್ಕಿಂತಲೂ ಉತ್ತಮವಾಗಿ ತಿಳಿದವನಾಗಿರುತ್ತಾನೆ.

ಲೇಖಕನ ಎಚ್ಚರಿಕೆಯು ನಿರ್ಲಕ್ಷ್ಯದಿಂದ ಅಥವಾ ಉದ್ದೇಶವಿಲ್ಲದೆ ಮಾಡಿದ ಪಾಪವನ್ನು ಕುರಿತಾಗಿರುವದಿಲ್ಲ, ಆದರೆ ದರ್ಪದ ಅಥವಾ ಸೊಕ್ಕಿನ ಪಾಪವನ್ನು ಕುರಿತಾಗಿರುತ್ತದೆ.[64] ಅಂಥ ಪಾಪವನ್ನು ಮಾಡುವವನನ್ನು 1 ಯೋಹಾನ 2:19ರಲ್ಲಿರುವವರೊಂದಿಗೆ ಸಮಾನಗೊಳಿಸಬೇಕಾಗಿಲ್ಲ, ಅವರ ಕುರಿತು ಹೀಗೆ ಹೇಳಲಾಗಿರುತ್ತದೆ, "ಅವರು ನಮ್ಮನ್ನು ಬಿಟ್ಟು ಹೊರಟು ಹೋದರು, ಆದರೆ ಅವರು ನಮ್ಮವರಾಗಿರಲಿಲ್ಲ." ನಿಜವಾಗಿಯೂ ಪರಿವರ್ತನೆಗೊಳ್ಳದೆ ಇದ್ದಂಥ ಅನೇಕರು ಇರಬಹುದಾಗಿದೆ. ಇನ್ನು ಕೆಲವರು, ಪರಿವರ್ತನೆಗೊಂಡಿದ್ದಾಗ್ಯೂ, ಒಂದು ಅಸಮರ್ಪಕವಾದ ಮನೋಭಾವವನ್ನು ಉಳಿಸಿಕೊಂಡವರಾಗಿದ್ದು ಅದು ಅವರನ್ನು ಪಾಪಕ್ಕೆ ನಡಿಸಿತು, ಮಂತ್ರವಾದಿಯಾದ

ಸೀಮೋನನ ಪ್ರಕರಣವು ಈ ರೀತಿಯದ್ದಾಗಿತ್ತು (ಅಪೊಸ್ತಲರ ಕೃತ್ಯಗಳು 8:13, 18-24). ಒಂದು ಪಾಪದ ಬಳಿಕ ಆತನ ಸ್ಥಿತಿಯನ್ನು ಬಣ್ಣಿಸುವ ಪದಗಳನ್ನು ಅಧ್ಯಯನ ಮಾಡಿರಿ, ಯಾಕೆಂದರೆ ಆ ಪಾಪದ ಬಗ್ಗೆ ಮಾತ್ರವೇ ಪಶ್ಚಾತ್ತಾಪ ಪಡುವಂತೆ ಆತನಿಗೆ ಹೇಳಲಾಯಿತು. ಅಪೊಸ್ತಲರ ಕೃತ್ಯಗಳು 8:22 "*ಈ* ನಿನ್ನ ಕೆಟ್ಟತನವನ್ನು" ಎಂದು ಸೂಚಿಸುತ್ತದೆ. ಅದಕ್ಕೆ ತದ್ವಿರುದ್ಧವಾಗಿ, ಇಬ್ರಿಯ 10:26ರಲ್ಲಿನ ಪಾಪವು ನಿರಂತರವಾಗಿ ಮಾಡುವಂತದ್ದು ಮತ್ತು ಜೀವವುಳ್ಳ ದೇವರನ್ನು ಬಿಟ್ಟು ಹೋಗುವದರಲ್ಲಿ ಫಲಿತಗೊಳ್ಳುವದಾಗಿದೆ (3:12). ಇತರ ಆವೃತ್ತಿಗಳು ಇದನ್ನು ಸ್ಪಷ್ಟಗೊಳಿಸಲು ಸಹಾಯ ಮಾಡುತ್ತವೆ. TEV ಯಲ್ಲಿ "ನಾವು ಉದ್ದೇಶಪೂರ್ವಕವಾಗಿ ಪಾಪವನ್ನು ಮಾಡುತ್ತಲೇ ಹೋದರೆ" ಎಂದು ಮತ್ತು NIV ಯಲ್ಲಿ "ನಾವು ಬೇಕೆಂದೇ ಪಾಪ ಮಾಡುತ್ತಾ ಮುಂದುವರೆಯುವದಾದರೆ" ಎಂದು ಇರುತ್ತದೆ.[65]

ಅಂಥ ಕೃತ್ಯದಿಂದಾಗುವ ಪರಿಣಾಮವೇನು? **ಪಾಪಪರಿಹಾರಕ್ಕಾಗಿ ಇನ್ನಾವ ಯಜ್ಞವೂ ಇರುವದಿಲ್ಲ.** ಒಬ್ಬನು ಕ್ರಿಸ್ತನಿಂದ ವಿಮುಖವಾಗುವಾಗ, ಕ್ಷಮಾಪಣೆಯನ್ನು ಹೊಂದಿಕೊಳ್ಳುವದಕ್ಕೆ ಯಾವ ವಿಧಾನವೂ ಇರುವದಿಲ್ಲ. ಕ್ರಿಸ್ತನು "ಒಂದೇ ಸಾರಿ" ಮರಣಿಸಿದನಾದ್ದರಿಂದ, ಆತನ ಸಮರ್ಪಣೆಯು ಪುನರಾವರ್ತಿಸುವಂಥದ್ದಲ್ಲ. ರಕ್ಷಣೆಗಾಗಿ ಬೇರೆ ಇನ್ನಾವ ದಾರಿಯೂ ಒದಗಿಸಲ್ಪಟ್ಟಿರುವದಿಲ್ಲ. ಈ ಒಂದೇ ದಾರಿಯು ಸಂಪೂರ್ಣವಾಗಿ ತಿರಸ್ಕರಿಸಲ್ಪಟ್ಟಾಗ, ರಕ್ಷಣೆಯನ್ನು ಕಳೆದುಕೊಳ್ಳಲ್ಪಡುತ್ತದೆ. ಹಿಂಸೆಯ ಮಧ್ಯದಲ್ಲಿ ಮತಭ್ರಷ್ಟತೆಯ ಪಾಪವು ಆದಿ ಸಭೆಯಲ್ಲಿ ಒಂದು ನಿರಂತರವಾದ ಸಮಸ್ಯೆಯಾಗಿತ್ತು.

ಪೇತ್ರನು ಪಾಪದಿಂದ "ತಪ್ಪಿಸಿಕೊಂಡು" ಇದ್ದವರು ತಾವು ತೊರೆದ ಪಾಪಗಳ ಕಡೆಗೆ ಪುನಃ ತಿರುಗಿಕೊಂಡವರನ್ನು ಕುರಿತು ಮಾತಾಡಿದನು. ಅವರ "ಅಂತ್ಯಸ್ಥಿತಿಯು ಮೊದಲಿಗಿಂತ ಕೆಟ್ಟದ್ದಾಗಿದೆ" ಎಂದು ಹೇಳುತ್ತಾನೆ (2 ಪೇತ್ರ 2:20-22). ಪೇತ್ರನು ಇಲ್ಲಿ "ಮೊದಲ ಸ್ಥಿತಿ" ಯಲ್ಲಿ ಉಳಿದಿರುವವನನ್ನು ಕುರಿತು ಮಾತಾಡುತ್ತಿದ್ದಾನೆ, ಅವರು ಅದನ್ನು ಬಿಟ್ಟವರಾಗಿ ಇರಲೇ ಇಲ್ಲ ಎಂದು ಕ್ಯಾಲ್ವಿನ್ ವಾದಿಗಳು ಹೇಳಿಕೊಳ್ಳುವರು. ಹಾಗಿದ್ದರೆ ಅಂಥ ವ್ಯಕ್ತಿಯು ಎಂದಿಗೂ ಪಾಪದಿಂದ ತಪ್ಪಿಸಿಕೊಂಡಿರಲೇ ಇಲ್ಲ ಎಂದಾಗುತ್ತದೆ. ಒಬ್ಬ ನಿಜವಾಗಿಯೂ ಪರಿವರ್ತನೆಗೊಂಡವನು ಮತಭ್ರಷ್ಟನಾಗುವದು ಸಾಧ್ಯವಿದೆಯೋ? ಅದು ಸಾಧ್ಯವಿದೆಯೆಂದು ಪೌಲನು ಹೇಳಿದನು. ರೋಮಾ 11:22ನ್ನು ಓದಿರಿ, ಇದು ಈ ವಿಷಯದ ಕುರಿತು ಅತ್ಯಂಥ ಸ್ಪಷ್ಟವಾದ ವಾಕ್ಯಭಾಗವಾಗಿದೆ, ಮತ್ತು ಗಲಾತ್ಯ 5:4ನ್ನು ಓದಿರಿ.

ಒಬ್ಬ ನಿಜವಾಗಿಯೂ ಪರಿವರ್ತನೆಗೊಂಡವನಲ್ಲಿ ಮತಭ್ರಷ್ಟತೆಯು ಸಂಭವಿಸುವಾಗ, ಅದು ಎಷ್ಟೊಂದು ಗಂಭೀರವಾದದ್ದೆಂದರೆ ಅದಕ್ಕೊಳಗಾದವನು ಪಶ್ಚಾತ್ತಾಪ ಪಟ್ಟು ಕ್ಷಮಾಪಣೆಯನ್ನು ಹೊಂದಿಕೊಳ್ಳಲು ಸಾಧ್ಯವೋ ಎಂದು ಪೇತ್ರನು ಸಹ ಚಕಿತನಾಗುತ್ತಾನೆ (ಅಪೊಸ್ತಲರ ಕೃತ್ಯಗಳು 8:22). ಕ್ರಿಸ್ತನನ್ನು ಒಂದು ಕಾಲದಲ್ಲಿ ಅರಿತವನಾಗಿಯೂ ಏಕೆ ಒಬ್ಬನು ಇಷ್ಟೊಂದು ದೂರಕ್ಕೆ ತಪ್ಪಿ ಹೋಗುವನು? ಮತಭ್ರಷ್ಟತೆಗೊಂಡವನು ಕ್ರಿಸ್ತನ ಸ್ವಭಾವ ಅಥವಾ ಆತನ ಶಕ್ತಿಯನ್ನು, ದೇವತ್ವ, ಮತ್ತು ಕೆಲಸವನ್ನು ಅರ್ಥಮಾಡಿಕೊಳ್ಳಲಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ – ಇಲ್ಲವಾದರೆ ಆತನು ಕರ್ತನೊಂದಿಗಿನ ತನ್ನ ಸಂಬಂಧವನ್ನು ಬಿಟ್ಟು ಬಿಡುತ್ತಿರಲಿಲ್ಲ.

**ವಚನಗಳು 27, 28.** ಬೇಕೆಂದು ಮಾಡಿದ ಪಾಪವನ್ನು ಲೇಖಕನು ದಂಡನೆಯನ್ನು ತರುವಂಥದ್ದೆಂದು ಸಹ ಕಂಡನು. ಮತಭ್ರಷ್ಟತೆಯು ತನ್ನೊಂದಿಗೆ **ಅತ್ಯಂತ ಭಯದಿಂದ ಎದುರುನೋಡತಕ್ಕ ನ್ಯಾಯತೀರ್ಪ** ತರುತ್ತದೆ. "ಭಯದಿಂದ" (φοβερός, *phoberos*) ಎಂಬುದು ಹೊಸ ಒಡಂಬಡಿಕೆಯಲ್ಲಿ ಕೇವಲ ಮೂರು ಸಾರಿ ಕಂಡು ಬರುತ್ತದೆ, ಅವೆಲ್ಲವೂ ಈ ಪತ್ರಿಕೆಯಲ್ಲಿಯೇ ಕಾಣಿಸಿಕೊಳ್ಳುತ್ತವೆ (ವಚನಗಳು 27, 31; 12:21). ಎಲ್ಲಾ ಮೂರು

ವಾಕ್ಯಭಾಗಗಳಲ್ಲಿ, ಅದು ದೇವರನ್ನು ಸಂಧಿಸುವದು ಅಥವಾ ಸಮೀಪಕ್ಕೆ ಬರುವ ಕುರಿತು ಸೂಚಿಸುತ್ತದೆ. ಈ "ಭಯದಿಂದ ಎದುರುನೋಡುವದನ್ನು" KJVಯು "ಒಂದು ಖಂಡಿತವಾ ನ್ಯಾಯತೀರ್ಪು ಮತ್ತು ಅಗ್ನಿಮಯವಾದ ಪ್ರತೀಕಾರವನ್ನು ಎದುರುನೋಡುವದು" ಎಂದು ಪ್ರಸ್ತುತಪಡಿಸುತ್ತದೆ. 26ನೇ ವಚನದಲ್ಲಿ ಪ್ರಸ್ತಾಪಿಸಲಾಗಿರುವ ರೀತಿಯ ವ್ಯಕ್ತಿಗೆ ನ್ಯಾಯತೀರ್ಪು ಖಚಿತವಾದದ್ದು, ಮತ್ತು ನರಕದಲ್ಲಿ ನಿತ್ಯತ್ವವು ಅನಿವಾರ್ಯವಾದದ್ದು. ದೇವರು ಪಾಪದಲ್ಲಿ ಮುಳುಗಿ ಹೋಗಿರುವ ತನ್ನ ವೈರಿಗಳನ್ನು ದಂಡಿಸುವದರಲ್ಲಿ ಹಗುರವಾಗಿ ನಡಕೊಳ್ಳುತ್ತಾನೆಂದು ಯಾವನೂ ಊಹಿಸಿಕೊಳ್ಳಕೂಡದು. ತಪ್ಪಿತಸ್ಥರಿಗೆ ವಿರುದ್ಧವಾಗಿ ಬೆಂಕಿಯಿಂದ ನ್ಯಾಯತೀರ್ಪು ಮಾಡಲ್ಪಡುವದು (2 ಥೆಸಲೋನಿಕ 1:8; ಮತ್ತಾಯ 25:30, 41). ಇದು ಕೋರಹನ ಅವಿಧೇಯತೆಗೆ ಮತ್ತು ಆತನ ಕುಟುಂಬದ ಸಮೇತವಾಗಿ ಅವನನ್ನು ನಾಶಗೊಳಿಸಿದ ಬೆಂಕಿಗೆ ಹೋಲಿಕೆಯಾಗಿರಬಹುದು (ಅರಣ್ಯಕಾಂಡ 16:1-35). ದುಷ್ಟರ ವಿರುದ್ಧದ ದೇವರ ನ್ಯಾಯತೀರ್ಪು ಅನೇಕ ಸಾರಿ ಬೆಂಕಿಯಿಂದ ಬರುವದಾಗಿ ಚಿತ್ರಿಸಲ್ಪಟ್ಟಿರುತ್ತದೆ (ಇಬ್ರಿಯ 12:29).

**ಮೋಶೆಯ ವಿಧಿ**ಯ ಅಡಿಯಲ್ಲಿ, ಬೇಕೆಂದೇ ಕೆಟ್ಟದ್ದನ್ನು ಮಾಡುವವನಿಗೆ ಕ್ಷಮಾಪಣೆಯೇ ಇಲ್ಲವೆಂದು ಕಾಣಿಸುತ್ತದೆ. ಮೋಶೆಯ ಧರ್ಮಶಾಸ್ತ್ರದಡಿಯಲ್ಲಿ ದಂಡನೆಯು ಕಠಿಣವಾಗಿತ್ತು (2:2), ಆದರೆ ಕೃಪೆಯನ್ನು ಅತ್ಯಂಥ ದೊಡ್ಡ ಪ್ರಮಾಣದಲ್ಲಿ ತೋರ್ಪಡಿಸುವಂತಹ ಹೊಸ ಒಡಂಬಡಿಕೆಯ ಯುಗದಲ್ಲಿ ಪಾಪವು ದಂಡನೆಯಿಂದ ತಪ್ಪಿಸಿಕೊಳ್ಳುವದೆಂದು ನಾವು ಯೋಚಿಸಬಾರದು. 28ನೇ ವಚನವು ಧರ್ಮೋಪದೇಶಕಾಂಡ 17:2-7ಕ್ಕೆ ಪರೋಕ್ಷ ಸೂಚನೆಯಾಗಿರಬಹುದು, ಅಲ್ಲಿ ಬೇಕೆಂದು ಪಾಪ ಮಾಡಿದರೆ ಅದಕ್ಕೆ ಮರಣ ದಂಡನೆಯು ವಿಧಿಸಲ್ಪಟ್ಟಿರುತ್ತದೆ. ಹೇಗೂ, ಇದು **ಇಬ್ಬರು ಇಲ್ಲವೆ ಮೂವರು ಸಾಕ್ಷಿಗಳ ಮಾತಿನ ಮೇಲೆ** ಮಾತ್ರವೇ ಸಂಭವಿಸಬಹುದಾಗಿತ್ತು. ಕೇವಲ ಒಬ್ಬ ಸಾಕ್ಷಿಯ ಮಾತು ಮಾತ್ರವೇ ಒಬ್ಬ ಇಸ್ರಾಯೇಲ್ಯನನ್ನು ಮರಣ ದಂಡನೆಗೆ ಯೋಗ್ಯವಾದ ತಪ್ಪು ಮಾಡಿದವನೆಂಬ ತೀರ್ಪಿಗೆ ಗುರಿ ಪಡಿಸುವದಕ್ಕೆ ಸಾಕಾದದ್ದಾಗಿರಲಿಲ್ಲ. ನಾವು ಈ ತತ್ವವನ್ನು ಯಾವಾಗಲೂ ಮನ್ನಣೆ ಮಾಡಿ ಮತ್ತೊಬ್ಬನ ಗುಣನಡತೆಯ ಬಗ್ಗೆ ಕೇವಲ ಒಬ್ಬ ವ್ಯಕ್ತಿಯಿಂದ ಮಾಡಲ್ಪಟ್ಟ ದೋಷಾರೋಪಗಳನ್ನು ತಿರಸ್ಕರಿಸುವದು ನಮಗೆ ಉತ್ತಮವಾಗಿರುತ್ತದೆ (1 ತಿಮೊಥೆ 5:19). ಆರೋಪಕ್ಕೊಳಗಾದವನು ನ್ಯಾಯವಾದ ರೀತಿಯಲ್ಲಿ ತಪ್ಪಿತಸ್ಥನೆಂದು ಕಂಡು ಬಂದಾಗ, ಆತನಿಗೆ ಹಳೆಯ ಒಡಂಬಡಿಕೆಯ ಅಡಿಯಲ್ಲಿ **ಕನಿಕರವಿಲ್ಲದೆ ಮರಣದಂಡನೆ** ಅನುಭವಿಸುತ್ತಿದ್ದನು (ವ. 28).

**ವಚನ 29.** ಕಡಿಮೆಯಾದದ್ದರಿಂದ ಶ್ರೇಷ್ಠವಾದದ್ದರ ಕಡೆಗೆ ಸಾಗುವ ಮತ್ತೊಂದು ತರ್ಕವು ಮುಂದಿಡಲ್ಪಟ್ಟಿದೆ. ಹಳೆಯ ಒಡಂಬಡಿಕೆಯ ಅಡಿಯಲ್ಲಿನ ದಂಡನೆಯು ಸಾಕಷ್ಟು ಕೆಟ್ಟದ್ದಾಗಿತ್ತು, ಪ್ರತಿಯೊಂದು ಅಪರಾಧವೂ ತನಗೆ ಯೋಗ್ಯವಾದ ಬಾಧೆಯನ್ನು ಅನುಭವಿಸುತ್ತಿತ್ತು (ಇಬ್ರಿಯ 2:2). ವಾಸ್ತವದಲ್ಲಿ ಹೊಸ ಒಡಂಬಡಿಕೆಯ ಅಡಿಯಲ್ಲಿ ದಂಡನೆಯು ಇನ್ನೂ ಕೆಟ್ಟದ್ದಾಗಿರುತ್ತದೆ! ಹಳೆಯ ಒಡಂಬಡಿಕೆಯಲ್ಲಿ ಮರಣವು ವಿಧಿಯಾಗಿದ್ದರೆ, ಕ್ರಿಸ್ತನನ್ನು ನಾವು ತಿರಸ್ಕರಿಸುವದಕ್ಕೆ ಕಡಿಮೆಯಾದ ದಂಡನೆಯು ಇರುವದಕ್ಕೆ ಹೇಗೆ ಸಾಧ್ಯ? ಜನರು ಹೆಚ್ಚಾದ ಜ್ಞಾನ ಮತ್ತು ಮೇಲ್ಮೆಗಳನ್ನು ಹೊಂದಿರುವಾಗ, ಅವರಿಂದ ಹೆಚ್ಚಿನದನ್ನು ನಿರೀಕ್ಷಿಸಲಾಗುತ್ತದೆ (ಲೂಕ 12:47, 48).

ಎಚ್ಚರಿಕೆಯಲ್ಲಿ ಸೂಚಿಸಲ್ಪಟ್ಟಿರುವ ಪ್ರಕಾರ ಮತಭ್ರಷ್ಟಗೊಂಡವನನ್ನು "ಹೆಚ್ಚಾದ ಕಠಿಣ ದಂಡನೆಯ" ಅಂತ್ಯಾವಸ್ಥೆಗೆ ಬಿಡಲ್ಪಡುತ್ತಾನೆ. ಈ ದಂಡನೆಯು ಇಷ್ಟೊಂದು ಕಠಿಣವಾಗಿರುವದಕ್ಕೆ ಕಾರಣಗಳು ಮೂರು ವಿಧದ ಬಣ್ಣನೆಯಲ್ಲಿ ಕೊಡಲ್ಪಟ್ಟಿವೆ: 1. ಹೀಗೆ

ಹೇಳಲಾಗಿರುತ್ತದೆ, **ದೇವಕುಮಾರನನ್ನು ತುಳಿದು . . . ತಿರಸ್ಕಾರ ಮಾಡಿದ್ದಾನೋ ಅವನು ಇನ್ನೂ ಎಷ್ಟೋ ಕ್ರೂರವಾದ ದಂಡನೆಗೆ ಪಾತ್ರನಾಗಬೇಕೆಂಬುದನ್ನು ಯೋಚಿಸಿರಿ** (ವ. 29). ಇದು "ಅವರು ತಮ್ಮ ಪಾಲಿಗೆ ದೇವರ ಮಗನನ್ನು ಪುನಃ ಶಿಲುಬೆಗೆ ಹಾಕುವವರು" ಎಂಬುದಕ್ಕೆ ಸಮಾನವಾಗಿರುತ್ತದೆ (6:6). ಕೆಲವರು ದೇವಕುಮಾರನನ್ನು "ತುಳಿದಿದ್ದಾರೆ" ಎಂಬ ಯೋಚನೆಯು ಮತ್ತಾಯ 7:6 ರಲ್ಲಿನ ಯೋಚನೆಯಂತೆಯೇ ಇರುತ್ತದೆ, ಅಲ್ಲಿ ಹಂದಿಗಳು ಬೆಲೆಯುಳ್ಳ ಮುತ್ತುಗಳನ್ನು (ಸುವಾರ್ತೆಗೆ ಒಂದು ಸಾಂಕೇತಿಕ ಸೂಚನೆ) ತುಳಿಯುತ್ತವೆಂದು ಹೇಳಲಾಗಿರುತ್ತದೆ. ಸ್ವತಃ ದೇವರ ಮಗನನ್ನೇ ತುಳಿಯುವದು ದೇವರಿಗೆ ಹಾಗೆಯೇ ಮಾಡುವದಕ್ಕೆ ಸಮವಾಗಿರುತ್ತದೆಂದು ಇಬ್ರಿಯರಿಗೆ ಪತ್ರಿಕೆಯು ಹೇಳುತ್ತದೆ.[66] ಈ ವಿಧವಾದ ಪಾಪಿಯು "ದೇವಕುಮಾರ" ನನ್ನು ತಿರಸ್ಕಾರದಿಂದ ಕಂಡಿರುತ್ತಾನೆ; ಅದಕ್ಕಿಂತ ಇನ್ನಾವ ಪಾಪವೂ ದೊಡ್ಡದಾಗಿರಲಾರದು. ಆತನು ಕ್ರಿಸ್ತನ ಯಜ್ಞಕ್ಕೆ ಅಗೌರವ ತೋರಿದ್ದಾನೆ. ಒಬ್ಬ ಕ್ರೈಸ್ತನ ಜೀವಿತದಲ್ಲಿ ಇದಕ್ಕಿಂತ ಹೆಚ್ಚು ಭಯಂಕರವಾದದ್ದು ಇನ್ನಾವದು ಇರಲಿಕ್ಕೆ ಸಾಧ್ಯ?

ತಾವು ಪ್ರೀತಿಸುತ್ತೇವೆಂದು ಹೇಳಿದ ಕ್ರಿಸ್ತನನ್ನು ಹೊಲೆಗೊಳಿಸಬಾರದೆಂದು ಅವರನ್ನು ಬೇಡಿಕೊಳ್ಳುವವನಾಗಿ ಲೇಖಕನು ವಿಶ್ವಾಸಿಗಳಿಗೆ ಆಘಾತವನ್ನುಂಟು ಮಾಡುವ ಇಂಗಿತ ಹೊಂದಿದ್ದನು. ಅವರ ಪರಿಚಿತರಲ್ಲಿ ಕೆಲವರು ಈಗಾಗಲೇ ಈ ಘೋರವಾದ ಕೃತ್ಯಗವನ್ನು ಮಾಡಿದ್ದರು. ನಾವು ಅಂಥ ದೇವದೂಷಣೆಯನ್ನು ಕ್ರಿಸ್ತನ ವಿರೋಧಿಗಳಿಂದ ನಿರೀಕ್ಷಿಸಬಹುದು, ಆದರೆ ಆತನ ರಕ್ತದಿಂದ ಕೊಂಡುಕೊಳ್ಳಲ್ಪಟ್ಟಿರುವ ಒಬ್ಬನಿಂದ ಅದನ್ನು ನಿರೀಕ್ಷಿಸಲಾರೆವು. ಅಂಥವನು ಶಿಲುಬೆಯನ್ನು ಅಪಹಾಸ್ಯ ಮಾಡುವವರ ಗುಂಪಿನಲ್ಲೊಬ್ಬನಾಗಿದ್ದರೆ ತಪ್ಪಿತಸ್ಥನಾಗಿರುತ್ತಿರಲಿಲ್ಲ. ತಾನೇನು ಮಾಡುತ್ತಿದ್ದೇನೆಂದು ಬಲ್ಲವನಾಗಿರುವ ಮತ್ತು ಕ್ರಿಸ್ತನ ಮೂಲಕವಾಗಿ ದೇವರು ಅನುಗ್ರಹಿಸಿರುವ ಕರುಣೆಯನ್ನು ತಿರಸ್ಕರಿಸುವವನು ಮತಭ್ರಷ್ಟತೆಯನ್ನು ಮಾಡಿದ ದೋಷಿಯಾಗಿದ್ದಾನೆ. ಈ ಹೇಳಿಕೆಯು "ಯೇಸು ಕ್ರಿಸ್ತನ ವಿರುದ್ಧದ ಅತ್ಯಂಥ ಬಲವಾದ ವೈಷಮ್ಯವನ್ನು"[67] ಸೂಚಿಸುತ್ತದೆ. ಈ ವಾಕ್ಯಭಾಗವು "ಕ್ರಿಸ್ತನನ್ನು ಧರಿಸಿಕೊಳ್ಳುವ (ಗಲಾತ್ಯ 3:27) ಮತ್ತು ಆತನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳಲ್ಲಿ ಪಾಲುಗಾರರಾಗುತ್ತೇವೆಂದು ಅರಿಕೆ (ರೋಮಾ 6:3–5; ಕೊಲೊಸ್ಸೆ 2:12) ಮಾಡುವಂತಹ ಒಬ್ಬನ ದೀಕ್ಷಾಸ್ನಾನವನ್ನು ಪರಿತ್ಯಾಗ ಮಾಡುವದನ್ನು"[68] ಸೂಚಿಸಬಹುದಾಗಿದೆ.

"ಒಮ್ಮೆ ರಕ್ಷಿಸಲ್ಪಟ್ಟರೆ, ಸದಾಕಾಲವೂ ರಕ್ಷಿಸಲ್ಪಟ್ಟಂತೆ" ಎಂಬ ಸಿದ್ಧಾಂತದಲ್ಲಿ ನಂಬಿಕೆಯುಳ್ಳವರು ಈ "ಎಷ್ಟೋ ಕ್ರೂರವಾದ ದಂಡನೆ" ವಿಷಯದಲ್ಲಿ ಸಮಸ್ಯೆಯನ್ನು ಹೊಂದಿರುತ್ತಾರೆ. ಅವರು ಇಂದು ನಿತ್ಯನಾಶನಕ್ಕಿಂತ ಕಡಿಮೆಯಾದದ್ದೆಂದಾದರೂ ಹೇಳಿಕೊಳ್ಳಬೇಕು – ಅಥವಾ ಅವರು ತಮ್ಮ ಸಂತೈಸುವ ಸಿದ್ಧಾಂತವನ್ನಾದರೂ ಕೈ ಬಿಡಬೇಕು.

2. ಮತಭ್ರಷ್ಟನು **ತನ್ನನ್ನು ಪವಿತ್ರಮಾಡಿದಂಥ ರಕ್ತವನ್ನು ಅಶುದ್ಧವೆಂದೆಣಿಸಿದವನು** (ವ. 29). ಆತನು ರಕ್ತವನ್ನು "ಅಪವಿತ್ರ," "ಸಾಮಾನ್ಯ," ಅಥವಾ "ಅಶುದ್ಧ" ಎಂದೆಣಿಸಿದ್ದಾನೆ ಎಂದರ್ಥವಾಗಿದೆ.[69] ಹೊಸ ಒಡಂಬಡಿಕೆಯನ್ನು ಸ್ಥಿರಪಡಿಸಿದ ಮತ್ತು ಪಶ್ಚಾತ್ತಾಪ ಪಟ್ಟವನಿಗೆ ಪಾಪಗಳ ಪರಿಹಾರವನ್ನು ಒದಗಿಸಿದ ರಕ್ತವು ಅತ್ಯಂಥ ಅಮೂಲ್ಯವಾಗಿದೆ. ಯೇಸುವಿನ ರಕ್ತವನ್ನು ತಿರಸ್ಕಾರಾರ್ಹವೆಂದು ಎಣಿಸುವದು ಅದನ್ನು ಹಳೆಯ ಒಡಂಬಡಿಕೆಯ ಯಜ್ಞಗಳಲ್ಲಿ ಬಳಸಿದ ಪ್ರಾಣಿಗಳ ರಕ್ತದೊಂದಿಗೆ ಹೋಲಿಸುವದಕ್ಕಿಂತಲೂ ಕೆಟ್ಟದ್ದಾಗಿದೆ. ಇಲ್ಲಿ ಬಣ್ಣಿಸಲ್ಪಟ್ಟಿರುವಾತನು ಒಂದು ಕಾಲದಲ್ಲಿ ಯೇಸುವಿನ ರಕ್ತದಿಂದ "ಪವಿತ್ರಗೊಳಿಸಲ್ಪಟ್ಟವನು" ಆಗಿದ್ದನು ಮತ್ತು ರಕ್ಷಿಸಲ್ಪಟ್ಟವನು ಆಗಿದ್ದನು; ಆತನು ಒಬ್ಬ ಕ್ರೈಸ್ತನಾಗಿದ್ದವನು, ಆದರೆ ಇನ್ನು

ಮೇಲೆ ಕ್ರೈಸ್ತನಾಗಿರುವದಿಲ್ಲ.

Philip Edgcumbe Hughesನು "ರಕ್ತದ ಒಡಂಬಡಿಕೆಯ" ಆಚರಣೆಯಲ್ಲಿ ಪ್ರತಿ ವಾರದಲ್ಲಿ ಮಾಡುವ ಸಹವಾಸದ ಆಚರಣೆಯನ್ನು ಕಂಡನು:

> ನಾವು ನಮ್ಮ ವಿಮೋಚಕನ ಜ್ಞಾಪಕಾರ್ಥವಾಗಿ ಪಾನ ಮಾಡುವಂತಹ ಸಹವಾಸದ ಪಾತ್ರೆಯು, ಆತನ ರಕ್ತದಲ್ಲಿ ಸ್ಥಾಪಿತವಾದ ಹೊಸ ಒಡಂಬಡಿಕೆಯಾಗಿದೆ (1 ಕೊರಿಂಥ 11:25). ವಾರದ ನಂತರ ವಾರವೆಲ್ಲಾ ಮತಭ್ರಷ್ಟನು ಕ್ರಿಸ್ತನ ರಕ್ತ ಮತ್ತು ದೇಹದಲ್ಲಿ ಪಾಲುಗಾರನಾಗಿದ್ದಾನೆ, ಈ ಕಾರಣದಿಂದ ಪಾಪವನ್ನು ತೊಳೆದುಕೊಳ್ಳುವದಕ್ಕೆ ಕ್ರಿಸ್ತನನ್ನೇ ದೃಷ್ಟಿಸುತ್ತೇನೆಂದು ಅರಿಕೆ ಮಾಡಿದವನಾಗಿದ್ದಾನೆ.[70]

ಅಷ್ಟೊಂದು ಸಾರಿ ತನ್ನ ಹಿಂದಿನ ವಿಶ್ವಾಸದ ಬಗ್ಗೆ ಜ್ಞಾಪಕ ಮಾಡಲ್ಪಟ್ಟ ಬಳಿಕವೂ ಕರ್ತನದ ದೇಹವನ್ನು ಬಿಟ್ಟು ಬಿಡುವದೆಂದರೆ ಒಬ್ಬನನ್ನು ಅದು ರಕ್ತವನ್ನು ಅಶುದ್ಧಗೊಳಿಸಿದ ಅಪರಾಧಿಯನ್ನಾಗಿ ಮಾಡುತ್ತದೆ. ಆತನು ಕ್ರಿಸ್ತನ ಪರಿಪೂರ್ಣವಾದ ಯಜ್ಞವನ್ನು ಒಂದು ಅಪವಿತ್ರ ಕಾರ್ಯವನ್ನಾಗಿ ಕಂಡಿರುತ್ತಾನೆ.

3. ಈ ವ್ಯಕ್ತಿಯು **ದೇವರ ಕೃಪಾವರವಾಗಿರುವ ಆತ್ಮನನ್ನು** ತಿರಸ್ಕಾರ [ἐνυβρίζω, *enubrizō*] ಮಾಡಿದ್ದಾನೆ (ಅಥವಾ ಪವಿತ್ರಾತ್ಮನಿಗೆ "ಧಕ್ಕೆ ಉಂಟು ಮಾಡಿರುತ್ತಾನೆ")[71] (ವ. 29). ಆತನಿಗೆ ಕೃಪೆಯು ಕೊಡಲ್ಪಟ್ಟಿದ್ದು ಪವಿತ್ರಾತ್ಮನ ಮೂಲಕವೇ ಎಂಬುದನ್ನು ಇದು ಸೂಚಿಸುತ್ತದೆ. ಆತನು ಕೃಪೆಯನ್ನು ವಿತರಿಸುತ್ತಾನಾದ್ದರಿಂದ ಆತನನ್ನು "ಕೃಪಾವರವಾಗಿರುವ ಆತ್ಮ" ಎಂದು ಕರೆಯಲಾಗಿರುತ್ತದೆ. ಕೃಪೆಯ ಮೂಲಕ ಆತನು ನಮ್ಮ ದುರ್ಬಲತೆಗಳಲ್ಲಿ ಸಹಾಯ ಮಾಡಿರುತ್ತಾನೆ (ರೋಮಾ 8:26) ಮತ್ತು ಪಾಪದ ಅರುಹು ಹುಟ್ಟಿಸುತ್ತಾನೆ (ಯೋಹಾನ 16:8). ಈ ಅರುಹು ಪೇತ್ರನು ಸಾರಿದ ವಾಕ್ಯದಿಂದ ಪವಿತ್ರಾತ್ಮನ ಮೂಲಕವಾಗಿ ಉಂಟು ಮಾಡಲ್ಪಟ್ಟಿತು (ಉದಾಹರಣೆಗೆ, ಅಪೊಸ್ತಲರ ಕೃತ್ಯಗಳು 2:36–38). ಸ್ತೇಫನನ ಬೋಧನೆಯನ್ನು ತಿರಸ್ಕರಿಸುವದರಲ್ಲಿ, ಆತನ ಸಂದೇಶದ ಮೂಲಕ ಅವರ ಹೃದಯಗಳಲ್ಲಿ ಪವಿತ್ರಾತ್ಮನು ಮಾಡುತ್ತಿದ್ದ ಕಾರ್ಯವನ್ನು ಹಿರೀ ಸಭೆಯವರು ಎದುರಿಸುವವರಾಗಿದ್ದರು (ಅಪೊಸ್ತಲರ ಕೃತ್ಯಗಳು 7:51).

ಒಬ್ಬ ಕ್ರೈಸ್ತ ನಂಬಿಕೆಯಿಂದ ವಿಮುಖವಾಗಿ ಯೆಹೂದಿ ಮತದ ಕಡೆಗೆ ತಿರುಗಿಕೊಳ್ಳುವಾಗ, ಆತನು ಮಗನ ಮತ್ತು ಪವಿತ್ರಾತ್ಮನ ವಿರುದ್ಧ ಪಾಪ ಮಾಡುವವನಾಗಿದ್ದಾನೆ. ಆತನು "ದೇವಕುಮಾರನನ್ನು ಧಿಕ್ಕರಿಸಿದ್ದಾನೆ . . . ಮತ್ತು ಪವಿತ್ರಾತ್ಮನಿಗೆ ಧಕ್ಕೆ ಉಂಟು ಮಾಡಿದ್ದಾನೆ" (ESV). ಇದು ದೈವಿಕ ಕಟ್ಟಳೆಯ ವಿರುದ್ಧದ ಒಂದು ಪಾಪವಾಗಿದೆ.[72] ಒಬ್ಬ ಮತಭ್ರಷ್ಟನು ಮುಂಚೆ ಸತ್ಯವನ್ನು ಅರಿತವನಾಗಿದ್ದು ಈಗ ಸಂಪೂರ್ಣವಾಗಿ ಅದರಿಂದ ವಿಮುಖನಾಗಿರುವ ರೀತಿಯಲ್ಲಿ, ಪವಿತ್ರಾತ್ಮನಿಗೆ ತಿರಸ್ಕಾರ ಮಾಡುವದೆಂದರೆ ಅತ್ಯಂಥ ಕ್ರೂರವಾದ ದಂಡನೆಗೆ - ಮರಣ ದಂಡನೆ - ಯೋಗ್ಯವಾಗಿದೆ. ದೇವರ ವಾಕ್ಯದಲ್ಲಿನ ಸತ್ಯದ ಪುರಾವೆಯನ್ನು ತಿರಸ್ಕರಿಸುವ ಆತನ ಕೃತ್ಯವು ಅಶ್ರದ್ಧೆಯ ಪರಾಕಾಷ್ಠೆಯಾಗಿದೆ. ಆತನು ನ್ಯಾಯತೀರ್ಪನ್ನು ಅಲ್ಲದೆ ಬೇರೆ ಇನ್ನೇನನ್ನೂ ಎದುರುನೋಡುವದಕ್ಕಾಗುವದಿಲ್ಲ, ಆಗ "ತೀಕ್ಷ್ಣವಾದ ಅಗ್ನಿಯು" ಆತನನ್ನು ದಹಿಸುವದು (10:27). ತಪ್ಪಿತಸ್ಥ ಮನುಷ್ಯನು "[ಪವಿತ್ರಾ] ತ್ಮನ ದೂಷಣೆಯನ್ನು" ಮಾಡಿದ್ದಾನೆಂಬುದು ಸ್ಪಷ್ಟವಾಗಿರುತ್ತದೆ (ಮತ್ತಾಯ 12:31, 32; ಮಾರ್ಕ 3:28, 29; ಲೂಕ 12:10) ಮತ್ತು ಆತನು ರಕ್ಷಣೆಯ ಎಲ್ಲಾ ನಿರೀಕ್ಷೆಯನ್ನು ಕಳೆದುಕೊಂಡವನಾಗಿದ್ದಾನೆ.[73]

**ವಚನಗಳು 30, 31.** ಮತಭ್ರಷ್ಟನ ಪಾಪವು ಅದರ ಎಲ್ಲಾ ಮರಿಣಾಮಗಳ ಕಾರಣದಿಂದಾಗಿ ಭಯಾನಕವಾಗಿರುತ್ತದೆ. ಅದರ ಕುರಿತು ಯೋಚಿಸುವದು ಮಾತ್ರವೇ ನಮ್ಮಲ್ಲಿ

ನಡುಕುವನ್ನುಂಟು ಮಾಡತಕ್ಕದ್ದು.

10ನೇ ಅಧ್ಯಾಯದ ಅಂತಿಮ ಭಾಗದಲ್ಲಿನ ಎಚ್ಚರಿಕೆಗಳೊಂದಿಗೆ, ಲೇಖಕನು ತನ್ನ ವಾಚಕರನ್ನು ಅವರು ಇನ್ನೇನು ಸ್ವಲ್ಪದರಲ್ಲಿಯೇ ತಮ್ಮ ಆತ್ಮೀಕ ಮರಣಗಳಿಗೆ ಹೋಗಲಿದ್ದ ಒಂದು ಪ್ರಪಾತದಿಂದ ಹಿಂದಕ್ಕೆ ಎಳೆಯುವದಕ್ಕೆ ಪ್ರಯತ್ನಿಸುತ್ತಿದ್ದಾನೆ. 30ನೇ ವಚನವು ಒಂದು ಖಚಿತತೆಯ ಹೇಳಿಕೆಯೊಂದಿಗೆ ಆರಂಭಗೊಳ್ಳುತ್ತದೆ: **ಹೇಳಿದಾತನನ್ನು ಬಲ್ಲೆವು.** ದೇವರು ತನ್ನ ಮಾತನ್ನು ಕಾಪಾಡಿಕೊಳ್ಳುವನು ಮತ್ತು ಎಚ್ಚರಿಕೆ ನೀಡಿದ ಅಪಾಯಗಳನ್ನು ಜಾರಿಗೆ ತರುವನೆಂಬುದನ್ನು ನಾವು ಬಲ್ಲೆವು ಎಂದು ಇದರರ್ಥವಾಗಿದೆ. **ಮುಯ್ಯಿಗೆ ಮುಯ್ಯಿ ತೀರಿಸುವದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನು** ಎಂಬ ಉಲ್ಲೇಖನವು ರೋಮಾ 12:19ರಲ್ಲಿ ಪೌಲನು ಬಳಸಿದ ನಿಖರವಾಗಿ ಅದೇ ರೂಪದಲ್ಲಿರುತ್ತದೆ.

30ನೇ ವಚನದಲ್ಲಿನ ಎರಡು ಉಲ್ಲೇಖನಗಳು ಈಗಿನ ಇಬ್ರಿಯ ಶಾಸ್ತ್ರಗಳ ಅಥವಾ LXX ಪ್ರತಿಗಳಿಗೆ ನಿಖರವಾಗಿ ಹೊಂದಿಕೆಯಾಗಿರುವದಿಲ್ಲ. ಖಂಡಿತವಾಗಿಯೂ, ಕಲಿಸಲ್ಪಟ್ಟಿರುವ ಸತ್ಯವು ಒಂದೇ ಆಗಿರುತ್ತದೆ. ಲೇಖಕನು ಪೌಲನಂತೆಯೇ ಈಗ ಪರಿಚಿತವಿಲ್ಲದಿರುವಂತಹ ವಾಕ್ಯಭಾಗದಿಂದ ನಿಖರವಾಗಿ ಉಲ್ಲೇಖನ ಮಾಡಿರಬಹುದು. ಆತನು ಜನಪ್ರಿಯ ರೂಪದ ಒಂದು ವಚನವನ್ನು ಪಠನ ಮಾಡಿರಬಹುದಾಗಿದೆ, ಅಥವಾ ಆತನು ಅದನ್ನು ರೋಮಾಪುರದವರಿಗೆ ಬರೆದ ಪತ್ರಿಕೆಯಿಂದ ಉಲ್ಲೇಖಿಸಿರಬಹುದು. ಬಹುಶಃ ಆತನು ಸ್ವಂತ ಭಾವಾನುವಾದವೊಂದನ್ನು ಬಳಸಿರಬಹುದು.[74] ಉಳಿದಿರುವ ಏಕೈಕ ಸಾಧ್ಯತೆಯೆಂದರೆ ಅದು ಪೌಲನಿಂದ ಅಥವಾ ಆತನ ನಿಕಟ ಸಹಪಾಠಿಗಳೊಬ್ಬರಿಂದ ಬಂದಿರಬಹುದಾಗಿದೆ. ಮೊದಲನೆಯ ಉಲ್ಲೇಖನವು ಧರ್ಮೋಪದೇಶಕಾಂಡ 32:35-41ರಿಂದ ಬಂದಿರುತ್ತದೆ, ಮತ್ತು ಅದರ ಸ್ವಲ್ಪ ವ್ಯತ್ಯಾಸವಾದ ಆವೃತ್ತಿಯು ಕೀರ್ತನೆ 135:14ರಲ್ಲಿ ಸಿಕ್ಕುತ್ತದೆ. ಲೇಖಕನು ನ್ಯಾಯಯುತವಾದ ವಿಧದಲ್ಲಿ ಭಾವಾನುವಾದ ಮಾಡುತ್ತಿದ್ದು ಅದು ವಾಕ್ಯಭಾಗದ ಸರಿಯಾದ ಅರ್ಥವನ್ನು ಉಳಿಸಿಕೊಂಡಿರುತ್ತದೆ.

ದೇವರ "ಮುಯ್ಯಿಗೆ ಮುಯ್ಯಿ" ತೀರಿಸುವಿಕೆಯು ಪ್ರತೀಕಾರದ ಸ್ವಭಾವದ್ದಲ್ಲ, ಆದರೆ ನ್ಯಾಯದ ಸ್ವಭಾವದ್ದಾಗಿದೆ. ಆತನು ಪ್ರತಿಫಲವನ್ನು ಸಲ್ಲಿಸುವದು ಅಪರಾಧಕ್ಕೆ ತಕ್ಕಂತೆ ಸಮವಾಗಿರುವದು. ಅದು ಏನಾಗಿರತಕ್ಕದ್ದೆಂದು ಆತನು ನಿರ್ಧರಿಸಬಲ್ಲನು; ನಾವು ನಿರ್ಧರಿಸುವದಕ್ಕೆ ಸಾಧ್ಯವಿಲ್ಲ. ಒಬ್ಬ ಅಪರಾಧಿಯು ಮತ್ತೊಬ್ಬನನ್ನು ಕೊಂದವನೆಂದು ಸಾಭಿತುಗೊಳಿಸಲ್ಪಟ್ಟು ಒಬ್ಬ ನ್ಯಾಯಾಧೀಶನು ಆತನ ಪ್ರಾಣವನ್ನು ತೆಗೆಯತಕ್ಕದ್ದೆಂದು ತೀರ್ಪು ಮಾಡಿದಾಗ್ಯೂ, ಆತನು ಕೊಲೆ ಮಾಡಿದ ವ್ಯಕ್ತಿಯ ಪ್ರಾಣದೊಂದಿಗೆ ಆತನ ಪ್ರಾಣದ ಬೆಲೆಯನ್ನು ನಾವು ಹೇಗೆ ನಿರ್ಧರಿಸಬಲ್ಲೆವು? ದೇವರೊಬ್ಬನೇ ನ್ಯಾಯದ ಅರ್ಥನಿರೂಪಣೆ ಮಾಡಬಲ್ಲನು; ಈ ಕಾರಣದಿಂದಲೇ ಆತನು ನಮ್ಮ ಜೀವಿತಗಳಿಗಾಗಿ ಹಾಕಿ ಕೊಟ್ಟಿರುವ ನಿಯಮಗಳ ಮೇಲೆ ನಾವು ಅಷ್ಟೊಂದು ಅವಲಂಭಿತರಾಗಿರತಕ್ಕದ್ದು.

ನೀತಿವಂತನಿಗಾದರೋ, ದೇವರ ಕೈಗಳಲ್ಲಿ ಸಿಕ್ಕಿ ಬೀಳುವದು ಉತ್ತಮವಾದದ್ದು - ದಾವೀದನು ಹೇಳಿದಂತೆ, "ಆತನು ಕೃಪಾಪೂರ್ಣನು" (2 ಸಮುವೇಲ 24:14). ಒಬ್ಬನ ವೈರಿಯ **ಕೈಗಳಲ್ಲಿ ಸಿಕ್ಕಿಬೀಳುವದು** ಸಂಪೂರ್ಣವಾಗಿ ಅವರ ನಿಯಂತ್ರಣದಲ್ಲಿ ಹಾಗೂ ಕರುಣೆಯ ಅಡಿಯಲ್ಲಿರುವಂತೆ ಆಗಿರುತ್ತದೆ. ಮತಭ್ರಷ್ಟನಿಗಾದರೋ, ಅದು ನಿತ್ಯವಾದ ಬಹಿಷ್ಕಾರವಾಗುತ್ತದೆ (2 ಥೆಸಲೋನಿಕ 1:9). ಇದೊಂದು ಭಯಾನಕವಾದ ಸ್ಥಿತಿಯಾಗಿದೆ (ಮತ್ತಾಯ 25:46; ಪ್ರಕಟನೆ 14:11; 20:10).

31ನೇ ವಚನದಲ್ಲಿ **ಭಯಂಕರವಾದದ್ದು** ಎಂದು ಅನುವಾದಿಸಿರುವ ಗ್ರೀಕ್ ಪದವು 27ನೇ

ವಚನದಲ್ಲಿ ಬಳಸಿರುವ ಅದೇ ಪದವಾಗಿರುತ್ತದೆ. ದೇವರನ್ನು ಯಾರೂ ಮೂರ್ಖನನ್ನಾಗಿಸುವದಕ್ಕೆ ಸಾಧ್ಯವಿಲ್ಲ. ಒಂದು ಕಾಲದಲ್ಲಿ ಕ್ರಿಸ್ತನಲ್ಲಿದ್ದ ಆದರೆ ಈಗ ಆತನ ಅನ್ಯೋನ್ಯತೆಯೊಳಗಿಂದ ಹೊರಗೆ ಹೋಗಿರುವವನೇ ಈ ಲೋಕದಲ್ಲಿ ಅತ್ಯಂಥ ದುರ್ಗತಿಗೊಳಗಾದ ಮನುಷ್ಯನಾಗಿರತಕ್ಕದ್ದು. **ಜೀವಸ್ವರೂಪನಾದ ದೇವರ** ಕೈಗಳಲ್ಲಿ ಬೀಳುವದು ನಿಜಕ್ಕೂ ಭಯಂಕರವಾದದ್ದೆ![75] ಕ್ರಿಸ್ತನಿಗೆ ನಂಬಿಗಸ್ತನಾಗಿರುವಾತನಿಗೆ, ಸರ್ವಶಕ್ತನ ಕೈಗಳು ಕೋಮಲ ಮತ್ತು ದಯೆಯಿಂದ ಕೂಡಿರುವವು. ಮುಯ್ಯಿಗೆ ಮುಯ್ಯಿ ತೀರಿಸುತ್ತೇನೆಂಬ ಆತನ ಬೆದರಿಕೆಯ ಹಿಂದೆ ಪಶ್ಚಾತ್ತಾಪ ಪಟ್ಟು ಮಂದೆಗೆ ಹಿಂದಿರುಗುವ ಯಾವನಿಗಾದರೂ ಕರುಣೆಯನ್ನು ತೋರಿಸುವ ಕೊಡುಗೆಯಿರುತ್ತದೆ.

ದೇವರ ಕರುಣೆಯನ್ನು ಅರಿತವನಾಗಿದ್ದ ಒಬ್ಬ ವ್ಯಕ್ತಿಯಿಂದ ಮಾಡಲ್ಪಡುವ ಇಚ್ಛಾಪೂರ್ವಕವಾದ ಪಾಪವು ಭಯಂಕರವಾದ ದುಷ್ಪರಿಣಾಮಗಳನ್ನು ತರುತ್ತದೆ. ಮತಭ್ರಷ್ಟನು ತನ್ನ ಆತ್ಮಕ್ಕಾಗಿ ಕ್ರಿಸ್ತನು ಎಂಥ ದೊಡ್ಡ ಬೆಲೆಯನ್ನು ತೆತ್ತನೆಂಬುದನ್ನು ಬಲ್ಲವನಾಗಿರುತ್ತಾನೆ, ಆದಾಗ್ಯೂ ಆತನು ರಕ್ಷಕನ ರಕ್ತವನ್ನು ಅಶುದ್ಧವೆಂದೆಣಿಸುತ್ತಾನೆ. ಆದುದರಿಂದ, ಆತನಿಗೆ ದೇವರ ಕೋಪ ಹಾಗೂ ಮುಯ್ಯಿ ಕಾದಿರುತ್ತದೆ.

## ಜ್ಞಾಪಕದಲ್ಲಿಟ್ಟುಕೊಳ್ಳುವಂತೆ ಪ್ರಬೋಧನೆ (10:32-39)

**32ಹೀಗಿರಲಾಗಿ ನೀವು ಜ್ಞಾನಪ್ರಕಾಶದಲ್ಲಿ ಸೇರಿ ಕಷ್ಟಾನುಭವವೆಂಬ ಬಲು ಹೋರಾಟವನ್ನು ಸಹಿಸಿಕೊಂಡ ಹಿಂದಿನ ದಿನಗಳನ್ನು ನೆನಪಿಗೆ ತಂದುಕೊಳ್ಳಿರಿ; 33ಕೆಲವು ಸಾರಿ ನೀವು ನಿಂದೆಗಳನ್ನೂ ಸಂಕಟಗಳನ್ನೂ ಅನುಭವಿಸಿ ಹಾಸ್ಯಕ್ಕೆ ಗುರಿಯಾದಿರಿ; ಕೆಲವು ಸಾರಿ ಅಂಥವುಗಳನ್ನು ಅನುಭವಿಸಿದವರಲ್ಲಿ ಸೇರಿದವರಾಗಿದ್ದು ಕಷ್ಟಾನುಭವಿಗಳಾದಿರಿ. 34ಬೇಡಿಗಳನ್ನು ಹಾಕಿಸಿಕೊಂಡವರ ಕಷ್ಟವನ್ನು ನೋಡಿ ಅವರ ಸಂಗಡ ನೀವು ದುಃಖ ಪಟ್ಟದ್ದಲ್ಲದೆ ನಮಗೆ ಉತ್ತಮವಾಗಿಯೂ ಸ್ಥಿರವಾಗಿಯೂ ಇರುವ ಆಸ್ತಿಯುಂಟೆಂದು ಚೆನ್ನಾಗಿ ಅರಿತುಕೊಂಡು ನಿಮ್ಮ ಸೊತ್ತನ್ನು ಸುಲುಕೊಳ್ಳುವವರಿಗೆ ಸಂತೋಷದಿಂದ ಬಿಟ್ಟಿರಿ. 35ಹಾಗಾದರೆ ನಿಮ್ಮ ಧೈರ್ಯವನ್ನು ಬಿಟ್ಟುಬಿಡಬೇಡಿರಿ; ಅದಕ್ಕೆ ಮಹಾ ಪ್ರತಿಫಲ ಉಂಟು. 36ದೇವರ ಚಿತ್ತವನ್ನು ನೆರವೇರಿಸಿ ವಾಗ್ದಾನದ ಫಲವನ್ನು ಹೊಂದಬೇಕಾದರೆ ನಿಮಗೆ ತಾಳ್ಮೆ ಬೇಕು.**

**37ಬರುವಾತನು ಇನ್ನು ಸ್ವಲ್ಪಕಾಲದಲ್ಲಿ ಬರುವನು, ತಡಮಾಡುವದಿಲ್ಲ;**
**38ಆದರೆ ನನ್ನವನಾಗಿರುವ ನೀತಿವಂತನು ನಂಬಿಕೆಯಿಂದಲೇ ಬದುಕುವನು;**
**ಅವನು ಹಿಂದೆಗೆದರೆ ನನಗೆ ಸಂತೋಷವಿರುವದಿಲ್ಲ**
**39ಎಂದು ಬರೆದದೆ. ನಾವಾದರೋ ಹಿಂದೆಗೆದವರಾಗಿ ನಾಶವಾಗುವವರಲ್ಲ, ನಂಬುವವರಾಗಿ ಪ್ರಾಣರಕ್ಷಣೆಯನ್ನು ಹೊಂದುವವರಾಗಿದ್ದೇವೆ.**

ಇಬ್ರಿಯರಿಗೆ ಪತ್ರಿಕೆಯ ಲೇಖಕನಿಗೆ ಆತನ ವಾಚಕರಿಗಿರುವ ಪ್ರೋತ್ಸಾಹದ ಅಗತ್ಯತೆಯನ್ನು ಬಲ್ಲವನಾಗಿದ್ದನು. 6:7, 9ರಲ್ಲಿರುವಂತೆಯೇ, ಆತನು ಅವರಿಗೆ 10:32–39 ವಚನಗಳಲ್ಲಿ ಸ್ವಲ್ಪ ನಿರೀಕ್ಷೆಯನ್ನು ಒದಗಿಸುತ್ತಾನೆ. ತನ್ನ ಮೊದಲ ವಾಚಕರು ಇನ್ನೂ ಮತಭ್ರಷ್ಟತೆಯೊಳಗೆ ಹೋಗಿಲ್ಲ ಎಂಬ ಮನವರಿಕೆ ಆತನಿಗೆ ಆಗಿತ್ತು. ಅವರು ಬಹಳಷ್ಟನ್ನು ಅನುಭವಿಸಿ ಈಗ ಸೋತು ಹೋಗಲು ಆಗದು. ಜ್ಞಾಪಕದಲ್ಲಿಟ್ಟುಕೊಳ್ಳುವಂತೆ ಹೇಳುವ ಮೂಲಕ ಆತನು ಅವರನ್ನು ಪ್ರೋತ್ಸಾಹಿಸಿದನು.

**ವಚನ 32.** ತಮ್ಮ ಆರಂಭಿಕ ದಿನಗಳಲ್ಲಿ, ಒಂದು ಸಾಕಷ್ಟು ದೀರ್ಘವಾದ ಕಾಲದ ಹಿಂದೆ

ಆಗಿರಬೇಕು, ಆಗ ಇಬ್ರಿಯರು ವಿರೋಧವನ್ನು ಎದುರಿಸಿದ್ದರೂ ನಂಬಿಗಸ್ತಿಕೆಯನ್ನು ತೋರಿಸಿದ್ದರು. ಪತ್ರಿಕೆಯನ್ನು ಸ್ವೀಕರಿಸಿಕೊಂಡವರಲ್ಲಿ ಕೆಲವರು ಪರಿವರ್ತನೆಗೊಂಡ ಯಾಜಕರಾಗಿದ್ದರೆ (ಅಪೊಸ್ತಲರ ಕೃತ್ಯಗಳು 6:7), ಅವರು ಸ್ತೇಫನನು ರಕ್ತಸಾಕ್ಷಿಯಾಗಿ ಮರಣಿಸಿದ ನಂತರ ತಕ್ಷಣದಲ್ಲಿ ಸಂಭವಿಸಿದ ಹಿಂಸೆಯ ವೇಳೆ ತಮ್ಮನ್ನು ದೊಡ್ಡ ಗಂಡಾಂತರಕ್ಕೀಡು ಮಾಡಿಕೊಂಡಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 7; 8). ವಾಸ್ತವದಲ್ಲಿ, ಯಾಜಕರು ತಮ್ಮ ನಂಬಿಕೆಯಲ್ಲಿ "ಪುರೋಹಿತರು" ಆಗಿದ್ದರಿಂದ ಅಂಥವರು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವ ಸಾಧ್ಯತೆಯು ಬಹಳ ಕಡಿಮೆಯೆಂದು ಒಬ್ಬನು ಭಾವಿಸಿರಬಹುದಾಗಿದ್ದರೂ, ಅವರು – ವಿಶೇಷವಾಗಿ, ವೈರಾಗ್ಯವುಳ್ಳ ತಾರ್ಸದ ಸೌಲನು ಪರಿವರ್ತನೆಗೊಂಡಿದ್ದು – ಪರಿವರ್ತನೆಗೊಂಡಿದ್ದು ಅದರ ಬಗ್ಗೆ ತಿಳಿದಾಗ ವಿಶ್ವಾಸಿಗಳಾಗಿ ಇರದಿದ್ದ ಯೆಹೂದ್ಯರಿಗೆ ಆಘಾತವನ್ನುಂಟು ಮಾಡಿರಬಹುದಾಗಿದೆ. ಈ ನಂಬಿಕೆಯಲ್ಲಿ ಎಳೆಯವರಾಗಿದ್ದವರಿಗೆ ಹಾಸ್ಯ ಮಾಡುವದು ಕೆಲವರಿಗೆ ಸ್ವತಃ ಮರಣಕ್ಕಿಂತಲೂ ಭಯಂಕರವಾಗಿ ಕಂಡಿರಬಹುದಾಗಿದೆ.

**ನೀವು ಜ್ಞಾನಪ್ರಕಾಶದಲ್ಲಿ ಸೇರಿ . . . ಹಿಂದಿನ ದಿನಗಳನ್ನು** ಎಂಬುದು "ನಿಮಗೆ ಜ್ಞಾನೋದಯವಾದ ಬಳಿಕ" (NKJV) ಮತ್ತು "ನೀವು ಬೆಳಕನ್ನು ಪಡೆದುಕೊಂಡ ನಂತರ" (NIV) ಎಂದು ಬೇರೆ ಬೇರೆ ರೀತಿಗಳಲ್ಲಿ ಅನುವಾದಿಸಲ್ಪಟ್ಟಿರುತ್ತದೆ. ಈ ಜ್ಞಾನಪ್ರಕಾಶವು (ನೋಡಿರಿ 6:4) ಖಂಡಿತವಾಗಿಯೂ "ಸುವಾರ್ತೆಯ ಪ್ರಕಾಶ" ದ (2 ಕೊರಿಂಥ 4:4; ನೋಡಿರಿ ಎಫೆಸ 5:8, 11; ಕೊಲೊಸ್ಸೆ 1:13) ಮೂಲಕ ಸಾಧಿಸಲ್ಪಟ್ಟದ್ದಾಗಿದೆ. ನಂತರದ ಶತಮಾನಗಳಲ್ಲಿ, ಕ್ರೈಸ್ತ ಬರಹಗಾರರು ಆ ಮಾತನ್ನು ಅವರ ದೀಕ್ಷಾಸ್ನಾನದ ಸಂದರ್ಭಕ್ಕೆ ಅನ್ವಯಗೊಳಿಸಿದರು. ಅವರು ಖಂಡಿತವಾಗಿಯೂ ಪರಿವರ್ತನೆಗೊಂಡ ಅಥವಾ ಅದಾದ ಸ್ವಲ್ಪ ಸಮಯದಲ್ಲಿ ಜ್ಞಾನಪ್ರಕಾಶಗೊಂಡಿದ್ದರು. ಇದು ಮುಂಚೆ ಅವರಿಗೆ ಕಾಣದಂತದ್ದನ್ನು ಗ್ರಹಿಸಿಕೊಳ್ಳುವಂತೆ ಒಂದು ವಿಶೇಷವಾದ "ಆಂತರ್ಯದ ಬೆಳಕು" ಅವರನ್ನು ಶಕ್ತಗೊಳಿಸಿತು ಎಂಬುದನ್ನು ಸೂಚಿಸುದಿಲ್ಲ. ಅವರು ಪಂಚಾಶತ್ತಮ ದಿನದಲ್ಲಿದ್ದವರ ಹಾಗೆಯೇ, ಸಾರಲ್ಪಟ್ಟ ಸತ್ಯದ ಮೂಲಕವಾಗಿ ಮನವೊಲಿಸಲ್ಪಟ್ಟಿದ್ದರು. ಈ ಪ್ರಾಮಾಣಿಕ ಹೃದಯವುಳ್ಳವರು ಕ್ರಿಸ್ತನ ಪುನರುತ್ಥಾನದ ಕುರಿತು ಕೇಳಿಸಿಕೊಂಡಾಗ ನಂಬಿದರು ಮತ್ತು ವಿಧೇಯರಾದರು (ಅಪೊಸ್ತಲರ ಕೃತ್ಯಗಳು 2:32-41). ತಾವು ಕೇಳಿಸಿಕೊಂಡ ಸಂಗತಿಯ ಕಾರಣದಿಂದ ಹೃದಯವನ್ನು ಬದಲಾಯಿಸಿಕೊಂಡವರಾಗಿ, ಅವರು ಕ್ರಿಸ್ತನನ್ನು ಅಂಗೀಕರಿಸಿಕೊಂಡಿದ್ದ ಜ್ಞಾನಪ್ರಕಾಶಗೊಂಡವರಲ್ಲಿ ಸೇರಿದ್ದರು. ಅವರು ಬಹುಶಃ ಅಪೊಸ್ತಲರ ಕೃತ್ಯಗಳು 2ರಲ್ಲಿ ಪರಿವರ್ತನೆಗೊಂಡಿದ್ದವರೊಳಗೆ ಸೇರಿದವರಾಗಿರಲಿಲ್ಲ. ಅಲ್ಲದೆ ಅವರು ಕ್ರಿಸ್ತನು ಶರೀರಧಾರಿಯಾಗಿದ್ದಾಗ ಆತನನ್ನು ನೋಡಿದವರೂ ಆಗಿರುವ ಸಾಧ್ಯತೆಯಿರುವದಿಲ್ಲ. ಹೇಗೂ, ಅವರು ಅದಾದ ಸ್ವಲ್ಪ ಕಾಲದಲ್ಲಿ ಬೇರೆಯವರು ಬೋಧಿಸುವದನ್ನು ಕೇಳಿಸಿಕೊಂಡು ಕ್ರಿಸ್ತನಂಬಿಕೆಗೆ ಬಂದಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 6:7).

ಅವರ ಹಿಂದಿನ ದಿನಗಳಲ್ಲಿ, ಅವರು **ಕಷ್ಟಾನುಭವವೆಂಬ ಬಹು ಹೋರಾಟವನ್ನು ಸಹಿಸಿಕೊಂಡಿ**ದ್ದರು. ಇದು ಯೆರೂಸಲೇಮಿನ ಸಭೆಗೆ ವಿರುದ್ಧವಾಗಿ ಬಂದ ಹಿಂಸೆಯನ್ನು ಸೂಚಿಸುತ್ತಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 8:1; 12:1-3). ಈ ಕಷ್ಟಾನುಭಗಳು ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುವದಕ್ಕೆ ಬಹಳ ಕಾಲದ ಮುಂಚೆ ಸಂಭವಿಸಿರಬಹುದಾಗಿದ್ದು ಅವರು ಇನ್ನೂ ರಕ್ತಸಾಕ್ಷಿಗಳಾಗಿ ಮರಣಿಸಿರಲಿಲ್ಲ. ಕ್ರಿ.ಶ. 62ರಲ್ಲಿ ಯೇಸುವಿನ ಸಹೋದರನಾದ ಯಾಕೋಬನನ್ನು ಅನ್ಯಾಯವಾಗಿ ಕೊಲ್ಲಿಸಿದ ನಂತರದಲ್ಲಿ ಹಿಂಸೆಯು ಬಹುಶಃ

ಕಡಿಮೆಗೊಂಡಿರಬಹುದು. ಇದು ಪೌಲನು ಪರಿವರ್ತನೆಗೊಂಡು (ಅಪೊಸ್ತಲರ ಕೃತ್ಯಗಳು 9) ಹಲವಾರು ವರ್ಷಗಳಾದ ನಂತರದಲ್ಲಿ ಸಂಭವಿಸಿತ್ತು ಮತ್ತು ಅವುಗಳು ಪ್ರತ್ಯೇಕವಾಗಿ ನಡೆದ ಘಟನೆಗಳಾಗಿರಬಹುದು.

**ವಚನ 33.** ಹಾಗಿದ್ದರೂ, ಈ ವಾಚಕರು ಬೇರೆಯವರ ಸಂಗಡ ಅವರ ಕಷ್ಟಾನುಭವದಲ್ಲಿ ಅನ್ಯೋನ್ಯತೆಯನ್ನು (κοινωνός, *koinōnos*, "ಒಬ್ಬ ಸಹಭಾಗಿಯಾಗಿರುವದು") ಹೊಂದಿದ್ದರು. ಅವರು **ಅಂಥವುಗಳನ್ನು ಅನುಭವಿಸಿದವರಲ್ಲಿ** [ಸಿದ್ದವರಲ್ಲಿ] **ಸೇರಿದವರಾ**ಗುವ ಮೂಲಕ ಮತ್ತು ಅವರಿಗೆ ಸಹಾಯ ನೀಡುವ ಇದನ್ನು ಮಾಡಿದ್ದರು. ಇದು ಒಳ್ಳೇ ಸಮಾರ್ಯದವನ ಕಥೆಯಲ್ಲಿ ಬರುವ ಯಾಜಕರು ಮತ್ತು ಲೇವಿಯರಿಗೆ ಎಂಥ ಒಂದು ತದ್ವಿರುದ್ಧತೆಯಾಗಿದೆ (ಲೂಕ 10:25–37)! ಕೆಲವು ಯೆಹೂದಿ ಯಾಜಕರು ಯೇಸುವಿನ ಸಾಮ್ಯವನ್ನು ಕೇಳಿಸಿಕೊಂಡಿರುವ ಮತ್ತು ಅದು ಅವರ ಸ್ವಂತ ದುಷ್ಟತನವನ್ನು ಗುರುತಿಸಿಕೊಂಡು ಅದರ ಫಲಿತವಾಗಿ ಕ್ರಿಸ್ತನಿಗೆ ಪರಿವರ್ತನೆಗೊಳ್ಳುವಷ್ಟರ ಮಟ್ಟಿಗೆ ಪರಿಣಾಮವನ್ನು ಬೀರಿರುವ ಸಾಧ್ಯತೆಯಿದೆಯೋ (ಅಪೊಸ್ತಲರ ಕೃತ್ಯಗಳು 6:7)? ಆದಿ ಕ್ರೈಸ್ತರು ಕಥೆಯನ್ನು ಅವರಿಗೆ ತಿಳಿಸಿರಬಹುದಾಗಿದೆ.

ಇಬ್ರಿಯರಿಗೆ ಪತ್ರಿಕೆಯ ವಾಚಕರು ಸಹ **ಹಾಸ್ಯಕ್ಕೆ ಗುರಿ** ಪಡಿಸಲ್ಪಟ್ಟಿದ್ದರು. "ಹಾಸ್ಯಕ್ಕೆ ಗುರಿಯಾಗುವದು" ಎಂಬುದಕ್ಕಿರುವ ಪದವು θεατρίζω (*theatrizō*) ಎಂಬುದರ ಕ್ರಿಯಾಪದವಾಗಿದ್ದು, "ದಿಟ್ಟಿಸಿ ನೋಡುವ ವಸ್ತು" ಎಂಬ ಅರ್ಥವನ್ನು ಕೊಡುತ್ತದೆ ಮತ್ತು *theatron* ಎಂಬ ಪದದಿಂದ ಬಂದಿದ್ದು ಅದರಿಂದ "ರಂಗಮಂದಿರ" ಎಂಬ ಪದವು ಬಂದಿರುತ್ತದೆ. ಈ ಪದವು ರೋಮನ್ನರು ಸೆರೆಯಾಳುಗಳನ್ನು ಜನಸಮೂಹದ ನೋಟಗಳಿಗೆ ಪ್ರದರ್ಶಿಸಲ್ಪಟ್ಟ ಕಾಲವನ್ನು ಸೂಚಿಸುತ್ತದೆ. ಪೌಲನು ಅಪೊಸ್ತಲರನ್ನು ಬಣ್ಣಿಸುವ ವೇಳೆ ಇದೇ ಪದದ (*theatron*) ಒಂದು ರೂಪವನ್ನು ಬಳಸುತ್ತಾನೆ ("ತೋರಿಸಿದ್ದಾನೆಂದು"; 1 ಕೊರಿಂಥ 4:9). ಅವರು **ನಿಂದೆಗಳನ್ನು** ಅನುಭವಿಸಿದ್ದರು, ಅದರಲ್ಲಿ ಕುಚೋದ್ಯದ ಹೆಸರುಗಳಿಂದ ಕರೆಯುವದು ಸೇರಿರಬಹುದಾಗಿದೆ. **ಸಂಕಟಗಳು** ವಿವಿಧ ವೇದನೆ ಮತ್ತು ನಾಶನಗಳು ಆಗಿದ್ದವು. ಪತ್ರಿಕೆಯ ಮೊದಲ ವಾಚಕರು ತಮ್ಮ ಜೊತೆಯ ಯೆಹೂದ್ಯರಿಂದ ಅಪಹಾಸ್ಯಕ್ಕೆ ಒಳಗಾಗಿದ್ದರೋ? ಅವರು ಈ ಮುಂಚೆಯೇ ಸಮಾಜದಿಂದ ಬಹಿಷ್ಕಾರಕ್ಕೊಳಗಾಗಿದ್ದರೊ?

**ವಚನ 34.** ಅವರು ಪಾಲುಗಾರರಾಗಿದ್ದಕ್ಕೆ ಪುರಾವೆಯಾಗಿ ಇವರು ಅವರ ಸಂಗಡ **ದುಃಖ ಪಟ್ಟದ್ದನ್ನು** (ಅನುತಾಪ ಪಟ್ಟದ್ದನ್ನು; συμπαθέω, *sumpatheō*) ಜ್ಞಾಪಕಕ್ಕೆ ತರಲಾಗುತ್ತದೆ. KJV ಮತ್ತು NKJV ಗಳು ಅಲೆಗ್ಸಾಂದ್ರಿಯದ Clementನ ಪ್ರಕಾರವಾಗಿ, "ಕನಿಕರ" ಎಂದು ಹೇಳುತ್ತವೆ. ತೀವ್ರವಾದ ಒತ್ತಡದ ನಡುವೆ "ಅನುತಾಪ" ವನ್ನು ವ್ಯಕ್ತಪಡಿಸುವದು ಕಷ್ಟಕರವಾಗಬಹುದು, ಆದರೆ ಇದು ಕ್ರೈಸ್ತ ಮನೋಭಾವದ ಒಂದು ನಿಜವಾದ ಸೂಚನೆಯಾಗಿರುತ್ತದೆ.

ಬಹುಶಃ ಯಾಜಕರು ಸೆರೆಮನೆಗೆ ಹಾಕಲ್ಪಡುವಷ್ಟು ಘೋರ ಅಪಾಯದಲ್ಲಿರಲಿಲ್ಲ, ಆದರೆ ಕ್ರೈಸ್ತರು ಆ ಅಪಾಯದಲ್ಲಿದ್ದರು. ಆ ದಿನಗಳಲ್ಲಿ **ಬೇಡಿಗಳನ್ನು ಹಾಕಿಸಿಕೊಂಡವರಿಗೆ** (ಸೆರೆಯಾಳುಗಳಿಗೆ) ಊಟವನ್ನು ತೆಗೆದುಕೊಂಡು ಹೋಗುವದು ಸಹ ಬಹಳ ಗಂಡಾಂತರಕರವಾಗಿತ್ತು, ಆದರೆ ಈ ಕ್ರೈಸ್ತರು ಅದನ್ನು ಮಾಡಿದ್ದರು. ಈ ವಿಧವಾದ "ಅನ್ಯೋನ್ಯತೆಯು" ಅಪೊಸ್ತಲರ ಕೃತ್ಯಗಳು 2:42, 44–46; 4:34, 35ರಲ್ಲಿ ಆರಂಭವಾದದ್ದರ ಭಾಗವಾಗಿರಬಹುದಾಗಿದೆ. ಇಬ್ರಿಯರಿಗೆ ಪತ್ರಿಕೆಯನ್ನು ಬರೆಯುವ ಸಮಯದಲ್ಲಿ, ಹಿಂಸೆಯು ಕೊನೆಗೊಂಡಿತ್ತು, ಮತ್ತು ಕ್ರೈಸ್ತರು ಸ್ವಲ್ಪ ಕಾಲದ ತನಕ ಪ್ರಶಾಂತತೆಯನ್ನು ಆನಂದಿಸಿದರು.

ಇದು ಕಷ್ಟಕರವೆಂದು ತೋರಿದರೂ, ಅವರು [ತಮ್ಮ] **ಸೊತ್ತನ್ನು ಸುಲುಕೊಳ್ಳುವ ವರಿಗೆ**

**ಸಂತೋಷದಿಂದ ಬಿಟ್ಟಿರಿ** ಎಂದು ಲೇಖಕನು ಅವರಿಗೆ ಜ್ಞಾಪಿಸಿದನು. ನಾವು ಇದನ್ನು ಒಂದು ಅಸಹಜವಾದ ಪ್ರತಿಕ್ರಿಯೆಯೆಂದು ಪರಿಗಣಿಸಬಹುದು, ಆದರೆ ನಂಬಿಕೆಯ ಜನರು ಭೂಲೋಕದ ವಸ್ತುಗಳ ನಷ್ಟವನ್ನು ಸಂತೋಷದಿಂದ ಸಹಿಸಿಕೊಳ್ಳಬಲ್ಲರು. ಹಿಂಸೆಯ ಸಮಯಗಳಲ್ಲಿ, ಹಿಂಸಾತ್ಮಕ ಜನರ ಗುಂಪುಗಳು ಬಂದು ಓಡಿ ಹೋಗಿರುವವರ ಸೊತ್ತುಗಳನ್ನು ಲೂಟಿ ಮಾಡಬಹುದಾಗಿದೆ. ಈ ಸಹೋದರರು ಒಬ್ಬನ ಪ್ರಾಣವು ಅವನ ಸ್ವತ್ತಲ್ಲ ಎಂಬುದನ್ನು ತಿಳಿದುಕೊಂಡಿದ್ದರು (ಲೂಕ 12:15). ಅಂಥ ನಷ್ಟಗಳನ್ನು ಸಂತೋಷದಿಂದ ಅನುಭವಿಸಿದವರು ದೇವಾಲಯದ ಸೌಂದರ್ಯ ಮತ್ತು ಮಹಿಮೆಯೊಂದಿಗೆ ಹೊಂದಿದ್ದ ಭಾವನಾತ್ಮಕತೆಯನ್ನು ಸಹ ಜಯಿಸಿದವರಾಗಿದ್ದಿರಬಹುದು. ತಮ್ಮ ಸಮಸ್ಯೆಗಳ ಹೊರತಾಗಿಯೂ, ಅವರು ನಂಬಿಕೆಯಲ್ಲಿ **ಉತ್ತಮವಾಗಿಯೂ ಸ್ಥಿರವಾಗಿಯೂ ಇರುವ ಆಸ್ತಿಯುಂಟೆಂದು** ಎದುರು ನೋಡಿದರು. ಅವರು ಲೂಕ 6:23ರಲ್ಲಿ ಯೇಸು ಹೇಳಿದ್ದನ್ನು ಕಾರ್ಯರೂಪಕ್ಕೆ ತಂದಿದ್ದರು: "ಆ ದಿನದಲ್ಲಿ ಸಂತೋಷಪಡಿರಿ, *ಕುಣಿದಾಡಿರಿ*; ಪರಲೋಕದಲ್ಲಿ ನಿಮಗೆ ಬಹಳ ಪ್ರತಿಫಲ ಸಿಕ್ಕುವದು." (ಒತ್ತಿ ಹೇಳಿದ್ದು ನನ್ನದು.)

ಯೇಸು ತನ್ನ ಶಿಷ್ಯರು ಸೆರೆಮನೆಗಳಿಗೆ ಭೇಟಿ ಕೊಡಬೇಕೆಂದು ಕಲಿಸಿದನು (ನೋಡಿರಿ ಮತ್ತಾಯ 25:35, 36). ಯೂದಾಯದ ದೇವಜನರು ಸೆರೆಮನೆಯಿಂದ ಬಿಡುಗಡೆಗೊಂಡವರಿಗೆ ಅನುತಾಪವನ್ನು ತೋರಿಸಿದರು (ಅಪೊಸ್ತಲರ ಕೃತ್ಯಗಳು 4:23), ಯಾಕೆಂದರೆ "ಒಂದು ನೋವಾದರೆ ಎಲ್ಲಾ ಅಂಗಗಳಿಗೂ ನೋವಾಗುತ್ತದೆ" (1 ಕೊರಿಂಥ 12:26) ಎಂಬುದನ್ನು ಅವರು ಕಲಿತುಕೊಂಡಿದ್ದರು. ಕಳ್ಳರು ಅವರ ವಸ್ತುಗಳನ್ನು ದೋಚಿಕೊಳ್ಳಬಹುದು, ಆದರೆ ಅವರ ನಿತ್ಯವಾದ ಮಹಿಮೆಯನ್ನು ಯಾವ ಮನುಷ್ಯನೂ ಕಸಿದುಕೊಳ್ಳಲಾರನು ಎಂಬುದನ್ನು ಅವರು ಬಲ್ಲವರಾಗಿದ್ದರು. ಅವರು ತಮಗೋಸ್ಕರ "ಪರಲೋಕದಲ್ಲಿ ಗಂಟು" ಮಾಡಿಟ್ಟುಕೊಂಡಿದ್ದರು (ಮತ್ತಾಯ 6:20) ಮತ್ತು ನಿತ್ಯತ್ವದಲ್ಲಿ ಉತ್ತಮವಾದ ಆಸ್ತಿ ಉಂಟೆಂದು ಭರವಸದಿಂದಿದ್ದರು (ಇಬ್ರಿಯ 11:10, 16; 1 ಪೇತ್ರ 1:4). "ತಾನು ಒಂದು ಮುಗುಳ್ನಗೆಯೊಂದಿಗೆ ವಿದಾಯ ಹೇಳಲು ಸಾಧ್ಯವಾಗದಂತಹ ತನ್ನಿಂದ ಹೊರಗಿರುವ ಯಾವದನ್ನೂ ಸ್ವಂತವಾಗಿ ಹೊಂದಿರಬಾರದೆಂಬುದು ಕ್ರೈಸ್ತನ ಮನೋಭಾವದ ಒಂದು ಗುರುತು ಆಗಿರತಕ್ಕದ್ದು."[76] ಈ ಸಹೋದರರು ಕೇವಲ ದೇಹವನ್ನು ಮಾತ್ರವೇ ಕೊಲ್ಲುವವರಿಗೆ ಹೆದರದಿರುವದನ್ನು ಕಲಿತುಕೊಳ್ಳುತ್ತಿದ್ದರು (ಮತ್ತಾಯ 10:28).

**ವಚನಗಳು 35, 36.** ಇಬ್ರಿಯರಿಗೆ ಪತ್ರಿಕೆಯನ್ನು ಸ್ವೀಕರಿಸಿಕೊಂಡವರು ಕಳ್ಳರಿಗೆ ಅಥವಾ ಪ್ರಭುಗಳಿಗೆ ತಮ್ಮ ಸೊತ್ತುಗಳನ್ನು ಕಳಕೊಂಡಿದ್ದರು. ತಮಗೆ ಬರಲಿರುವ ಅತ್ಯಂಥ ಶ್ರೇಷ್ಠವಾದ ಪ್ರತಿಫಲದ ಬೆಳಕಿನಲ್ಲಿ ತಮ್ಮ ಭೂಲೋಕದ ಸ್ವತ್ತುಗಳನ್ನು ಲಾಭವಲ್ಲದವುಗಳೆಂದು ಪರಿಗಣಿಸುವಂತೆ ಲೇಖಕನು ವಾಚಕರನ್ನು ಪ್ರೋತ್ಸಾಹಿಸುತ್ತಾನೆ. ಅದನ್ನು ಮಾಡುವದಕ್ಕೆ ಶಕ್ತನಾದ ಕ್ರೈಸ್ತನು ಎಂದಿಗೂ ತನ್ನ ನಂಬಿಕೆಯನ್ನು ಎಸೆದು ಬಿಡಲಾರನು. ಆತನು ಅತ್ಯಂಥ ದೊಡ್ಡ ಬೆಲೆಯುಳ್ಳ ಸ್ವತ್ತಾಗಿ ಅದನ್ನು ಹಿಡಿದುಕೊಂಡಿರುವನು. "ಪರಲೋಕದಲ್ಲಿ ನಮಗೆ ಬಹಳ ಪ್ರತಿಫಲ ಉಂಟೆಂದು" ನೆನಪಿಟ್ಟುಕೊಳ್ಳಿರಿ (ಲೂಕ 6:23); ಆದರೆ **ಅದಕ್ಕೆ ಮಹಾ ಪ್ರತಿಫಲ ಉಂಟು** ಎಂಬ ಮಾತು (ವ. 35) ವರ್ತಮಾನಕಾಲ ರೂಪದಲ್ಲಿರುತ್ತದೆ.

ತಾವು ಈ ಮುಂಚೆ ನಡೆದುಕೊಂಡಿದ್ದ ಪ್ರಕಾರವೇ ಕ್ರಿಸ್ತನನ್ನು ಧೈರ್ಯದಿಂದ ಸೇವಿಸುತ್ತಾ ಇರುವದನ್ನು ಮುಂದುವರೆಸಬೇಕು ಎಂಬುದನ್ನು ಲೇಖಕನು ವಾಚಕರಿಗೆ ಜ್ಞಾಪಕ ಪಡಿಸುತ್ತಾನೆ. ನಾವು ದೇವರ ಕೃಪಾಸನವನ್ನು ಸಮೀಪಿಸುವ ರೀತಿಯನ್ನು (4:16; 10:19) ಕುರಿತು ಆತನು **ಧೈರ್ಯವನ್ನು** (ಭರವಸ; παρρησία, *parrēsia*) ಎಂಬ ಪದವನ್ನು ಬಳಸುತ್ತಾನೆ. ಇಲ್ಲಿ ನಾವು

ಒಬ್ಬ ಹೇಡಿ ಸೈನಿಕನು ತನ್ನ ಆಯುಧಗಳನ್ನು ಬಿಸಾಡಿ ಓಡಿ ಹೋಗುವ ಚಿತ್ರಣವನ್ನು ಕಾಣಬಹುದು. ಅಂಥ ಕೃತ್ಯವು ನಿರ್ದಿಷ್ಟವಾಗಿ ಅಗೌರವಕರವೆಂದು ಪರಗಣಿಸಲ್ಪಡುತ್ತಿತ್ತು. ಪೌಲನು ಯುದ್ಧದಲ್ಲಿರುವ ಅದೇ ಸೈನಿಕನ ಸಾದೃಶ್ಯವನ್ನು ಬಳಸುತ್ತಾನೆ (ಎಫೆಸ 6:12-17). ಸಮಸ್ಯೆಯ ನಡುವೆ ಭರವಸದಿಂದಿರುವದು, ಒಂದು ವೇಳೆ ನಿಜವಾದ ನಂಬಿಕೆಯ ತಿರುಳಿನ ಮೇಲೆ ಆಧಾರವಾಗಿದ್ದರೆ, ಅದು ಒಂದು ಅದ್ಭುತವಾದ ಗುಣವಾಗಿದೆ (ಇಬ್ರಿಯ 11:1). ಇದು ಆತ್ಮವಿಶ್ವಾಸವಲ್ಲ, ಆದರೆ ದೇವರಲ್ಲಿ ಇಟ್ಟಿರುವ ನಿಜವಾದ ವಿಶ್ವಾಸ ಆಗಿರುತ್ತದೆ.

ಒಬ್ಬನು ಸ್ಥಿರವಾಗಿರತಕ್ಕದ್ದು, ಇಲ್ಲವಾದರೆ ಆತನು ತನ್ನ ಪ್ರತಿಫಲವನ್ನು ಪಡೆದುಕೊಳ್ಳುವದಿಲ್ಲ. **ತಾಳ್ಮೆ** (ὑπομονή, *hupomonē*), ಅಥವಾ "ಸಹನೆ" (ವ. 36; KJV) ಎಂಬುದರ ಅರ್ಥವು ಸಂಕಷ್ಟಗಳ ನಡುವೆ ಸಹಿಸಿಕೊಳ್ಳುವಿಕೆ ಎಂದಾಗಿರುತ್ತದೆ. ಒಬ್ಬನು "ಉಪದ್ರವಗಳಲ್ಲಿ ಉಲ್ಲಾಸ" ಪಡಬಹುದು (ರೋಮಾ 5:3). ಒಬ್ಬನ ನಂಬಿಕೆಯು ಪರೀಕ್ಷೆಗೊಳಗಾಗುವದೇ ತಾಳ್ಮೆಯನ್ನು ಹುಟ್ಟಿಸುತ್ತದೆ (ಯಾಕೋಬ 1:2, 3). ನಿತ್ಯವಾದ ಪ್ರತಿಫಲಕ್ಕೆ ಹೋಲಿಸಿದರೆ ನಮ್ಮ ಬಾಧೆಗಳು ಹಗುರವೆಂದು ನಾವು ಬಲ್ಲೆವು (2 ಕೊರಿಂಥ 4:17). ನಮ್ಮ ಗುರಿಯು **ದೇವರ ಚಿತ್ತವನ್ನು** ಮಾಡುವದರಲ್ಲಿ ಮುಂದುವರೆಯುವದೇ ಆಗಿದೆ, ಯಾಕೆಂದರೆ ಅದಕ್ಕೆ ಕಡಿಮೆಯಾಗಿ ನಿಲ್ಲಿಸುವದು, ಕೈ ಬಿಟ್ಟು ಬಿಡುವದು, ಅಥವಾ ನಮ್ಮ ನಂಬಿಕೆಯನ್ನು ಎಸೆದು ಬಿಡುವದು ದೇವರಿಂದ **ವಾಗ್ದಾನ** ಮಾಡಲ್ಪಟ್ಟದ್ದನ್ನು ಹೊಂದದೆ ಹೋಗುವದರಲ್ಲಿ ಫಲಿತಗೊಳ್ಳುವದು. ಅವರು ಅನುಭವಿಸಿದ ರೀತಿಯಲ್ಲಿ ಬಾಧೆಯನ್ನನುಭವಿಸುವದು ಅವಶ್ಯಕವಾಗಿ ದೇವರ ಚಿತ್ತವಾಗಿರಲಿಲ್ಲ, ಆದರೆ ಅವರು ಸಹಿಸಿಕೊಂಡದ್ದಕ್ಕಾಗಿ ಅವರಿಗೆ ಬಹಳವಾಗಿ ಪ್ರತಿಫಲವನ್ನು ಕೊಡುವದು ಆತನ ಚಿತ್ತವಾಗಿತ್ತು.

**ವಚನಗಳು 37, 38.** ಈ ವಚನಗಳು ಕ್ರಿಸ್ತನ ಕುರಿತು ಮಾತಾಡುತ್ತಿವೆಯೆಂಬುದು ಸ್ಪಷ್ಟವಾಗಿರುತ್ತದೆ, ಆದರೆ ಅದು ಹಳೆಯ ಒಡಂಬಡಿಕೆಯ ವಾಕ್ಯದಲ್ಲಿ ಸ್ಪಷ್ಟವಾಗಿರಲಿಲ್ಲ. ಹಾಗಾದರೆ, ಈ ವಾಕ್ಯಭಾಗಗಳು ಆತನ ಕುರಿತಾಗಿಯೇ ಎಂದು ಹೇಗೆ ಹೇಳುವದಕ್ಕೆ ಸಾಧ್ಯ? ಅಲ್ಲದೆ, ಇಲ್ಲಿ ಪ್ರಸ್ತಾಪಿಸಲಾಗಿರುವ **ಬರುವಾತನು** ಎಂಬುದು ಯಾವ ಬರೋಣವನ್ನು ಸೂಚಿಸುತ್ತದೆ? 37 ಮತ್ತು 38 ವಚನಗಳು ಯೆಶಾಯ 26:20 ಹಾಗೂ ಹಬಕ್ಕೂಕ 2:3, 4ರಲ್ಲಿನ ಮಾತುಗಳನ್ನು ಬಳಸುತ್ತವೆ. ಪ್ರವಾದಿಯು ಬಿಡುಗಡೆಗಾಗಿ ಕಾಯುತ್ತಿದ್ದನೆಂಬುದನ್ನು ವಾಕ್ಯವು ಸೂಚಿಸುತ್ತದೆ. ಇಬ್ರಿಯರಿಗೆ ಪತ್ರಿಕೆಯ ಲೇಖಕನು "ಬರುವಿಕೆ"ಯನ್ನು ಒತ್ತಿ ಹೇಳುವದಕ್ಕೆ LXXನಲ್ಲಿರುವ ಮಾತುಗಳನ್ನು ಮರು ಹೊಂದಾಣಿಕೆ ಮಾಡುತ್ತಾನೆ.

ಅನೇಕ ಲೇಖಕರು ಈ "ಬರುವಿಕೆ" ಯನ್ನು ಎರಡನೆಯ ಬರೋಣವಾಗಿ ಕಾಣುತ್ತಾರೆ. ಹೇಗೂ, ಹಳೆಯ ಒಡಂಬಡಿಕೆಯ ಪ್ರವಾದಿಗಳ ಬರಹಗಳಲ್ಲಾಗಲಿ ಅಥವಾ ಇಲ್ಲಿ ಇಬ್ರಿಯರಿಗೆ ಪತ್ರಿಕೆಯಲ್ಲಾಗಿ, ಇದು ಸರಿಯಾಗಿರುವದಕ್ಕೆ ಸಾಧ್ಯವಿಲ್ಲ. ಅಪೊಸ್ತಲರು ತಮ್ಮ ದಿನಗಳಲ್ಲಿ ಕ್ರಿಸ್ತನ ಪ್ರತ್ಯಕ್ಷತೆಯು ಹತ್ತಿರವಾಗಿದೆಯೆಂದು ಬೋಧಿಸಲಿಲ್ಲ. 2 ಥೆಸಲೋನಿಕ 2:1-3ರ ಅಧ್ಯಯನವು ತೋರಿಸುವದೇನೆಂದರೆ ಪ್ರಥಮ ಶತಮಾನದಲ್ಲಿ ಆತನ ಬರೋಣವು ಸನ್ನಿಹಿತವಾಗಿದೆಯೆಂದು ಎದುರು ನೋಡಲ್ಪಟ್ಟಿರಲಿಲ್ಲ ಎಂಬದೆ. ಕರ್ತನ ಪುನರಾಗಮನದ ಗಳಿಗೆ ಕುರಿತಾಗಿ ಪೌಲನು ಮತ್ತು ಹೊಸ ಒಡಂಬಡಿಕೆಯ ಇತರ ಲೇಖಕರ ಮಧ್ಯದಲ್ಲಿ ಏಕೆ ಒಂದು ವಿರುದ್ಧತೆಯಿರಬೇಕು? ಅವರು ಪೂರ್ಣವಾಗಿ ಒಮ್ಮತದಲ್ಲಿದ್ದರು: ಕರ್ತನು ಎರಡನೆಯ ಬರೋಣದಲ್ಲಿ ಹತ್ತಿರದ ಯಾವ ಸಮಯದಲ್ಲಿಯೂ ಪ್ರತ್ಯಕ್ಷನಾಗುವವನಾಗಿರಲಿಲ್ಲ.

ಪ್ರವಾದಿಗಳು ದೇವರು ಕೆಲವರಿಗೆ ಪ್ರತಿಫಲ ಕೊಡುವದಕ್ಕೂ ಕೆಲವರಿಗೆ ದಂಡನೆಯನ್ನು ಕೊಡುವದಕ್ಕೆ ಬರುವ ಬಗ್ಗೆ ಮಾತಾಡಿದರೆಂಬುದನ್ನು ನೆನಪಿಸಿಕೊಳ್ಳಿರಿ. ಉದಾಹರಣೆಗೆ,

ಆಮೋಸ 4:12ರಲ್ಲಿ ದೇವರು ಇಸ್ರಾಯೇಲ್ಯರನ್ನು ದಂಡಿಸುವದಕ್ಕೆ ಬರಲಿದ್ದನು. ಕಸ್ದೀಯರಿಂದ ಬಿಡುಗಡೆಗೊಳ್ಳುವಿಕೆಯು ಬರುತ್ತಲಿದೆ ಎಂದು ಆತನು ಪ್ರವಾದಿಗಳಿಗೆ ಪ್ರಕಟಗೊಳಿಸಿದನು, ಮತ್ತು ಅದು ಜನರಿಗೆ ಬಹಳ ದೂರದಲ್ಲಿದೆ ಎಂಬಂತೆ ತೋರಬಹುದಾದರೂ, ದೇವರು ತಡಮಾಡುವವನಾಗಿರಲಿಲ್ಲ. ಪೌಲನು ಅಪೊಸ್ತಲರ ಕೃತ್ಯಗಳು 17:30, 31ರಲ್ಲಿ ದೇವರು ಯೇಸುವಿನ ಬರೋಣಕ್ಕೆ ಒಂದು ದಿನವನ್ನು ನಿಷ್ಕರ್ಷೆ ಮಾಡಿದ್ದಾನೆಂದು ಘೋಷಿಸಿದನು. ಕಾಯುತ್ತಿರುವ ಸಮಯದಲ್ಲಿ ಏನೇ ಸಂಭವಿಸಿದರೂ ಸರಿಯೇ, **ನೀತಿವಂತನು ನಂಬಿಕೆಯಿಂದಲೇ ಬದುಕ**ಬೇಕು. ಪೌಲನು ತನ್ನ ನಂಬಿಕೆಯ ಮೇಲಿನ ಪ್ರಬಂಧವನ್ನು ಪರಿಚಯಿಸುವದಕ್ಕೆ ರೋಮಾ 1:17ರಲ್ಲಿ ಇದೇ ವಚನವನ್ನು ಬಳಸಿದನು. ಇಬ್ರಿಯರಿಗೆ ಪತ್ರಿಕೆ ಮತ್ತು ಪೌಲನ ಬರಹಗಳು ಎರಡೂ ದೇವರು ವಾಗ್ದಾನ ಮಾಡಿರುವ "ಜೀವವನ್ನು" ಪಡೆದುಕೊಳ್ಳುವದಕ್ಕಾಗಿ ನಂಬಿಗಸ್ತರಾಗಿ ಉಳಿಯುವದರ ಅವಶ್ಯಕತೆಯನ್ನು ಒತ್ತಿ ಹೇಳುತ್ತವೆ.

ಯೇಸುವಿನ ಎಲ್ಲಾ "ಬರುವಿಕೆಗಳು" ಆತನ ಎರಡನೆಯ ಬರೋಣವನ್ನು ಸೂಚಿಸುವದಿಲ್ಲ ಎಂಬುದನ್ನು ಹೊಸ ಒಡಂಬಡಿಕೆಯು ಸ್ಪಷ್ಟಗೊಳಿಸುತ್ತದೆ. ಮತ್ತಾಯ 24:27 "ಮನುಷ್ಯಕುಮಾರನ ಬರೋಣ" ವನ್ನು ಕುರಿತು ಮಾತಾಡುತ್ತದೆ, ಆದರೆ ಇದು ಎರಡನೆಯ ಬರೋಣ ಆಗಿರುವದಕ್ಕೆ ಸಾಧ್ಯವಿಲ್ಲ; ಬದಲಾಗಿ, ಈ ಹಂತದಲ್ಲಿ, ಅಪನಂಬಿಗಸ್ತಿಕೆಗಾಗಿ, ತನ್ನನ್ನು ತಿರಸ್ಕರಿಸಿದ್ದಕ್ಕಾಗಿ ಯೆರೂಸಲೇಮನ್ನು ದಂಡಿಸುವದ ಕ್ಕೋಸ್ಕರ ಕ್ರಿಸ್ತನು ಬರುವವನಾಗಿದ್ದನು. ಮುಂದಿನ ವಚನದಲ್ಲಿ ಆತನು "ಹೆಣಗಳ" ಬಗ್ಗೆ ಮಾತಾಡುತ್ತಾನೆ – ಯೆರೂಸಲೇಮಿನ ಜನರಲ್ಲಿ ಆತನು ಕಂಡಿದ್ದ ಸತ್ತ ನಂಬಿಕೆ. ಅವರ ಸ್ಥಿತಿಯ ಈ ಚಿತ್ರಣವು ಕಾಲವು ಗತಿಸಿದಂತೆ ಹೆಚ್ಚೆಚ್ಚು ನಿಖರವಾಗಿತ್ತು. ಈ "ಹೆಣ" ದ ಸುತ್ತಲಿನಲ್ಲೇ ರೋಮಿನ "ಹದ್ದುಗಳು" ಕೂಡಲಿದ್ದವು, ಕೊಳ್ಳೆ ಹೊಡೆಯುವದಕ್ಕೆ ಮತ್ತು ನಾಶ ಮಾಡುವದಕ್ಕೋಸ್ಕರ ಕೂಡಲಿದ್ದವು. ಹಳೆಯ ಒಡಂಬಡಿಕೆಯ ಪ್ರವಾದಿಗಳು ಮೂಲಕ ತಿಳಿಸಲ್ಪಟ್ಟ ವಾಗ್ದಾನಗಳನ್ನು ಅನುಸರಿಸಿ ದೇವರು ಮಾಡಿದ ಪ್ರಕಾರವೇ, ಕರ್ತನು ಆ ಕಾಲದಲ್ಲಿ ದಂಡಿಸುವವನಾಗಿ "ಥಕ್ಕನೇ" ಬರುವನು.

ಲೇಖಕನು ಯೇಸುವಿನ ಕುರಿತಾಗಿ, **ಬರುವಾತನು ಇನ್ನು ಸ್ವಲ್ಪಕಾಲದಲ್ಲಿ ಬರುವನು** (ವ. 37) ಎಂದು ಹೇಳಿದಾಗ, ನಿಸ್ಸಂಶಯವಾಗಿ, ಆತನು ಬರಲಿದ್ದ ಯೆರೂಸಲೇಮಿನ ನಾಶನದ ಕುರಿತಾಗಿ ಮಾತಾಡುತ್ತಿದ್ದನು, ಅದರಲ್ಲಿ ಯೇಸು ತನ್ನನ್ನು ಜನರು ತಿರಸ್ಕರಿಸಿ ಶಿಲುಬೆಗೆ ಹಾಕಿದ್ದರ ನಿಮಿತ್ತವಾಗಿ ದೇಶವನ್ನು ದಂಡಿಸುವದಕ್ಕಾಗಿ "ಬಂದನು" (ವ. 39ರ ಮೇಲಿನ ಚರ್ಚೆಯನ್ನು ನೋಡಿರಿ). ಹೇಗೂ, ಆತನು ತನ್ನ ನೀತಿವಂತರಾದ ದೇವಜನರನ್ನು ಬಿಡಿಸುವೆನೆಂದು ವಾಗ್ದಾನ ಮಾಡಿದನು. ಹಿರೀ ಸಭೆಯವರು ಮತ್ತು ಸ್ತೇಫನನ ಮೇಲೆ ಆರೋಪಗಳನ್ನು ಮಾಡಿದವರು ಒಂದು ಅರ್ಥದಲ್ಲಿ, ಯೇಸು ಅವರ ದೇವಾಲಯವನ್ನು ನಾಶಗೊಳಿಸುವನೆಂದು ಹೇಳಿದ್ದರಲ್ಲಿ ತಪ್ಪಿರುವದಿಲ್ಲ (ಅಪೊಸ್ತಲರ ಕೃತ್ಯಗಳು 6:13, 14). ಅವರ ದಂಡಿಸುವಿಕೆ ಮತ್ತು ಅದೇ ವೇಳೆಯಲ್ಲಿ ನಂಬಿಗಸ್ತರಾದ ಕ್ರೈಸ್ತರ ತಪ್ಪಿಸಿಕೊಳ್ಳುವಿಕೆಯು ಹಳೆಯ ಒಡಂಬಡಿಕೆಯ ಅರ್ಥದಲ್ಲಿ, ಕೆಲವರನ್ನು ದಂಡಿಸುವದಕ್ಕೂ ಶೇಷ ಜನವನ್ನು ವಿಮೋಚಿಸುವದಕ್ಕೂ ಬರುವ ರೀತಿಯಲ್ಲಿ ಕ್ರಿಸ್ತನ ಒಂದು "ಬರೋಣ" ಆಗಿತ್ತು.

ನಾವು ಈ ವಿಮೋಚನೆಯನ್ನು 37ನೇ ವಚನಕ್ಕೆ ಜೋಡಿಸಿದ್ದೇವೆ; ಇದು 38ನೇ ವಚನಕ್ಕೆ ಸಹ ಜೋಡಿಸಲ್ಪಡಬೇಕು. ಹಬಕ್ಕೂಕ 2:4ರ ಉಲ್ಲೇಖನವು – **ಆದರೆ ನನ್ನವನಾಗಿರುವ ನೀತಿವಂತನು ನಂಬಿಕೆಯಿಂದಲೇ ಬದುಕುವನು** – ಎಂಬುದು ಮೂಲತಃ ಕಸ್ದೀಯರ ರಾಜ್ಯವನ್ನು ಕಿತ್ತೆಸೆದು ಅವರಿಂದ ಯೆಹೂದ್ಯರಿಗಾಗುವ ಬಾಧೆಯನ್ನು ಅಂತ್ಯಗೊಳಿಸುವದನ್ನು ಸೂಚಿಸುವದಾಗಿತ್ತು. ಹೇಗೂ, ಅದನ್ನು ಇಬ್ರಿಯರಿಗೆ ಪತ್ರಿಕೆಯಲ್ಲಿ ಅದೇ ರೀತಿಯ

ಅನ್ವಯಿಕೆಯೊಂದಿಗೆ ಬಳಸುವದು ಸೂಕ್ತವಾಗಿತ್ತು.[77] ದೇವರು ತನ್ನವರಿಗೆ ಪ್ರತೀಕಾರವನ್ನು ಸಲ್ಲಿಸಿ ಗರ್ವಿಷ್ಠರನ್ನು ದಂಡಿಸುವದಕ್ಕೆ ಬರುವನೆಂದು ಹಬಕ್ಕೂಕನು ಹೇಳುವವನಾಗಿದ್ದನು. ಅದೇ ರೀತಿಯಲ್ಲಿಯೇ, ಯೆರೂಸಲೇಮಿನ ಪತನದ ವೇಳೆಯಲ್ಲಿ ಬೇರೆಯವರು ಅನುಭವಿಸಿದ ಸಂಕಷ್ಟಗಳನ್ನು ಅನುಭವಿಸುವದರಿಂದ ನಂಬಿಗಸ್ತರು ತಪ್ಪಿಸಲ್ಪಟ್ಟರು. ಹಬಕ್ಕೂಕನ ಪ್ರವಾದನೆಯು ಇಬ್ರಿಯರಿಗೆ ಪತ್ರಿಕೆಯ ಲೇಖಕನ ಉದ್ದೇಶಕ್ಕೆ ಸರಿಯಾಗಿಯೇ ಹೊಂದಿಕೊಳ್ಳುತ್ತದೆ. "ಈ ರೀತಿಯಾಗಿ ಹಳೆಯ ಒಡಂಬಡಿಕೆಯ ವಾಕ್ಯದ ಮೂಲಭೂತ ಅರ್ಥವನ್ನು ನಾಶಗೊಳಿಸದೆಯೇ ಪುನಸ್ಸಂಯೋಜಿಸುವದು ತಮ್ಮನ್ನು ಪವಿತ್ರಾತ್ಮನ ವಕ್ತಾರರೆಂದು ತಿಳಿದುಕೊಂಡಿದ್ದ ಹೊಸ ಒಡಂಬಡಿಕೆಯ ಬರಹಗಾರರ ವೈಶಿಷ್ಟ್ಯತೆಯಾಗಿರುತ್ತದೆ."[78]

"ನೀತಿವಂತನು" – ಅಂದರೆ, ಒಬ್ಬ ಕ್ರೈಸ್ತನು – **ಹಿಂದೆಗೆದರೆ**, ದೇವರು ತನ್ನ ಆಶೀರ್ವಾದಗಳನ್ನು ಆತನಿಗೆ ಅನುಗ್ರಹಿಸುವದಿಲ್ಲ. ಆತನಿಗೆ ಅಪನಂಬಿಗಸ್ತರಲ್ಲಿ **ಸಂತೋಷವಿರುವದಿಲ್ಲ**. ಪತ್ರಿಕೆಯನ್ನು ಸ್ವೀಕರಿಸಿಕೊಂಡವರಿಗಾದರೋ, ನಂಬಿಕೆಯಿಂದ ಜೀವಿಸಬೇಕು ಇಲ್ಲವೆ ಯೆಹೂದಿ ಮತಕ್ಕೆ ಹಿಂದಿರುಗಬೇಕು ಎಂಬ ಎರಡೇ ಆಯ್ಕೆಗಳಿದ್ದವು.

**ವಚನ 39.** ಅವರು ಯೆಹೂದಿ ಮತಕ್ಕೆ ಹಿಂದಿರುಗಿದ್ದಾದರೆ, ಆಗ **ನಾಶವಾಗುವದೇ** ಫಲಿತವಾಗುವದು. ಒಬ್ಬನು ತನ್ನ ಆತ್ಮವನ್ನು ರಕ್ಷಿಸಿಕೊಳ್ಳುವದಕ್ಕೆ ತನ್ನ ನಂಬಿಕೆಯನ್ನು ಕಾಪಾಡಿಕೊಳ್ಳಬೇಕು. ಕೆಲವರು ಹಳೆಯ ಒಡಂಬಡಿಕೆಗೆ ಹಿಂದಿರುಗಿದ್ದಾರೆಂದು ಆತನು ಹೇಳಿದನು, ಆದರೆ ಈ ಪತ್ರಿಕೆಯ ವಾಚಕರು ಕೊರತೆಯಾಗಿ ಕಾಣಲ್ಪಡುವದಿಲ್ಲ ಎಂಬ ಭರವಸವು ಆತನಿಗಿತ್ತು. **ಹಿಂದೆಗೆದವರಾಗಿ**ರುವವರು **ನಂಬುವವರಾಗಿ ಪ್ರಾಣರಕ್ಷಣೆಯನ್ನು ಹೊಂದುವವರಾಗಿರುವದಕ್ಕೆ** ಸಾಧ್ಯವಿಲ್ಲ. ಒಬ್ಬನು ತನ್ನ ನಂಬಿಕೆಯನ್ನು ಕಳೆದುಕೊಳ್ಳುವದು ಅಸಾಧ್ಯವಾಗಿರುವದಾದಲ್ಲಿ, ಈ ಬುದ್ಧಿವಾದವು ಏಕೆ ಕೊಡಲ್ಪಟ್ಟಿರುತ್ತಿತ್ತು? ಈ ಪದಗುಚ್ಛವು ಯೆರೂಸಲೇಮಿನ ನಾಶನದ ಕುರಿತು ಯೇಸು ಹೇಳಿದ ನುಡಿಗಳಂತೆಯೇ ಇರುತ್ತದೆ: "ನಿಮ್ಮ ಸ್ಥೈರಣೆಯಿಂದ ನಿಮ್ಮ ಪ್ರಾಣಗಳನ್ನು ಪಡಕೊಳ್ಳುವಿರಿ" (ಲೂಕ 21:19). ಅಗತ್ಯವಿರುವ ನಂಬಿಕೆಯು ಸ್ಥೈರಣೆಯನ್ನು ಹೊಂದಿರುವ ನಂಬಿಕೆಯೇ ಆಗಿದೆ. ಈ ಇಬ್ರಿಯ ಕ್ರೈಸ್ತರು ಏಕಾಏಕಿ ನಿಂತು ಬಿಡುವದಕ್ಕೆ ಸಾಧ್ಯವಿರಲಿಲ್ಲ. ಅನೇಕರು ಯೆಹೂದಿ ಮತದಿಂದ ಹೊರಗೆ ಬರುವ ತನಕ, ಪವಿತ್ರ ಪಟ್ಟಣಕ್ಕೆ ದೂರವಾಗಿ ಮತ್ತು ಸುರಕ್ಷಿತ ಸ್ಥಳಕ್ಕೆ ಬರುವದಕ್ಕೆ ಯೇಸುವಿನ ನಿರ್ದೇಶನಗಳನ್ನು ಅನುಸರಿಸಿದರು. ಇಂದು ಅದೇ ರೀತಿಯ ಸ್ಥೈರಣೆಯುಳ್ಳ ನಂಬಿಕೆಯ ಅಗತ್ಯವಿರುತ್ತದೆ.

ಲೇಖಕನು **ನಾವಾದರೋ** ಎಂದು ಹೇಳುವ ಮೂಲಕ ತನ್ನನ್ನು ಮತ್ತೊಂದು ಸಾರಿ ವಾಚಕರೊಂದಿಗೆ ಗುರುತಿಸಿಕೊಳ್ಳುತ್ತಾನೆ. ಆತನು 2:3ರಲ್ಲಿ ಮಾಡಿದ್ದ ಪ್ರಕಾರವೇ ಅವರನ್ನು ನಂಬಿಗಸ್ತರಾಗಿ ಜೀವಿಸುವಂತೆ ಪ್ರೋತ್ಸಾಹಿಸುವದಕ್ಕಾಗಿ ಹಾಗೆ ಮಾಡಿದನು. ಕ್ರೈಸ್ತನು ತನ್ನ ನಂಬಿಗಸ್ತಿಯಿಂದಲೇ ಬದುಕಬೇಕು; ಅಂದರೆ, ಆತನು ಜೀವಿಸುವವರೆಗೂ ನಂಬಿಗಸ್ತನಾಗಿರುವದನ್ನು ಮುಂದುವರೆಸಬೇಕು. ತನ್ನ ನಂಬಿಗಸ್ತಿಕೆಯನ್ನು ಕಾಪಾಡಿಕೊಳ್ಳುವ ಪ್ರತಿಯೊಬ್ಬನು ತನ್ನ "ಪ್ರಾಣ [ಆತ್ಮ] ರಕ್ಷಣೆಯನ್ನು ಹೊಂದಿಕೊಳ್ಳುವನು" (ψυχή, *psuchē*). *Psuchē* ಎಂಬುದು "ಜೀವ" ಎಂದು ಅನುವಾದಿಸಲ್ಪಡುವದಾದರೆ, ಈ ಹೇಳಿಕೆಯು ಇಲ್ಲಿ ಕೊಡಲ್ಪಟ್ಟಿರುವ ವ್ಯಾಖ್ಯಾನದೊಂದಿಗೆ ಉತ್ತಮವಾಗಿ ಸರಿಹೊಂದುತ್ತದೆ; ಹೇಗೂ, ಯೇಸುವಿನ ಉಪದೇಶಗಳಿಗೆ ವಿಧೇಯರಾಗಿ ಪಟ್ಟಣದಿಂದ ತಪ್ಪಿಸಿಕೊಂಡ ಕ್ರೈಸ್ತರು ತಮ್ಮ ಆತ್ಮಗಳನ್ನು ಮಾತ್ರವಲ್ಲದೆ ತಮ್ಮ ಜೀವಗಳನ್ನು ಸಹ ಕಾಪಾಡಿಕೊಳ್ಳುವರು.

ರೋಮನ್ ಸೈನ್ಯವು ಪಟ್ಟಣದಿಂದ ಏಕಾಏಕಿ ಹಿಂದೆಗೆದ ವೇಳೆ ಜೊತೆಯ ಕ್ರೈಸ್ತರು ಯೆರೂಸಲೇಮನ್ನು ಬಿಟ್ಟು ಹೋಗುವದನ್ನು ಯೆಹೂದಿ ಕ್ರೈಸ್ತನೊಬ್ಬನು ಕಂಡಾಗ, ಆತನು ಸಹ ಅವರೊಡನೆ ಹೊರಡಬಹುದು ಆದರೆ ಬಳಿಕ "ಹಿಂದೆಗೆಯುವವನಾಗಿದ್ದನು." ಯೆಹೂದಿ ಮತದ ಭದ್ರಕೋಟೆಯ ಕಡೆಗೆ ತಿರುಗಿಕೊಳ್ಳುವದೆಂದರೆ ಮತ್ತಾಯ 24ರಲ್ಲಿನ ಯೇಸುವಿನ ಮಾತನ್ನು ತಿರಸ್ಕರಿಸಿದಂತಾಗಿತ್ತು. ಯೇಸುವಿನಿಂದ ಮುಂದಿಡಲ್ಪಟ್ಟ ನಂಬಿಕೆಯ ಪರೀಕ್ಷೆಯಲ್ಲಿ ಅವಿಧೇಯನಾದವನಲ್ಲಿ ದೇವರು ಸಂತೋಷಗೊಳ್ಳುವದಿಲ್ಲ. ಮತ್ತಾಯ 24:13 ಹೀಗೆ ಹೇಳುತ್ತದೆ, "ಆದರೆ ಕಡೇ ವರೆಗೂ ತಾಳುವವನು ರಕ್ಷಣೆಹೊಂದುವನು." ಈ ಸನ್ನಿವೇಶದಲ್ಲಿ, ಆ ಹೇಳಿಕೆಯು ಒಬ್ಬನ ಜೀವನದ ಅಂತ್ಯ ಅಥವಾ ಕಾಲದ ಅಂತ್ಯವನ್ನು ಸೂಚಿಸುವದಕ್ಕೆ ಸಾಧ್ಯವಿಲ್ಲ; ಅದು ಕೇವಲ ಯೆರೂಸಲೇಮಿನ ಅಂತ್ಯವನ್ನು ಮಾತ್ರವೇ ಸೂಚಿಸಬಲ್ಲದು. ಹಾಗಾದರೆ 39ನೇ ವಚನವು ಮತ್ತಾಯ 24ರಲ್ಲಿ ಯೇಸು ಹೇಳಿದ್ದಕ್ಕೆ ಸಮಾನವಾಗಿರುತ್ತದೆ. ಪಟ್ಟಣವನ್ನು ತೊರೆದು ಪೆಲ್ಲಾಗೆ ಹೋಗುವ ಮೂಲಕ, ಒಬ್ಬ ವಿಶ್ವಾಸಿಯು ತನ್ನ ಪ್ರಾಣವನ್ನು ಉಳಿಸಿಕೊಳ್ಳಬಹುದಿತ್ತು ಮತ್ತು ಅಂತ್ಯದ ವರೆಗೂ ನಂಬಿಗಸ್ತಿಕೆಯನ್ನು ತೋರ್ಪಡಿಸಬಹುದು, ಅದರ ಫಲಿತವಾಗಿ ನಿತ್ಯಜೀವವು ಸಿಕ್ಕುವದಾಗಿತ್ತು. ನೀತಿವಂತನು ತನ್ನ ಜೀವವನ್ನು, ಮಾತ್ರವಲ್ಲದೆ ತನ್ನ ಆತ್ಮವನ್ನು ಸಹ ಉಳಿಸಿಕೊಳ್ಳಲು ನಂಬಿಕೆಯಿಂದ ಜೀವಿಸುವದನ್ನು ಮುಂದುವರೆಸಬೇಕಿತ್ತು. "ನಾಶನವು" ಆತನ ಜೀವದ ಸಂಭಾವ್ಯ ನಷ್ಟವನ್ನೊಳಗೊಂಡಿರಬಹುದು, ಆದರೆ ಅದು ಖಂಡಿತವಾಗಿಯೂ ಆತನ ಸ್ವಾತಂತ್ರ್ಯದ ನಷ್ಟ ಎಂಬ ಅರ್ಥವನ್ನಂತೂ ಹೊಂದಿತ್ತು. ಆತನ ಜೀವನದಲ್ಲಿ ಪ್ರಿಯವೆಂದು ಎಣಿಸಿದ್ದೆಲ್ಲವೂ ಯೆರೂಸಲೇಮಿನ ಜೊತೆಗೆ ಇನ್ನೇನು ಸ್ವಲ್ಪದರಲ್ಲಿ ನಾಶಗೊಳ್ಳಲಿತ್ತು. ಅಂಥ ಪರಿಸ್ಥಿತಿಗಳಿರುವಾಗ ಒಬ್ಬ ಕ್ರೈಸ್ತನು ಏಕೆ ಪಟ್ಟಣದಲ್ಲಿ ಉಳಿದುಕೊಳ್ಳುವನು?

ಈ ಅಧ್ಯಯನವು ನಮ್ಮನ್ನು 11ನೇ ಅಧ್ಯಾಯಕ್ಕೆ ನಡಿಸುವ ರಕ್ಷಣೆಯುಂಟು ಮಾಡುವ ನಂಬಿಕೆಯ ವಿಷಯಕ್ಕೆ ಒಂದು ಪೀಠಿಕೆಯಾಗಿ ಕಾಣಲ್ಪಡಬಹುದು. ಅಲ್ಲಿ, ನಂಬಿಕೆಯ ಮಹಾನ್ ಉದಾಹರಣೆಗಳನ್ನು ಕಾಣುವೆವು, ಮಾತ್ರವಲ್ಲದೆ ನಂಬಿಕೆಯು ರಕ್ಷಣೆಯುಂಟು ಮಾಡುವದಕ್ಕೆ ಹೇಗೆ ಕಾರ್ಯ ಮಾಡುತ್ತದೆಂಬುದರ ಕುರಿತು ವಿವರಣೆಗಳನ್ನು ಮತ್ತು ಸವಿಸ್ತಾರವಾದ ವರ್ಣನೆಗಳನ್ನು ಕಾಣುವೆವು.

## ಹೆಚ್ಚಿನ ಅಧ್ಯಯನಕ್ಕಾಗಿ:
## "ಸೂಚನೆಗಳು" ಮತ್ತು "ಸಮೀಪಿಸುತ್ತಿರುವ ದಿನ"

ಮತ್ತಾಯ 24ರಲ್ಲಿ ಯೇಸುವು ಶಿಷ್ಯರೊಂದಿಗೆ ನಡಿಸುವ ಸಂಭಾಷಣೆಯಲ್ಲಿ ಕೊಡಲ್ಪಟ್ಟಿರುವ ಅನೇಕ "ಸೂಚನೆಗಳು" ಪಟ್ಟಣದ ನಾಶನದ ವರೆಗೆ ಸಾಗುವ ಅನೇಕ ಘಟನೆಗಳನ್ನು ಮುಂತಿಳಿಸುತ್ತವೆ. ಇವುಗಳನ್ನು ಪ್ರೇರಿತ ಅಪೊಸ್ತಲರಿಂದ ಹೆಚ್ಚವರಿ ವಿವರಣೆಯನ್ನು ಸಹ ಪಡೆದಿರಬಹುದಾದ ನಂಬಿಗಸ್ತರು "ಕಾಣುವ" ದು ಸಾಧ್ಯವಿತ್ತು. ನಂಬಿಕೆಯ ಮೂಲಕವಾಗಿ ಅವರು ಯೇಸುವಿನಿಂದ ಮುಂತಿಳಿಸಲ್ಪಟ್ಟ ಸೂಚನೆಗಳು ನೆರವೇರುವದನ್ನು ನೋಡಿದರು. ಯೇಸುವು ಬಣ್ಣಿಸಿರುವ ಘಟನೆಗಳು ಬಹುತೇಕ ಕ್ರಿ.ಶ. 66ರಿಂದ 70ರ ಮಧ್ಯದಲ್ಲಿ ಸಂಭವಿಸಿದವು, ಅವುಗಳಲ್ಲಿ ಭೂಕಂಪಗಳಂತಹ ಕೆಲವು ಘಟನೆಗಳು ಕ್ರಿ.ಶ. 50ರಷ್ಟು ಮುಂಚಿನ ಕಾಲದಲ್ಲಿ ಸಂಭವಿಸಿದವು (ಮತ್ತಾಯ 24:7). ಅವರು ದಿನವನ್ನು ಗುರುತಿಸುವದಕ್ಕೆ ಶಕ್ತರಾಗಿದ್ದರು ಎಂಬದು ಸೂಚನೆಗಳು ಕೊಡಲ್ಪಟ್ಟಿದ್ದವು ಮತ್ತು "ಅವುಗಳು ಈಗಾಗಲೆ ವಿವೇಚಿಸುವವರಾದ ಪುರುಷರು ಮತ್ತು ಸ್ತ್ರೀಯರಿಗೆ ಗೋಚರವಾಗಿದ್ದವು"[79] ಎಂಬುದು ಪರೋಕ್ಷವಾಗಿ

ಸೂಚಿಸಲ್ಪಟ್ಟಿರುತ್ತದೆ. ಸಹಜವಾಗಿಯೇ, ಒಬ್ಬನು ತನ್ನ ಮರಣದ ದಿನವು ಸಮೀಪವಾಗುತ್ತಿರುವ ಹಾಗೆ ಜೊತೆಯ ಕ್ರೈಸ್ತರೊಂದಿಗೆ ಕೂಡಿ ಬರುವದಕ್ಕೆ ಬಯಸುವನು (ನೋಡಿರಿ ಇಬ್ರಿಯ 10:25), ಆದರೆ ಈ ವಾಕ್ಯಭಾಗವು ತಿಳಿಸಲಿಚ್ಛಿಸುವ ಅಂಶವು ಅದಾಗಿರುವದಿಲ್ಲ.

ಒಂದು ವಿಚಿತ್ರವೇನಿಸುವ ಸೂಚನೆಯು ಮತ್ತಾಯ 24:15, 16ರಲ್ಲಿ ಕೊಡಲ್ಪಟ್ಟಿದೆ: "ಆದದರಿಂದ ಪ್ರವಾದಿಯಾದ ದಾನಿಯೇಲನು ಹೇಳಿದಂಥ ಹಾಳುಮಾಡುವ ಅಸಹ್ಯ ವಸ್ತುವು ಪವಿತ್ರಸ್ಥಾನದಲ್ಲಿ ನಿಂತಿರುವದನ್ನು ನೀವು ಕಾಣುವಾಗ (ಇದನ್ನು ಓದುವವನು ತಿಳುಕೊಳ್ಳಲಿ) ಯೂದಾಯದಲ್ಲಿರುವವರು ಬೆಟ್ಟಗಳಿಗೆ ಓಡಿ ಹೋಗಲಿ." ಸಮಸ್ಯೆಯು ಮಾರ್ಕ 13:14ರಲ್ಲಿ ಹೇಳಲ್ಪಟ್ಟಿದೆ: "ಇದಲ್ಲದೆ ಹಾಳುಮಾಡುವ ಅಸಹ್ಯ ವಸ್ತುವು ನಿಲ್ಲಬಾರದ ಸ್ಥಳದಲ್ಲಿ ನಿಂತಿರುವದನ್ನು ನೀವು ಕಾಣುವಾಗ (ಇದನ್ನು ಓದುವವನು ತಿಳುಕೊಳ್ಳಲಿ) ಯೂದಾಯದಲ್ಲಿರುವವರು ಬೆಟ್ಟಗಳಿಗೆ ಓಡಿ ಹೋಗಲಿ."

"ಹಾಳುಮಾಡುವ ಅಸಹ್ಯ ವಸ್ತುವು" ಯಾವದಾಗಿತ್ತು? ಲೂಕನು ಅದನ್ನು ಇನ್ನಷ್ಟು ವಿವರಿಸುತ್ತಾನೆ: "ಆದರೆ ದಂಡುಗಳು ಯೆರೂಸಲೇಮ್ ಪಟ್ಟಣವನ್ನು ಮುತ್ತಿಗೆ ಹಾಕಿರುವದನ್ನು ನೀವು ಕಾಣುವಾಗ ಅದು ಹಾಳಾಗುವ ಕಾಲ ಸಮೀಪವಾಯಿತೆಂದು ತಿಳುಕೊಳ್ಳಿರಿ. ಆಗ ಯೂದಾಯದಲ್ಲಿರುವವರು ಬೆಟ್ಟಗಳಿಗೆ ಓಡಿ ಹೋಗಲಿ; ಆ ಪಟ್ಟಣದಲ್ಲಿರುವವರು ಅದರೊಳಗಿಂದ ಹೊರಟುಹೋಗಲಿ; ಹಳ್ಳಿಯವರು ಅದರೊಳಕ್ಕೆ ಹೋಗದಿರಲಿ" (ಲೂಕ 21:20, 21). ಯೆರೂಸಲೇಮ್ ಮುತ್ತಿಗೆ ಹಾಕಲ್ಪಟ್ಟು ಸೈನ್ಯಗಳು "ಕಾಣುವಾಗ," ಯಾವನಾದರೂ ಪಟ್ಟಣದಿಂದ ತಪ್ಪಿಸಿಕೊಳ್ಳುವದು ಹೇಗೆ ಸಾಧ್ಯ? ಬೇರೆಯವರು ಹೇಗೆ ಅದನ್ನು ಪ್ರವೇಶಿಸುವದಕ್ಕೆ ಸಾಧ್ಯ? ಮತ್ತಾಯ 24:22ರಲ್ಲಿ ಯೇಸು ಒಂದು ಸುಳಿವು ಕೊಡುತ್ತಾನೆ: "ಆ ದಿನಗಳನ್ನು ಕಡಿಮೆಮಾಡದಿದ್ದರೆ ಒಂದು ನರಪ್ರಾಣಿಯಾದರೂ ಉಳಿಯದು; ಆದರೆ ತಾನು ಆದುಕೊಂಡವರಿಗೋಸ್ಕರ ಆ ದಿನಗಳನ್ನು ಕಡಿಮೆ ಮಾಡುವನು." ಈ ಹಂತದಲ್ಲಿಯೇ ಪ್ರತ್ಯಕ್ಷ ಸಾಕ್ಷಿಯಾಗಿರುವ Josephusನು ನಮಗೆ ಶ್ರೇಷ್ಠ ಸೇವೆಯನ್ನು ಒದಗಿಸಿದ್ದಾನೆ. ಯೆರೂಸಲೇಮಿನಲ್ಲಿನ ಬಂಡಾಯವನ್ನು ದಮನ ಮಾಡುವದಕ್ಕೆ ಕೈಕೊಂಡ ತನ್ನ ಮೊದಲ ಕಾರ್ಯದಲ್ಲಿ ರೋಮನ್ ಸೈನ್ಯವು "ಲೋಕದಲ್ಲಿ ಯಾವ ಕಾರಣವೂ ಇಲ್ಲದೆ, ಪಟ್ಟಣದಿಂದ ನಿರ್ಗಮಿಸಿತು."[80]

ಮೂವತ್ತು ವರ್ಷಗಳ ತರುವಾಯ ಬರೆದಾಗ್ಯೂ, Cestiusನು ತನ್ನ ಸೈನ್ಯವನ್ನು ಏಕೆ ಹಿಂದಕ್ಕೆ ಕರೆದನು ಎಂಬುದರ ಕಾರಣವನ್ನು ಈ ಮಾಜಿ ಫರಿಸಾಯನು ತಿಳುಕೊಳ್ಳುವದಕ್ಕಾಗಲಿಲ್ಲ, ಆದರೆ Josephusನಿಗೆ ಗೊತ್ತಿಲ್ಲದ ಒಂದು ಸಂಗತಿಯು ನಮಗೆ ತಿಳಿದಿರುತ್ತದೆ: ದೇವರು ತಾನು ಆದುಕೊಂಡವರ ಬಗ್ಗೆ ಕಳಕಳಿ ಹೊಂದಿದ್ದನು ಮತ್ತು ದಿನಗಳನ್ನು ಕಡಿಮೆ ಮಾಡಿದನು. ಇದು ಕ್ರೈಸ್ತರಿಗೆ ತಪ್ಪಿಸಿಕೊಳ್ಳುವದಕ್ಕೆ ಸದವಕಾಶವನ್ನು ಒದಗಿಸಿತ್ತು. "ಸಭಾ ಚರಿತ್ರೆಯ ಪಿತ" ನಾಗಿರುವ Eusebiusನು, ಕ್ರೈಸ್ತರ "ಇಡೀ ಸಭೆಯು" ಅವರಿಗೆ ಕೊಡಲ್ಪಟ್ಟಿದ್ದ "ದೈವಿಕ ಪ್ರಕಟನೆ"ಯ ಫಲಿತವಾಗಿ ತಪ್ಪಿಸಿಕೊಳ್ಳುವದಕ್ಕೆ ಅನುಮತಿ ಹೊಂದಿತ್ತು ಎಂಬದಾಗಿ ವರದಿ ಮಾಡುತ್ತಾನೆ.[81]

ಯೆರೂಸಲೇಮಿನ ನಾಶನಕ್ಕಾಗಿ ಯೇಸು ಕೊಟ್ಟ ಸೂಚನೆಗಳಿಗೆ ತದ್ವಿರುದ್ಧವಾಗಿ, ಆತನು ಮುಂದೆ ಆತನ ಎರಡನೆಯ ಬರೋಣದ ಕುರಿತಾಗಿ ಪ್ರತ್ಯುತ್ತರ ಕೊಡುತ್ತಾ ಹೀಗೆ ಹೇಳುತ್ತಾನೆ, "ಇದಲ್ಲದೆ ಆ ದಿನದ ವಿಷಯವೂ ಗಳಿಗೆಯ ವಿಷಯವೂ ನನ್ನ ತಂದೆಯೊಬ್ಬನಿಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು, ಮಗನಿಗೂ ತಿಳಿಯದು" (ಮತ್ತಾಯ 24:36). ಈ ಹೇಳಿಕೆಯು ಯೆರೂಸಲೇಮಿನ ನಾಶನಕ್ಕೆ

ಅನ್ವಯವಾಗುವದಕ್ಕೆ ಸಾಧ್ಯವಿರಲಿಲ್ಲ, ಇಲ್ಲವಾದರೆ ಆತನು ಈಗಷ್ಟೆ ನೀಡಿದ ಎಲ್ಲಾ ಸೂಚನೆಗಳು ನಿಷ್ಪ್ರಯೋಜಕವಾಗುತ್ತಿದ್ದವು. "ಇನ್ನು ಸ್ವಲ್ಪಕಾಲದಲ್ಲಿ" ಎಂಬುದು ಯೂದಾಯದ ಯೆಹೂದ್ಯರಿಗೆ ವಿಶೇಷವಾದ ಮಹತ್ವವನ್ನು ಹೊಂದಿತ್ತು ಮತ್ತು ಆ ಪ್ರಾಂತ್ಯದಲ್ಲಿರುವ ಜನರ ಗುಂಪಿಗೆ ಈ ಪತ್ರಿಕೆಯು ಬರೆಯಲ್ಪಟ್ಟಿತ್ತೆಂಬುದನ್ನು ಇದು ಸೂಚಿಸುತ್ತದೆ. ಇದು ಫಿಲಿಪ್ಪಿಯವರಿಗೆ ಬರೆದ ಪತ್ರಿಕೆಯಂತೆ, "ಸಭಾಧ್ಯಕ್ಷರಿಗೂ ಸಭಾಸೇವಕರಿಗೂ" ಬರೆಯಲ್ಪಟ್ಟದ್ದಾಗಿರಲಿಲ್ಲ (1:1), ಆದರೆ ತಮ್ಮ ಆತ್ಮಗಳ ಮತ್ತು ದೇಹಗಳನ್ನು ಸುರಕ್ಷಿತವಾಗಿ ಕಾಪಾಡುವದಕ್ಕಾಗಿ ತಮ್ಮ ಮೇಲಿರುವ ಆತ್ಮೀಕ ಸಭಾನಾಯಕರಿಗೆ ವಿಧೇಯರಾಗಬೇಕಿದ್ದ ಸಭೆಯಲ್ಲಿನ ಒಂದು ಗುಂಪಿಗೆ ಬರೆಯಲ್ಪಟ್ಟದ್ದಾಗಿತ್ತು (ನೋಡಿರಿ 13:17).

## ಅನ್ವಯಿಸುವಿಕೆ

### ಒಂದು ಛಾಯೆ ಅಥವಾ ನಿಜವಸ್ತು (10:1)

ಒಂದು ಪಾಕಶಾಸ್ತ್ರದ ಪುಸ್ತಕವನ್ನು ಓದುವದಕ್ಕಿಂತಲೂ ಪೋಷಣೆಯನ್ನು ಒದಗಿಸುವ ಊಟವೊಂದನ್ನು ಮಾಡುವದು ಉತ್ತಮವಾಗಿರುತ್ತದೆ. ತಾನು ಮನೆಯಿಂದ ದೂರವಿರುವ ವೇಳೆ ತನ್ನ ಹೆಂಡತಿ ಮತ್ತು ಮಕ್ಕಳ ಛಾಯಚಿತ್ರವನ್ನಿಟ್ಟುಕೊಳ್ಳುವದು ಚೆಂದವಾಗಿರುತ್ತದೆ, ಆದರೆ ಅದು ಅವರ ಸಂಗಡ ಮನೆಯಲ್ಲಿರುವ ರೀತಿಯಲ್ಲಿಯೇ ಆಗಿರುವದಿಲ್ಲ. ನಾವು ನಮ್ಮ ಪ್ರಿಯರಿಂದ ಬಹಳ ದೂರದಲ್ಲಿರುವ ವೇಳೆ ನಿಜವಾಗಿಯೂ ಅವರೊಂದಿಗೆ ನಗುವನ್ನು ಮತ್ತು ಕಣ್ಣೀರನ್ನು ಹಂಚಿಕೊಳ್ಳುವದಕ್ಕೆ ಸಾಧ್ಯವಿರುವದಿಲ್ಲ. ನಾವು ನಿಜವಾದ ಸಂಗತಿಯಲ್ಲಿ ಆನಂದಿಸುವಷ್ಟು ಛಾಯೆಯಲ್ಲಿ ಆನಂದಿಸಲಾರೆವು. ಧರ್ಮಶಾಸ್ತ್ರ ಮತ್ತು ದೇವದರ್ಶನ ಗುಡಾರಗಳು ನಿಜವಾದ ವಸ್ತುವಿನ ಸಂಗಡ ಅನುಕೂಲಕರವಾಗಿ ಹೋಲಿಕೆಯಾಗುವದಕ್ಕೆ ಎಂದಿಗೂ ಸಾಧ್ಯವಿಲ್ಲ. ಪ್ರತಿಯೊಂದು ಪ್ರಾಣಿ ಯಜ್ಞದ ಸಮರ್ಪಿಸುವಿಕೆಯು ಪಾಪಿಯ ಹೃದಯದಲ್ಲಿ ಅಪರಾಧ ಭಾವನೆಯನ್ನು ಅಳಿಸಿ ಹಾಕದ ರೀತಿಯಲ್ಲಿ ಅದರ ಭಾರವನ್ನು ಸುಡುತ್ತಿತ್ತು; ಕ್ರಿಸ್ತನ ಪರಿಪೂರ್ಣವಾದ ಯಜ್ಞವು ಅಪರಾಧವನ್ನು ನಮ್ಮ ಆತ್ಮಗಳಿಂದ ತೆಗೆದು ಹಾಕುತ್ತದೆ.

### ಧಾರ್ಮಿಕ ಆಚಾರದ ಯಜ್ಞಗಳು ನಿಜವಾಗಿಯೂ ದೇವರು ಬಯಸಿದ್ದವುಗಳು ಆಗಿರಲೇ ಇಲ್ಲ (10:1)

ದೇವರು ನಿಜವಾಗಿಯೂ ಪ್ರಾಣಿಗಳ ಯಜ್ಞಗಳನ್ನು ಎಂಧಿಗೂ ಬಯಸಿರಲೇ ಇಲ್ಲ; ಇದು ಕೇವಲ ಇಬ್ರಿಯರಿಗೆ ಪತ್ರಿಕೆಯ ಪಾಠ ಮಾತ್ರವೇ ಆಗಿರುವದಿಲ್ಲ. ಅರಸನಾದ ಸೌಲನು ಸಮುವೇಲನಿಗೋಸ್ಕರ ಬಹಳವಾಗಿ ಕಾಯ್ದು ತಾಳ್ಮೆಯನ್ನು ಕಳಕೊಂಡಾಗ, ಆತನು ಸ್ವತಃ – ಅಧಿಕಾರವಿಲ್ಲದೆಯೇ – ದೇವರಿಗೆ ಯಜ್ಞವನ್ನು ಸಮರ್ಪಿಸಿದನು. ಆತನ ಕೃತ್ಯವು ಜನರನ್ನು ಮೆಚ್ಚಿಸುವದಕ್ಕೋಸ್ಕರ ಆಗಿರಬಹುದಾಗಿದೆ. ಅದಾದ ಸ್ವಲ್ಪ ಹೊತ್ತಿನಲ್ಲಿ ಸಮುವೇಲನು ಬಂದಾಗ, ಆತನು ಅರಸನನ್ನು ಈ ಮಾತುಗಳಿಂದ ಗದರಿಸಿದನು: "ಯೆಹೋವನು ವಿಧೇಯತ್ವಕ್ಕೆ ಮೆಚ್ಚುವಷ್ಟು ಯಜ್ಞಹೋಮಗಳಿಗೆ ಮೆಚ್ಚುತ್ತಾನೋ? ಯಜ್ಞವನ್ನು ಸಮರ್ಪಿಸುವದಕ್ಕಿಂತ ಮಾತು ಕೇಳುವದು ಉತ್ತಮವಾಗಿದೆ. ಟಗರುಗಳ ಕೊಬ್ಬಿಗಿಂತ ವಿಧೇಯತ್ವವು ವಿಶೇಷವಾಗಿದೆ" (1 ಸಮುವೇಲ 15:22). ದಾವೀದನು ಕೀರ್ತನೆ 51:16, 17ರಲ್ಲಿ ಈ ಸತ್ಯವನ್ನು ಪುನರುಚ್ಚರಿಸುತ್ತಾನೆ: "ನಿನಗೆ ಯಜ್ಞಗಳಲ್ಲಿ ಅಪೇಕ್ಷೆಯಿಲ್ಲ, ಇದ್ದರೆ ಸಮರ್ಪಿಸೇನು; ಸರ್ವಾಂಗಹೋಮಗಳಲ್ಲಿ ನಿನಗೆ ಸಂತೋಷವಿಲ್ಲ. ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ; ದೇವರೇ, ಪಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವದಿಲ್ಲ."

ದೇವರಿಗೆ ಯಜ್ಞಕ್ಕಿಂತಲೂ ಕರುಣೆಯುಳ್ಳ ಮನೋಭಾವನೆಯು ಎಷ್ಟೋ ಹೆಚ್ಚು ಅಮೂಲ್ಯವಾಗಿದೆ (ಹೋಶೇಯ 6:6; KJV). ಈ ಹಳೆಯ ಒಡಂಬಡಿಕೆಯ ಉಪದೇಶವನ್ನು ಯೇಸು ಕನಿಷ್ಠ ಎರಡು ಸಾರಿ ಉಲ್ಲೇಖ ಮಾಡುತ್ತಾನೆ (ಮತ್ತಾಯ 9:13; 12:7). ಧರ್ಮಶಾಸ್ತ್ರದ ಅಡಿಯಲ್ಲಿ ಸಹ, ಒಬ್ಬನು ದೇವರ ಮೇಲಿನ ತನ್ನ ಪ್ರೀತಿಯನ್ನು ತೋರ್ಪಡಿಸುವದಕ್ಕೋಸ್ಕರ ಯಜ್ಞಗಳಿದ್ದವು, ಅದು ಒಂದು ರೀತಿಯಲ್ಲಿ, "ನಾನು ನಿನ್ನನ್ನು ಈ ವಿಧದಲ್ಲಿಯೇ ಸನ್ಮಾನಿಸಿ ಆರಾಧಿಸುವದಕ್ಕೆ ಬಯಸುತ್ತೇನೆ" ಎಂದು ಹೇಳಿದಂತೆ ಆಗಿತ್ತು. ಅದೇ ರೀತಿಯಲ್ಲಿಯೇ, ನಮ್ಮ ಹೊಸ ಒಡಂಬಡಿಕೆಯ ಆರಾಧನೆಯು ಸಹ ನಮ್ಮ ಆತ್ಮಗಳನ್ನು ಅಂತರ್ಯದಲ್ಲಿ ಅಧೀನಪಡಿಸಿಕೊಳ್ಳದೆ ಕೇವಲ ಹೊರಗಿನ ವಾಡಿಕೆ ಮತ್ತು ಧಾರ್ಮಿಕ ನೇಮನಿಷ್ಠೆಗಿಂತ ಹೆಚ್ಚಿನದ್ದಾಗಿರಬೇಕು. ನಮ್ಮ ಆರಾಧನೆಯು ಹೃದಯಗಳಿಂದ ಬರತಕ್ಕದ್ದಾಗಿರಬೇಕು (ಮತ್ತಾಯ 15:8, 9; ಎಫೆಸ 5:19). ನಮ್ಮ ಸಿದ್ಧಾಂತವು ತಪ್ಪಾಗಿರುವದಾದರೆ, ನಮ್ಮ ಆರಾಧನೆಯು ತಪ್ಪು ಎಂದು ಯೇಸು ಹೇಳಿದನು (ಮತ್ತಾಯ 15:9). ನಿಜವಾದ ಸಿದ್ಧಾಂತವನ್ನು ಕಲಿಯುವದಕ್ಕೆ ಮತ್ತು ಬೋಧಿಸುವದಕ್ಕೆ ವಿಫಲವಾಗುವದು ಒಬ್ಬನ ಹೃದಯವು ತಪ್ಪು ಎಂಬುದನ್ನು ತೋರಿಸುತ್ತದೆ.

ಹಾಗಿದ್ದರೂ, ದೇವರು ಈ ಯಜ್ಞಗಳಲ್ಲಿ ಒಂದು ಉದ್ದೇಶವನ್ನು ಹೊಂದಿದ್ದನು. ಜನರು ತಮ್ಮ ಪಾಪಗಳಿಗಾಗಿ ಸ್ವಲ್ಪವಾದರೂ ಜವಾಬ್ದಾರಿಯನ್ನು ಅನುಭವಿಸಬೇಕೆಂದು ಆತನ ಬಯಕೆಯಾಗಿದ್ದಿರಬೇಕು. ಸ್ವತ್ತುಗಳನ್ನು (ಪಶುಗಳು ಮತ್ತು ಉತ್ಪಾದನೆಗಳು) ಬೆಲೆಯಾಗಿ ಅರ್ಪಿಸುವದು ಪಾಪಕ್ಕಾಗಿ ಒಂದು ಬೆಲೆಯನ್ನು ತೆತ್ತಬೇಕೆಂಬುದನ್ನು ತೋರ್ಪಡಿಸಿತು. ಅಂಥ ಸಮರ್ಪಣೆಗಳು ನಿಜವಾಗಿಯೂ ಪಾಪನಿವಾರಣೆಯನ್ನು ಮಾಡಲಿಲ್ಲ, ಆದರೆ ಅವುಗಳು ದೇವರ ಜನರ ಮೇಲೆ ಪ್ರಾಯಶ್ಚಿತ್ತದ ಅಗತ್ಯವಿದೆಯೆಂಬ ಭಾವನೆಯನ್ನು ಮೂಡಿಸಿದವು.

## ಪಾಪದಿಂದ ತಪ್ಪಿಸಿಕೊಳ್ಳಲು ದಾರಿಯಿಲ್ಲ (10:1, 3)

ವಾರ್ಷಿಕವಾಗಿ ಮಾಡುತ್ತಿದ್ದ ಯಜ್ಞಗಳು ಪಾಪವನ್ನು ನಿವಾರಿಸಲಿಲ್ಲ, ಆದ್ದರಿಂದ ಯಾವನೂ "ಪರಿಪೂರ್ಣನಾಗಿ" – ಈ ವಿಷಯದಲ್ಲಿ ಅದರರ್ಥವು "ಪಾಪದಿಂದ ಸಂಪೂರ್ಣ ಮುಕ್ತ" ನಾಗಿ – ಮಾಡಲ್ಪಡಲಿಲ್ಲ. ಯೆಹೂದ್ಯರು ವಾರ್ಷಿಕವಾಗಿ ಪಾಪದ ಸ್ಮರಣೆ ಮಾಡಿಕೊಳ್ಳುತ್ತಿದ್ದರು, ಅದು ದೋಷಪರಿಹಾರಕ ದಿನದ ಮೂಲಕ ಒತ್ತಿ ಹೇಳಲ್ಪಡುತ್ತಿತ್ತು (ವ. 3). "ಜ್ಞಾಪಕವಾಗುವದುಂಟು" ಎಂಬುದನ್ನು ಅನುವಾದಿಸಿರುವ ನಾಮಪದವು (ἀνάμνησις, *anamnēsis*) ಇಲ್ಲಿ ಮತ್ತು ಹೊಸ ಒಡಂಬಡಿಕೆಯಲ್ಲಿ ಕರ್ತನ ಭೋಜನದ ಕಥನಗಳಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ (ಲೂಕ 22:19; 1 ಕೊರಿಂಥ 11:24, 25). ಯೆಹೂದ್ಯರಿಗಾಗಿ ವಾರ್ಷಿಕ ದಿನವು ಪಾಪವನ್ನು ಜ್ಞಾಪಕಗೊಳಿಸುವದಾಗಿದ್ದರೆ, ಕ್ರೈಸ್ತರು ತನ್ನ ರಕ್ತದಿಂದ ಅವರ ಪಾಪಗಳಿಗೆ ನಿವಾರಣೆಯನ್ನು ಒದಗಿಸಿದಾತನನ್ನು ಪ್ರತಿ ವಾರವೂ ಜ್ಞಾಪಿಸಿಕೊಳ್ಳುತ್ತಾರೆ (ಮತ್ತಾಯ 26:28). ಯೇಸು ಮಾತ್ರವೇ ಪಾಪದ ವಿಷಯದಲ್ಲಿ ಪರಿಣಾಮಕಾರಿಯಾಗಿ ಕ್ರಮವನ್ನು ಕೈಕೊಂಡಿರುತ್ತಾನೆ.[82]

## ಹೋರಿಗಳ ಮತ್ತು ಹೋತಗಳ ರಕ್ತವು ರಕ್ಷಿಸುವದಕ್ಕೆ ಸಾಧ್ಯವಿಲ್ಲ (10:4)

ಕ್ರಿಸ್ತನ ರಕ್ತಕ್ಕೆ ಪರ್ಯಾಯ ಎಂಬುದು ಇಲ್ಲವೇ ಇಲ್ಲ. ಒಂದೋ, ನಾವು ಅದರಿಂದ ರಕ್ಷಿಸಲ್ಪಡುತ್ತೇವೆ, ಇಲ್ಲವೇ ನಾವು ರಕ್ಷಣೆಯನ್ನೇ ಹೊಂದುವದಿಲ್ಲ. ನಾವು ರಕ್ಷಣೆ ಹೊಂದುವದಿಲ್ಲವಾದರೆ, ಕ್ರೈಸ್ತತ್ವವು ಒಂದು ಬದುಕಬಲ್ಲ ಧರ್ಮವಲ್ಲ. ನಾವು ರಕ್ಷಿಸಲ್ಪಟ್ಟಿದ್ದರೆ, ಅದೊಂದೇ ಪರಲೋಕಕ್ಕೆ ಏಕಮಾತ್ರ ಮಾರ್ಗವಾಗಿರುತ್ತದೆ. ಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟರೆ, ಮಿಕ್ಕ ಎಲ್ಲಾ ಧರ್ಮಗಳು ಸಾಕಾದವುಗಳಾಗಿವೆ. ಆ ಘಟನೆಯು ನಮ್ಮ ನಂಬಿಕೆಗೆ ಬುನಾದಿ ಆಗಿರುತ್ತದೆ; ಅದು ಬಿದ್ದು ಹೋಗುವದಾದರೆ ಇನ್ನಾವದೂ

ಮಹತ್ವಪೂರ್ಣವಾಗಿರುವದಿಲ್ಲ. Raymond Brownನು ಅದನ್ನು ಈ ವಿಧವಾಗಿ ಹೇಳಿದನು:

> ನಮ್ಮ ಲೇಖಕನ ಮಾತನ್ನು ಬಳಸುವದಾದರೆ, ಹೋರಿ ಮತ್ತು ಹೋತಗಳ ರಕ್ತಕ್ಕೆ ಪಾಪವನ್ನು ನಿವಾರಿಸುವದು *ಅಸಾಧ್ಯ*ವಾಗಿರುತ್ತದೆ ಮತ್ತು ಮನುಷ್ಯನು ಇಸ್ಲಾಮಿನ ಐದು ಸ್ತಂಭಗಳ ಮೂಲಕ, ಅಥವಾ ಹಿಂದುತ್ವದ ಪರಿತ್ಯಾಗದ ನಿರ್ಧಾರಗಳಿಂದಾಗಿ, ಅಥವಾ ಬೌದ್ಧಮತದ ನೀತಿಗಳಿಂದಾಗಲಿ, ಅಥವಾ ಸಿಖ್ ಮತದ ಸ್ವರಕ್ಷಣೆಯ ನಮೂನೆಗಳಿಂದಾಗಲಿ ರಕ್ಷಣೆಯನ್ನು ಹೊಂದಿಕೊಳ್ಳುವದು ಅಷ್ಟೇ ಅಸಾಧ್ಯವಾಗಿರುತ್ತದೆ.[83]

ಕ್ರಿಸ್ತನ ಯಜ್ಞವು ಕೆಲವರನ್ನು ಮಾತ್ರ ವಿಮೋಚಿಸುವದು ಆದರೆ ಮಿಕ್ಕವರನ್ನಲ್ಲ ಎಂದು ಯೋಚಿಸುವದು ತಾರ್ಕಿಕವಾದದ್ದಲ್ಲ. ಮನುಷ್ಯನು ಒಂದು ತುರ್ತಾದ ಅಗತ್ಯತೆಯಲ್ಲಿದ್ದಾನೆ ಯಾಕೆಂದರೆ ಆತನು ಪಾಪದಿಂದ ದಂಡನೆಗೆ ಒಳಗಾಗಿದ್ದಾನೆ. ಯೇಸುವು *ಏಕಮಾತ್ರ* "ರಕ್ಷಕನು," ಆತನ ಹೆಸರೇ ಅದನ್ನು ಸೂಚಿಸುತ್ತದೆ. ಆತನು ತನ್ನನ್ನು ಕಾತರದಿಂದ ನಿರೀಕ್ಷಿಸಿಕೊಂಡಿರುವವರಿಗೆ ಅಂತಿಮವಾದ ರಕ್ಷಣೆಯನ್ನು ಒದಗಿಸುವದಕ್ಕೆ ಪುನಃ ಬರಲಿದ್ದಾನೆ (9:28).

## ಒಂದು ಸ್ವಯಂಪ್ರೇರಿತ ಸೈನ್ಯ (10:8-10)

ಅರಸನಾದ Jamesನ ಕಾಲದಲ್ಲಿ ಪ್ರಮುಖ ಮುಖಂಡನನ್ನು, ಯುದ್ಧದಲ್ಲಿ ಸೈನ್ಯವನ್ನು ಮುಂದಾಗಿ ನಡೆಸಿಕೊಂಡು ಹೋಗುತ್ತಿದ್ದವನನ್ನು ಸೂಚಿಸುವದಕ್ಕೆ "ನಾಯಕನು" (ಮುಖಂಡ; ಇಬ್ರಿಯ 2:10; KJV) ಎಂಬ ಪದವು ಬಳಸಲ್ಪಡುತ್ತಿತ್ತು. ಯೇಸು ನಮ್ಮ "ನಾಯಕನು" (ἀρχηγός, *archēgos*), "[ನಮ್ಮ] ರಕ್ಷಣೆಯ ಕರ್ತೃ." ಆತನು ತನ್ನ ಕೆಲಸವನ್ನು ಮಾಡುವಂತೆ ತನ್ನ "ಸೈನ್ಯ" ವನ್ನು ನಡಿಸುವದರಲ್ಲಿ ಎಲ್ಲಾ ಕಾರ್ಯಗಳಲ್ಲಿಯೂ ಮಾದರಿಯನ್ನು ತೋರಿಸಿದನು. ಆತನು ಸ್ವಯಂಪ್ರೇರಿತತನಕ್ಕೆ ಮಾದರಿಯನ್ನು ತೋರಿಸಿದನು. ಆತನು ವಿಶ್ವವು ಇದುವರೆಗೂ ಕಂಡಿರುವ ಅತ್ಯಂಥ ಮಹಾನ್ ಕೆಲಸವನ್ನು ವಹಿಸಿಕೊಳ್ಳುವದಕ್ಕೋಸ್ಕರ ಪರಲೋಕದ ತನ್ನೆಲ್ಲಾ ಮಹಿಮೆ, ಸನ್ಮಾನ, ಮತ್ತು ಐಶ್ವರ್ಯ ಹಾಗೂ ಅಧಿಕಾರವನ್ನು ಮನಃಪೂರ್ವಕವಾಗಿ ತ್ಯಾಗ ಮಾಡಿದನು. ಎರಡನೆಯ ಕೊರಿಂಥ 8:9 ಹೀಗೆ ಹೇಳುತ್ತದೆ, "ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮಗೆ ಗೊತ್ತಾಗಿದೆಯಲ್ಲಾ; ಆತನು ಐಶ್ವರ್ಯವಂತನಾಗಿದ್ದು ತಾನು ಬಡತನದಲ್ಲಿ ಸೇರುವದರಿಂದ ನೀವು ಐಶ್ವರ್ಯವಂತರಾಗಬೇಕೆಂದು ನಿಮಗೋಸ್ಕರ ಬಡವನಾದನು." ಆತನ ಐಶ್ವರ್ಯವು ಆತ್ಮೀಕವಾದದ್ದಾಗಿತ್ತು, ಅದೇ ರೀತಿಯಲ್ಲಿ ಆತನು ಸ್ವಯಂಪ್ರೇರಿತವಾಗಿ ಮಾಡಿದ ಸಮರ್ಪಣೆಯ ಮೂಲಕವಾಗಿ ಅದು ಈಗ ನಮ್ಮದಾಗಿರುತ್ತದೆ.

ಕ್ರೈಸ್ತರು ಸ್ವಯಂಪ್ರೇರಿತರಾಗಿ ಸೇವೆಯನ್ನು ಸಲ್ಲಿಸುವದನ್ನು ನಿರೀಕ್ಷಿಸಲಾಗಿರುತ್ತದೆ. ನಾವು ಅವಿಧೇಯರಾಗುವಾಗ ದೇವರು ನಮಗೆ ಸುಖವಿಲ್ಲದಂತೆ ಮಾಡಬಹುದು, ಆದರೆ ನಮಗೆ ಆಮೀಷವೊಡ್ಡುವದಿಲ್ಲ. ಇಷ್ಟವುಳ್ಳವನು ಬರಲಿ. ಪ್ರಕಟನೆ 22:17 ಹೀಗೆ ಹೇಳುತ್ತದೆ, "ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ." ಹಣದ ಲಾಭ ಗಳಿಸಬೇಕೆಂಬ ಯೋಚನೆಯೂ ಇಲ್ಲದೆ, ಪೌಲನು ಸುವಾರ್ತೆಯ ಸಾರೋಣವು ಅತಿ ವಿರಳವಾಗಿರುತ್ತಿದ್ದ ಮತ್ತು ಮುಂಚೆ ಅಲ್ಲಿಗೆ ಯಾವ ಅಪೊಸ್ತಲನು ಹೋಗಿರದ ದೇಶಗಳಿಗೆ ಪ್ರಯಾಣಿಸಿದನು. ತನಗೆ ಸಹೋದರರಿಂದ ಹಣದ ಸಹಾಯ ದೊರಕದಿದ್ದಾಗ, ತನ್ನ ಜೀವನೋಪಾಯಕ್ಕೆ ಸ್ವತಃ ದುಡಿದನು (ಫಿಲಿಪ್ಪಿ 4:10, 11, 16–19). ತೆಗೆದುಕೊಳ್ಳುವದಕ್ಕಿಂತ ಕೊಡುವದು ಉತ್ತಮ ಮತ್ತು ಅವಶ್ಯಕವಾದರೆ ಒಬ್ಬನು ತನ್ನ ಕೈಯಿಂದ ಕೆಲಸ ಮಾಡಿ ಪ್ರಯಾಸ ಪಡಬೇಕೆಂಬುದನ್ನು

ತೋರ್ಪಡಿಸಿದನು (ಅಪೊಸ್ತಲರ ಕೃತ್ಯಗಳು 20:33-35). ಕೆಲವು ಸಾರಿ ಕರ್ತನು ಆತನನ್ನು ಎಲ್ಲಿಗೆ ಹೋಗಬೇಕೆಂದು ನಿರ್ದೇಶಿಸಿದನು, ಆದರೆ ಬೇರೆ ಸಂದರ್ಭಗಳಲ್ಲಿ ಆತನು ಸ್ವತಃ ಕಾರ್ಯಪ್ರವೃತ್ತನಾಗಿ ಹೋಗುತ್ತಿದ್ದನು (ಅಪೊಸ್ತಲರ ಕೃತ್ಯಗಳು 15:36; 16:6-10). ಏನೇ ಬೆಲೆಯನ್ನು ತೆತ್ತಬೇಕಾದರೂ ಸರಿಯೇ ನಾಶನದಲ್ಲಿರುವವರನ್ನು ಗೆದ್ದುಕೊಳ್ಳುವದಕ್ಕೆ ಕಾತರದಿಂದ ಇದ್ದನು. ದಾವೀದನ ಪ್ರೇರಿತ ಮಾತುಗಳಲ್ಲಿ ಹೋಗಿ ಸೇವೆಯನ್ನು ಮಾಡುವದಕ್ಕೆ ಆ ಮನಸ್ಸಿರುವಿಕೆಯನ್ನು ಕುರಿತಾಗಿ ಹೇಳುವದು ಯೇಸುವಿನ ತಾತ್ಪರ್ಯವಾಗಿತ್ತು: "ಇಗೋ, ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ!" (ಕೀರ್ತನೆ 40:6-8).

## ಯೇಸು ಹಳೆಯ ಒಡಂಬಡಿಕೆಗೆ ಏನು ಮಾಡಿದನು (10:9)

"ತೆಗೆದು ಬಿಡುತ್ತಾನೆ" ಎಂಬ ಪದಗುಚ್ಛವು ಒಂದೇ ಗ್ರೀಕ್ ಪದವಾಗಿದ್ದು (ἀναιρέω, *anaireō*), ಅದು "ರದ್ದುಗೊಳಿಸು" ಅಥವಾ "ಹಿಂಸಾತ್ಮಕವಾಗಿ ಕೊಲ್ಲುವದು" ಎಂಬ ಅರ್ಥವನ್ನು ಸಹ ಕೊಡುತ್ತದೆ. ಬೇತ್ಲೆಹೇಮಿನಲ್ಲಿ ಕೂಸುಗಳನ್ನು ಸಂಹರಿಸುವ ವಿಷಯದಲ್ಲಿ (ಮತ್ತಾಯ 2:16), ಯೇಸುವಿಗೆ ಮರಣದಂಡನೆ ವಿಧಿಸುವ ವಿಷಯದಲ್ಲಿ (ಲೂಕ 23:32; ಅಪೊಸ್ತಲರ ಕೃತ್ಯಗಳು 10:39), ಮತ್ತು "ಕರ್ತನು ತನ್ನ ಬಾಯಿ ಉಸುರಿನಿಂದ ಕೊಲ್ಲುವ" ಮೂಲಕ "ಸಂಹರಿಸಲ್ಪಡುವ" ವ್ಯಕ್ತಿಯ ವಿಷಯದಲ್ಲಿ (2 ಥೆಸಲೋನಿಕ 2:8) ಸಹ ಅದೇ ಗ್ರೀಕ್ ಪದವು ಬಳಸಲ್ಪಟ್ಟಿದೆ.

ಯೇಸು ಲೇವಿಕ ಯಜ್ಞಗಳ ವ್ಯವಸ್ಥೆಯನ್ನು ಸಂಪೂರ್ಣವಾಗಿ ನೆರವೇರಿಸಿದನು ಮತ್ತು ಅದರ ಸ್ಥಾನದಲ್ಲಿ ತನ್ನ ಹೊಸ ಒಡಂಬಡಿಕೆಯನ್ನು ತಂದನು ಎಂಬ ಸತ್ಯಕ್ಕಿಂತ ಸ್ಪಷ್ಟವಾದದ್ದು ಬೇರೆ ಯಾವದೂ ಇರುವದಿಲ್ಲ. ದೇವಾಲಯವನ್ನು ಮರುನಿರ್ಮಾಣ ಮಾಡುವದಕ್ಕೆ ಹಳೆಯ ಒಡಂಬಡಿಕೆಯ ಯಜ್ಞಗಳ ವ್ಯವಸ್ಥೆಯನ್ನು ಪುನರ್ಸ್ಥಾಪಿಸುವಿಕೆಯು ಅಗತ್ಯವಿರುತ್ತದೆ. ಈ ವಾಕ್ಯಭಾಗವನ್ನು ಮಾತ್ರವೇ ದೃಷ್ಟಿಯಲ್ಲಿಟ್ಟುಕೊಂಡು ನೋಡುವದಾದರೆ, ಏಕೆ ಯಾವದೇ ವಿಶ್ವಾಸಿಯು ಯೆರೂಸಲೇಮಿನಲ್ಲಿ ಮತ್ತೊಂದು ದೇವಾಲಯವನ್ನು ನಿರ್ಮಿಸುವದಕ್ಕೆ ಬಯಸುವನು?

## ಶುದ್ಧೀಕರಣವು ಏನನ್ನು ಅನುಮತಿಸುತ್ತದೆ (10:10)

ಶುದ್ಧೀಕರಣವು ಇಲ್ಲದೆ, ಒಬ್ಬ ವ್ಯಕ್ತಿಯು ಕರ್ತನನ್ನು ಕಾಣಲಾರನು (ಇಬ್ರಿಯ 12:14), ಆದರೆ ಬಯಸಲ್ಪಟ್ಟ ಶುದ್ಧೀಕರಣ (ಅಥವಾ ಪವಿತ್ರತೆ) ಹೊಂದಿದವನಾಗಿ, ಒಬ್ಬನು ಸ್ವತಃ ದೇವರ ಸಿಂಹಾಸನದ ಬಳಿಗೆ ಹೋಗಬಲ್ಲನು. ಹಳೆಯ ಒಡಂಬಡಿಕೆಯು ಕೇವಲ ಆಚಾರಬದ್ಧವಾದ ಶುದ್ಧಗೊಳಿಸಿಕೊಳ್ಳುವಿಕೆಗೆ ಕರೆ ಕೊಟ್ಟಿತು, ಆದರೆ ಹೊಸ ಒಡಂಬಡಿಕೆಯ ಅಡಿಯಲ್ಲಿ ನಾವು ದೇವರ ಸೇವೆ ಮಾಡುವ ಹೊಸ ಸಮರ್ಪಣೆಯೊಂದಿಗೆ ಸಂಪೂರ್ಣ ಹಾಗೂ ಸಮಗ್ರ ಪವಿತ್ರಗೊಳಿಸಲ್ಪಡುವಿಕೆಯನ್ನು ಹೊಂದುತ್ತೇವೆ. ಶುದ್ಧೀಕರಣವನ್ನು ಪಡೆದುಕೊಂಡು ಅದನ್ನು ಕಾಪಾಡಿಕೊಂಡು ಹೋಗುವ ಗುರಿಯು ಪ್ರತಿಯೊಬ್ಬ ಕ್ರೈಸ್ತನ ಮುಖ್ಯ ಲಕ್ಷ್ಯವಾಗಿರಬೇಕು (2 ಕೊರಿಂಥ 6:14-7:1).

## ಪ್ರಸಂಗದೊಳಗಿನ ಒಂದು ಪ್ರಸಂಗ (10:1-18)

ಇಬ್ರಿಯರಿಗೆ ಪತ್ರಿಕೆಯ ಲೇಖಕನು ಮುಂಚೆ ಮುಂದಿಡಲ್ಪಟ್ಟ ಯೋಚನೆಗಳನ್ನು 10:1-18ರಲ್ಲಿ ಪುನಃ ಅವಲೋಕಿಸುತ್ತಿದ್ದಾನೆ ಮತ್ತು ಪುನಃ ಬಳಸುತ್ತಿದ್ದಾನೆ, ಆದರೆ ಇದು ಉಪದೇಶದ ವಿಧಾನದ ಭಾಗವಾಗಿರುವದಿಲ್ಲವೋ? ಕಲಿಸಲ್ಪಟ್ಟಿರುವದರ ಒಂದು ಸಾರಾಂಶವನ್ನು ತಿಳಿಸುವದು ಯಾವಾಗಲೂ ಸಹಾಯಕರವಾಗಿರಬಲ್ಲದು, ಅನ್ವಯಿಕೆಯನ್ನು ತಿಳಿಸುವದಕ್ಕೆ

ಮುಂಚೆ ಸಹ ಅದು ಸಹಾಯಕರವಾದದ್ದು. ಅದನ್ನೇ ಲೇಖಕನು ಈ ವಚನಗಳಲ್ಲಿ ಮಾಡಿದನು.

ಈಗಾಗಲೇ ಈ ಪತ್ರಿಕೆಯಲ್ಲಿ ಆಗಾಗ ಬುದ್ಧಿವಾದಗಳು ಹೇಳಲ್ಪಟ್ಟಿದ್ದಾಗ್ಯೂ (2:1-3; 3:12, 13; 5:11-14; 6:11, 12), 18ನೇ ವಚನದ ಬಳಿಕ ಬುದ್ಧಿವಾದಗಳು ಆರಂಭಗೊಳ್ಳುತ್ತವೆ. ಒಂದು ಪಾಠದ ವಿವರಣಾತ್ಮಕ ವಿಭಾಗದಲ್ಲಿ ಸಹ ಆಗಾಗ ಒಂದು ಬುದ್ಧಿವಾದವನ್ನು ಕೊಡುವದು ಮುಕ್ತಾಯದಲ್ಲಿ ಒಂದು ಅಂತಿಮ ನಾಟಕೀಯ ಹಾಗೂ ಭಾವನಾತ್ಮಕ ಮನವಿಗಾಗಿ ಸಿದ್ಧಗೊಳಿಸುವದಕ್ಕಾಗಿ ಸಹಾಯಕರವಾಗಿರಬಲ್ಲದು. ಒಂದು ಪ್ರಸಂಗವನ್ನು ಮುಕ್ತಾಯಗೊಳಿಸುವದು ಅದಷ್ಟೇ ಆಗಿರತಕ್ಕದ್ದು! ಸರಿಯಾಗಿ ಇದನ್ನೇ ಲೇಖಕನು ಮಾಡಿದನು.

## ಆಸೀನನಾಗಿರುವನು, ನಿಂತಿರುವದಿಲ್ಲ (10:11, 12)

ದೈವಿಕ ಅನುಮತಿಯಿಲ್ಲದೆ ಯಾವನೂ ದೇವತ್ವದ ಸನ್ನಿಧಿಯಲ್ಲಿ ಕೂತುಕೊಳ್ಳಲಿಲ್ಲ. ದೇವದರ್ಶನ ಗುಡಾರ ಅಥವಾ ದೇವಾಲಯದಲ್ಲಿ ಸೇವೆ ಮಾಡುವ ಯಾಜಕರು ಕೂತುಕೊಳ್ಳುವದಕ್ಕಾಗಲಿಲ್ಲ; ಅವರು ತಮ್ಮ ಎಲ್ಲಾ ಕೆಲಸಗಳನ್ನು ನಿಂತುಕೊಂಡು ಮಾಡಬೇಕಾಗಿತ್ತು. ಯಾವಾಗಲೂ ನಿಂತುಕೊಂಡಿರುವದು ಅವರ ಕೆಲವು ಪೂರ್ತಿಗೊಳ್ಳಲಿಲ್ಲ ಎಂಬುದನ್ನು ತೋರಿಸುತ್ತದೆ ಮತ್ತು ಅವರು ಪ್ರಯಾಸಗಳ ಮೂಲಕ ಪಾಪಗಳ ಕ್ಷಮಾಪಣೆಯನ್ನು ಸಂಪಾದಿಸಿಕೊಳ್ಳಲಾಗಲಿಲ್ಲ ಎಂಬುದನ್ನು ಸೂಚಿಸುತ್ತದೆ. ಈ ಯಾಜಕರಂತಲ್ಲದೆ, ಕ್ರಿಸ್ತನು ಪರಲೋಕದಲ್ಲಿ ದೇವರ ಬಲಗಡೆಯಲ್ಲಿ ಕೂತುಕೊಳ್ಳುವದಕ್ಕೆ ಶಕ್ತನಾದನು (1:3; 8:1; 10:11, 12; 12:2). ಆತನು ಪವಿತ್ರ ಮಾಡಲ್ಪಟ್ಟವರನ್ನೆಲ್ಲಾ ಪೂರ್ಣವಾಗಿ ಸಿದ್ಧಿಗೆ ತಂದಿರುತ್ತಾನೆ (ವ. 14); ಆ ಸಾಧನೆಯನ್ನು ಮಾಡಿದವನಾಗಿರುವಾಗ, ನಮ್ಮ ವಿಮೋಚನೆಗೋಸ್ಕರ ನಿರಂತರವಾಗಿ ಕೆಲಸ ಮಾಡುವ ಅಗತ್ಯವಿರುವದಿಲ್ಲ.

## ಈಗ ನ್ಯಾಯತೀರ್ಪುಗಳೋ? (10:13)

ಪಾಪದ ಫಲಿತವಾಗಿ ನಮ್ಮ ಮೇಲೆ ಉಪದ್ರವವನ್ನು ಬರಮಾಡುವದಕ್ಕಾಗಿ ದೇವರು ನಮ್ಮ ಮೇಲೆ ದಂಡನೆಗಳನ್ನು ಅನುಮತಿಸಬಹುದು. ಇದು ನಮ್ಮ ಹೃದಯಗಳಲ್ಲಿ ಮೃದುತ್ವವನ್ನುಂಟು ಮಾಡತಕ್ಕದ್ದು, ನಮ್ಮನ್ನು ಆತನ ಚಿತ್ತಕ್ಕೆ ಹೆಚ್ಚು ಅಧೀನರಾಗಿರುವಂತೆ ಮಾಡಬೇಕು (ನೋಡಿರಿ 12:4-11). ನಾವು ಅಂತಿಮ ನ್ಯಾಯತೀರ್ಪಿನ ದಿನವನ್ನು ಮರೆಯುವಂತೆ ಮಾಡುವ ಹಾಗೆ ಈಗಿನ ಕಷ್ಟಾನುಭವಗಳಿಗೆ — ಅಥವಾ ಕೆಲವು ದೈವಶಾಸ್ತ್ರಜ್ಞರಿಗೆ — ಅವಕಾಶವನ್ನು ಕೊಡಬಾರದು. ನ್ಯಾಯತೀರ್ಪು ದುಷ್ಕೃತ್ಯಗಳನ್ನು ನೆನಪಿಗೆ ತಂದುಕೊಳ್ಳುವದಾಗಿರುವದಿಲ್ಲ, ಯಾಕೆಂದರೆ ಕ್ರಿಸ್ತನಲ್ಲಿ ಅವುಗಳು ಕ್ಷಮಿಸಲ್ಪಟ್ಟಿರುತ್ತವೆ. ದೇವರ ವಿಷಯದಲ್ಲಾದರೋ, ಕ್ಷಮಿಸಲ್ಪಟ್ಟಿರುವಂಥದ್ದು ಮರೆತು ಸಹ ಹೋಗಿರುತ್ತದೆ.

ಲೋಕವು ಶಿಲುಬೆಯ ಮೇಲಿನ ಕ್ರಿಸ್ತನ ಮರಣದಿಂದ ದಂಡನೆಯ ತೀರ್ಪಿಗೊಳಗಾಗಿದೆ, ಆದರೆ ಆ ದಂಡನೆಯ ತೀರ್ಪು ಒಂದು ಅಂತಿಮ ನ್ಯಾಯತೀರ್ಪಿನಿಂದ ದೂರವಿರುತ್ತದೆ. ಕ್ರಿಸ್ತನ ಮರಣದ ಮೂಲಕ, ಸೈತಾನನು ಈಗಾಗಲೇ ನ್ಯಾಯತೀರ್ಪಿಗೊಳಗಾಗಿದ್ದಾನೆ (ಯೋಹಾನ 12:23-32); ಆದಾಗ್ಯೂ, ಯಾವ ಕಾರಣಕ್ಕೆ ಏನೋ, ಆತನಿಗೆ ಈಗಲೂ ದೇವರ ಜನರನ್ನು ಶೋಧಿಸುವದಕ್ಕೆ ಮತ್ತು ಉಪದ್ರವಪಡಿಸುವದಕ್ಕೆ ಅನುಮತಿ ಕೊಡಲಾಗಿರುತ್ತದೆ. ಬಹುಶಃ ಆತನು ಬೆಂಕಿಯ ಕರೆಯಲ್ಲಿ ಅಂತಿಮವಾಗಿ ನಾಶಗೊಳ್ಳುವ ತನಕ ನಮ್ಮನ್ನು ಪರೀಕ್ಷಿಸುವಂತೆ ದೇವರು ಆತನಿಗೆ ಅನುಮತಿಯನ್ನು ನೀಡಿರಬಹುದು (ಪ್ರಕಟನೆ 20:10).

## ಪವಿತ್ರಾತ್ಮನು ಹೇಗೆ ಈಗಲೂ ನಮಗೆ ಸಾಕ್ಷಿಯನ್ನು ಕೊಡುತ್ತಾನೆ (10:15)

ಪವಿತ್ರಾತ್ಮನು ದೇವರ ಲಿಖಿತ ವಾಕ್ಯದ ಸಾಕ್ಷಿಯ ಮೂಲಕವಾಗಿ "ಸಾಕ್ಷಿಕೊಡುವನು," ಅಥವಾ ಒಬ್ಬ "ಸಾಕ್ಷಿಯಾಗಿ" ಕಾರ್ಯ ಮಾಡುವನು (KJV). ಆತನ ವಾಕ್ಯಗಳು ಮತ್ತು ವಾಗ್ದಾನಗಳು ಕ್ರೈಸ್ತರಿಗೆ ಮರುನಿಶ್ಚಯವನ್ನು ಒದಗಿಸುತ್ತವೆ. ಬೈಬಲಿನಲ್ಲಿ ನಮಗೆ ಪವಿತ್ರಾತ್ಮನಿಂದ ಕೊಡಲ್ಪಡುವ ಎಲ್ಲಾ ಸಾಕ್ಷಿಯ ಕೊಡುವಾಗ, ದೇವರು ನಿರಂತವಾಗಿ ನಮಗೆ ನೇರವಾಗಿ ಸಾಕ್ಷಿ ಕೊಡಲಿಯೆಂದು ಬೇಡುವದು ಎಷ್ಟು ದುರಹಂಕಾರದಿಂದ ಕೂಡಿದ್ದು! ಅದು ಹುಚ್ಚು ಧೈರ್ಯದ ಪರಾಕಾಷ್ಠೆಯಾಗಿರುತ್ತದೆ ಮತ್ತು ಬೈಬಲ್ ಪ್ರಕಾರವಾಗಿ ನಿರಾಧಾರವಾಗಿರುತ್ತದೆ. ಇಂದು ದೇವರಿಂದ "ಸೂಚನೆಗಳನ್ನು" ಪಡೆಯುವದು ಅನಾವಶ್ಯಕವಾಗಿದೆ. ನಮಗೆ "ಜೀವಕ್ಕೂ ಭಕ್ತಿಗೂ" ಬೇಕಾದದ್ದೆಲ್ಲವೂ ಸಿದ್ಧವಾಗಿ ಶಾಸ್ತ್ರಗಳಲ್ಲಿ ಸಿಕ್ಕುತ್ತದೆ (2 ಪೇತ್ರ 1:3).

"*ಪವಿತ್ರಾತ್ಮನು ಸಹ ನಮಗೆ ಸಾಕ್ಷಿಕೊಡುವವನಾಗಿ*ದ್ದಾನೆ ಎಂಬ ಮಾತನ್ನು ನಮ್ಮ ಕಡೆಗೆ ಪ್ರೇರಿಸಲ್ಪಟ್ಟದ್ದು ಎಂಬದರ ಬದಲಾಗಿ, ನಮಗೆ ಸಂಬಂಧ ಪಟ್ಟಂತೆ ಎಂಬ ಅರ್ಥ ಬರುವಂತೆ ಬೇರೆಯಾಗಿ ಅರ್ಥಮಾಡಿಕೊಳ್ಳಲ್ಪಡಬಹುದು."[84] ಒಬ್ಬನು ಬೈಬಲಿನಲ್ಲಿ ಓದುವಂಥದ್ದು ಪವಿತ್ರಾತ್ಮನು ನಮ್ಮೊಂದಿಗೆ ಮಾತಾಡುವದಾಗಿದೆ, ಮತ್ತು ದೇವರು ಮಾತಾಡಿರುವಂತದ್ದನ್ನು ಪುನರಾವರ್ತಿಸುವ ಅಗತ್ಯವಿಲ್ಲ.

ಒಬ್ಬನು ಪವಿತ್ರಾತ್ಮನ ನಿಜವಾದ ಸಾಕ್ಷಿಯನ್ನು ಕೇಳಿಸಿಕೊಳ್ಳಲಿಚ್ಛಿಸುವದಾದರೆ, ಮತ್ತು ತನ್ನ ಸ್ವಂತ ಆಂತರ್ಯದ ಯೋಚನೆಗಳು ಆತನನ್ನು ವಂಚಿಸುವದನ್ನು ಬಯಸದಿರುವದಾದರೆ, ಆತನು ಶಾಸ್ತ್ರಗಳಲ್ಲಿರುವ ಪವಿತ್ರಾತ್ಮನ ಮಾತುಗಳನ್ನು ಆಲಿಸತಕ್ಕದ್ದು.

ಉಲ್ಲೇಖಿಸಲ್ಪಟ್ಟಿರುವ ಪ್ರವಾದನೆಯಲ್ಲಿ ಪ್ರವಾದಿಯಾದ ಯೆರೆಮೀಯನನ್ನು ಪವಿತ್ರಾತ್ಮನು ಪ್ರೇರಿಸಿದ್ದನೆಂಬುದರಲ್ಲಿ, ಅಥವಾ ದೇವರು ಇಡೀ ಹಳೆಯ ಒಡಂಬಡಿಕೆಯನ್ನು ಕೊಟ್ಟನು ಎಂಬುದರಲ್ಲಿ ಇಬ್ರಿಯರಿಗೆ ಪತ್ರಿಕೆಯ ಲೇಖಕನಿಗೆ ಯಾವ ಸಂಶಯವೂ ಇರಲಿಲ್ಲ. ಇಬ್ರಿಯ 10:15-17ರ ವಾಕ್ಯಭಾಗವು ಯೆರೆಮೀಯ 31:33, 34ರಿಂದ ಉಲ್ಲೇಖಿಸಲ್ಪಟ್ಟಿರುತ್ತದೆ. 1 ಕೊರಿಂಥ 14:37ರ ಪ್ರಕಾರವಾಗಿ ತನ್ನ ಸ್ವಂತ ಮಾತುಗಳು ಅದೇ ರೀತಿಯ ಪ್ರೇರಣೆಯ ಮೂಲಕ ಒದಗಿಸಲ್ಪಟ್ಟವುಗಳೆಂದು ಪೌಲನು ನಂಬಿದನು. ಆತನ ಬರಹಗಳು ಸಹ "ಶಾಸ್ತ್ರಗಳು" ಆಗಿದ್ದವು (2 ಪೇತ್ರ 3:16). "ಶಾಸ್ತ್ರಗಳೆಲ್ಲಾ" ದೈವಪ್ರೇರಿತವಾಗಿವೆ — ಹಳೆಯ ಮತ್ತು ಹೊಸ ಒಡಂಬಡಿಕೆಗಳೆರಡು ಸಹ (2 ತಿಮೊಥೆ 3:16).

## ಪಾಪಗಳು ಇನ್ನೆಂದಿಗೂ ನೆನಪಿಗೆ ತರಲ್ಪಡುವದಿಲ್ಲ (10:18)

"ಪಾಪದ ಪರಿಣಾಮಗಳು ಮೂರು ವಿಧವಾಗಿವೆ: ಕ್ಷಮಾಪಣೆಯ ಅಗತ್ಯವಿರುವ ಸಾಲ, ವಿಮೋಚನೆಯ ಅಗತ್ಯವಿರುವ ದಾಸತ್ವ, ಸಂಧಾನದ ಅಗತ್ಯವಿರುವ ಬೇರ್ಪಟ್ಟಿರುವಿಕೆ."[85] ಪಾಪವು ಭಯಂಕರವಾದದ್ದು. ಅದು ನಮ್ಮನ್ನು ದೇವರ ಹಾಗೂ ಬೇರೆಯವರ ಸಾಲದಲ್ಲಿಡುತ್ತದೆ, ಅದು ನಮ್ಮ ವ್ಯಸನಕ್ಕೆ ಅಥವಾ ಚಟಕ್ಕೆ ದಾಸನನ್ನಾಗಿ ಮಾಡುತ್ತದೆ, ಮತ್ತು ಅದು ಕ್ರಮೇಣದಲ್ಲಿ ನಮ್ಮನ್ನು ಪ್ರಿಯರಿಂದ ಮತ್ತು ನಾವು ಸರ್ವೋಚ್ಚವಾಗಿ ಪ್ರೀತಿಸಬೇಕಾಗಿರುವವರಿಂದ ನಮ್ಮನ್ನು ದೂರ ಮಾಡುತ್ತದೆ. ಪಾಪವು ಉಂಟು ಮಾಡುವ ಬೇರ್ಪಡುವಿಕೆಯು ಈ ಜೀವನದಲ್ಲಿ ಆರಂಭಗೊಳ್ಳುತ್ತದೆ ಮತ್ತು ನಿತ್ಯತ್ವದುದ್ದಕ್ಕೂ ಮುಂದುವರೆಯುತ್ತದೆ.

ಹಳೆಯ ಯಜ್ಞಗಳು "ಎಂದಿಗೂ ಪಾಪವನ್ನು ನಿವಾರಣೆ ಮಾಡಿಸಲಾರವು" (ವ. 11) ಆದರೆ ಈಗ ದೇವರು ಇನ್ನು ಮೇಲೆ ನಮ್ಮ ಪಾಪಗಳನ್ನು ಎಂದಿಗೂ ನೆನಪಿಗೆ ತಂದುಕೊಳ್ಳುವದಿಲ್ಲ.

ಪ್ರಾಚೀನ ಕಾಲಗಳಲ್ಲಿ ಒಬ್ಬ ನ್ಯಾಯಾಲಯದ ಮಂತ್ರಿಯು ಅರಸನ ಸಮ್ಮುಖದಲ್ಲಿ ನಡೆಯುತ್ತಿದ್ದ ಎಲ್ಲಾ ಕಾರ್ಯಗಳ ದಾಖಲೆಗಳನ್ನು ಅಥವಾ ಟಿಪ್ಪಣಿಗಳನ್ನು ಬರೆದಿಡುತ್ತಿದ್ದನು. ಆತನನ್ನು "ನೆನಪಿಗೆ ತಂದುಕೊಡುವವನು" ಎಂದು ಕರೆಯುತ್ತಿದ್ದರು. ಆತನ ಕೆಲಸವು ಹಿಂದಿನ ತೀರ್ಮಾನಗಳು ಅಥವಾ ಕ್ರಿಯೆಗಳ ಬಗ್ಗೆ ಅರಸನ ಜ್ಞಾಪಕಕ್ಕೆ ತರುವದಾಗಿತ್ತು. ನಮ್ಮ ದೇವರಿಗೆ ಅಂತಹ ಯಾವ ಸೇವಕನೂ ಇಲ್ಲ; ಬದಲಾಗಿ, ಆತನ ಪಕ್ಕದಲ್ಲಿ ಆತನ ಕುಮಾರನು ಕೂತುಕೊಂಡಿರುತ್ತಾನೆ (ಬಹುಶಃ ಸಾಂಕೇತಿಕವಾಗಿ), ಆತನು ತಂದೆಗೆ ತನ್ನ ಯಜ್ಞವು ಆತನ ಪ್ರತಿಯೊಬ್ಬ ಮಗುವಿಗಾಗಿ ಕ್ಷಮಾಪಣೆಯನ್ನು ಒದಗಿಸಿರುತ್ತದೆಂಬುದನ್ನು ನೆನಪಿಗೆ ತರಬಲ್ಲವನಾಗಿದ್ದಾನೆ.

## ನಂಬಿಕೆಯ ಪೂರ್ಣ ನಿಶ್ಚಯತ್ವ (10:22)

ನಾವು ನಮ್ಮ ರಕ್ಷಕನಿಗೆ ಪೂರ್ಣ ಹೃದಯದ ನಿಷ್ಠೆಯನ್ನು ತೋರಬಲ್ಲೆವು. ಇಬ್ರಿಯರಿಗೆ ಪತ್ರಿಕೆಯ ಸಿದ್ಧಾಂತಿಕ ಉಪದೇಶಗಳನ್ನು ನಾವು ಪೂರ್ಣವಾಗಿ ನಂಬುವದಾದರೆ ನಂಬಿಕೆಯ ಪೂರ್ಣ ನಿಶ್ಚಯತ್ವವು ನಮ್ಮದಾಗಬಲ್ಲದು. ನಿಜವಾದ ಬೈಬಲಾಧಾರಿತ ಸಿದ್ಧಾಂತದ ಮೇಲೆ ನೆಲೆಯಾಗಿರದಂತಹ ನಂಬಿಕೆಯು ಅಜ್ಞಾನದ ಮೇಲೆ ಮಾತ್ರವೇ ಆಧಾರಗೊಂಡಿರುವ ಮೂಢನಂಬಿಕೆಯಾಗಿರುತ್ತದೆ. ನಾವು ಬಿಡುಗಡೆಗೊಳ್ಳಬೇಕಾದರೆ ಸತ್ಯವನ್ನು ತಿಳಿದುಕೊಳ್ಳತಕ್ಕದ್ದು (ಯೋಹಾನ 8:31, 32). ಕ್ರಿಸ್ತನಿಗೆ ವಿಧೇಯನಾಗುವದಕ್ಕೆ ತಾನೇನು ಮಾಡಬೇಕೆಂಬುದನ್ನು, ಅಥವಾ ಏಕೆ ಅದನ್ನು ಮಾಡುತ್ತಿದ್ದಾನೆ ಎಂಬುದನ್ನು ಒಬ್ಬನು ಅರ್ಥಮಾಡಿಕೊಳ್ಳುವದಿಲ್ಲವಾದರೆ, ನಾವು ಹೇಗೆ "ನಂಬಿಕೆಯ ಪೂರ್ಣ ನಿಶ್ಚಯತ್ವವನ್ನು" ಹೊಂದಿಕೊಳ್ಳುವದಕ್ಕೆ ಸಾಧ್ಯ? ನಾವು ಪಾಪದಿಂದ ಬಿಡುಗಡೆಯನ್ನು ಹೊಂದಿಕೊಳ್ಳುವದಕ್ಕೆ "ಕಲಿಸಲ್ಪಟ್ಟ ಬೋಧನೆಗೆ" ವಿಧೇಯರಾಗತಕ್ಕದ್ದು (ರೋಮಾ 6:17, 18).[86] ಖಂಡಿತವಾಗಿಯೂ, ಇಬ್ರಿಯ ಸಹೋದರರು ಸಂದೇಶವನ್ನು ಓದುವ ಅಥವಾ ಕೇಳಿಸಿಕೊಳ್ಳುವ ಮೂಲಕ ನಂಬಿಕೆಯಲ್ಲಿ ಬೆಳೆಯುತ್ತಿದ್ದ ರೀತಿಯಲ್ಲಿಯೇ, ಒಬ್ಬನು ಈ ಪ್ರಾಥಮಿಕ ವಿಧೇಯತೆಯ ಬಳಿಕ ನಂಬಿಕೆಯಲ್ಲಿ ಬೆಳೆಯಬಹುದು. ದೊಡ್ಡದಾದ ನಂಬಿಕೆಗೆ ಯಾವಾಗಲೂ ಅವಕಾಶವಿರುತ್ತದೆ; ಆದರೆ ಅದು ಶಾಸ್ತ್ರಗಳಲ್ಲಿನ ದೇವರ ತರ್ಕ ಮತ್ತು ಪ್ರಕಟನೆಯ ಮೇಲೆ ಆಧಾರಗೊಂಡಿರುವ ಹೊರತು ಅದು "ಪೂರ್ಣ ನಿಶ್ಚಯತ್ವವುಳ್ಳ" ದ್ದಾಗಲಾರದು.

ನಾವು ದೇವರ "ಬಳಿಗೆ ಬರಬೇಕು." ಈ ನಂಬಿಕೆಯ ನಿಶ್ಚಯತ್ವವು ಸರಿಯಾದ ಮನೋಭಾವದೊಂದಿಗೆ ಸಮೀಪಿಸುವಂತೆ ಶಕ್ತಗೊಳಿಸುತ್ತದೆ, ಅದರಲ್ಲಿ, ಮೊದಲನೆಯದಾಗಿ, ಒಂದು "ಯಥಾರ್ಥ ಹೃದಯ" – "ಕಪಟವಿಲ್ಲದ" ಹೃದಯ – ಸೇರಿರುತ್ತದೆ. ಪೌಲನು ದೊಂಬಿಯೆದ್ದ ಜನಸಮೂಹದ ಮುಂದೆ ಧೈರ್ಯವಾಗಿ ನಿಲ್ಲುವದಕ್ಕೆ ಶಕ್ತನಾಗಿದ್ದನು ಯಾಕೆಂದರೆ ತನ್ನ ಹೃದಯವು ನಿರ್ಮಲವಾಗಿದೆ ಎಂಬುದನ್ನು ಆತನು ಬಲ್ಲವನಾಗಿದ್ದನು (ಅಪೊಸ್ತಲರ ಕೃತ್ಯಗಳು 23:1). ಎರಡನೆಯದಾಗಿ, ನಂಬಿಕೆಯಲ್ಲಿ ದೇವರ ಬಳಿಗೆ ಬರುವದರಲ್ಲಿ ನಂಬುವಿಕೆಯು ಸೇರಿರುತ್ತದೆ. ಒಬ್ಬ ವ್ಯಕ್ತಿಯು ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದಕ್ಕೆ ಸಾಧ್ಯವಿಲ್ಲ (ಇಬ್ರಿಯ 11:6). ಮೂರನೆಯದಾಗಿ, ಅದಕ್ಕೆ "ಅಪರಾಧವಿಲ್ಲದಿರುವಿಕೆ" ಅಗತ್ಯವಿರುತ್ತದೆ. ನಮ್ಮ ಅಪರಾಧದಿಂದ ತುಂಬಿದ ಹೃದಯಗಳು ಯೇಸುವಿನ ರಕ್ತದ ಪ್ರೋಕ್ಷಣೆಯ ಮೂಲಕವಾಗಿ ಶುದ್ಧಮಾಡಲ್ಪಟ್ಟಿರುವದರಿಂದ ಇದು ಸಾಧ್ಯವಿರುತ್ತದೆ (ವ. 22). ನಾಲ್ಕನೆಯದಾಗಿ, ನೀರಿನ ದೀಕ್ಷಾಸ್ನಾನದಲ್ಲಿ ವ್ಯಕ್ತಪಡಿಸಲ್ಪಟ್ಟಿರುವ ಪ್ರಕಾರವಾಗಿ ನಾವು ಯೇಸುವಿನಲ್ಲಿಟ್ಟಿರುವ ನಂಬಿಕೆಯನ್ನು ಸಾರ್ವಜನಿಕವಾಗಿ ಪ್ರತಿಜ್ಞೆ ಮಾಡುವ ಮೂಲಕ ತೋರ್ಪಡಿಸಿದವರಾಗಿರಬೇಕು,

ಅದು "ಸ್ನಾನ ಮಾಡಲ್ಪಡುವ" ಹಂತವಾಗಿದೆ (ನೋಡಿರಿ ಅಪೊಸ್ತಲರ ಕೃತ್ಯಗಳು 22:16; 1 ಕೊರಿಂಥ 6:11; ಎಫೆಸ 5:26; ತೀತನಿಗೆ 3:5).

### ತೊಳೆದುಕೊಂಡ ದೇಹಗಳು (10:22)

ಹಳೆಯ ಒಡಂಬಡಿಕೆಯಲ್ಲಿ, ಶರೀರವನ್ನು ಶುದ್ಧಮಾಡುವದಕ್ಕೆ ನೀರು ಬಳಸಲ್ಪಡುತ್ತಿತ್ತು; ಹೊಸ ಒಡಂಬಡಿಕೆಯಲ್ಲಿ, ಅದು ಆತ್ಮವನ್ನು ಅದರ ಪಾಪದಿಂದ ಶುದ್ಧಮಾಡುವದಕ್ಕೆ ಬಳಸಲ್ಪಡುತ್ತದೆ (ಅಪೊಸ್ತಲರ ಕೃತ್ಯಗಳು 22:16; 1 ಪೇತ್ರ 3:20, 21). ವಾಸ್ತವಿಕವಾಗಿ ಪ್ರತಿಯೊಬ್ಬ ವ್ಯಾಖ್ಯಾನಕಾರನು ಸಹ ಇಲ್ಲಿ ಅರ್ಥವು "ನೀರು" ಎಂದಾಗಿರುತ್ತದೆಂಬುದನ್ನು ಒಪ್ಪಿಕೊಳ್ಳುತ್ತಾನೆ. ದೀಕ್ಷಾಸ್ನಾನಕ್ಕೆ ಅಧೀನ ಪಡಿಸಿಕೊಳ್ಳುವ ಕ್ರಿಯೆಯಲ್ಲಿ, ಒಬ್ಬನು ತನ್ನ ದೇಹವು ಕ್ರಿಸ್ತನಿಗೆ ಒಟ್ಟಾರೆ ಹಾಗೂ ಸಂಪೂರ್ಣ ಅಧೀನತೆಯನ್ನು ತೋರ್ಪಡಿಸುವಂತೆ ಅನುಮತಿಸುತ್ತಾನೆ. ತನ್ನನ್ನು ಮುಳುಗಿಸುವಂತೆ ಮತ್ತೊಬ್ಬನಿಗೆ ಅವಕಾಶ ಕೊಡುವದಕ್ಕೆ ಮನಸ್ಸುಳ್ಳವನಾಗಿರುವದು ಆತನು ಕ್ರಿಸ್ತನಿಗೆ ವಿಧೇಯನಾಗುವದಕ್ಕೆ ಪೂರ್ಣ ಮನಸ್ಸುಳ್ಳವನಾಗಿದ್ದಾನೆಂಬುದನ್ನು ಸೂಚಿಸುತ್ತದೆ. ದೀಕ್ಷಾಸ್ನಾನವು ಒಂದು ಸಾಂಕೇತಿಕ ಕ್ರಿಯೆಗಿಂತಲೂ ಹೆಚ್ಚಿನದ್ದಾಗಿದೆ: ಅದು ಸ್ವತಃ ನಂಬಿಕೆಯಿಂದ ನಾವು ಕ್ರಿಸ್ತನನ್ನು ಸೇರಿಕೊಳ್ಳುವ ಹಂತವೇ ಆಗಿರುತ್ತದೆ (ರೋಮಾ 6:3, 4). ನಾವು "ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವಾಗ [ಅನಿಶ್ಚಿತ ಭೂತಕಾಲರೂಪ – ಒಂದು ಪೂರ್ಣಗೊಂಡಿರುವ ಕಾರ್ಯ]" (ಗಲಾತ್ಯ 3:26, 27).

ಹೊಸ ಒಡಂಬಡಿಕೆಯ ದೀಕ್ಷಾಸ್ನಾನವು ಹಳೆಯ ಒಡಂಬಡಿಕೆಯ ಶಾರೀರಿಕ ಶುದ್ಧೀಕರಣದಂತೆಯೇ ಆಗಿರುತ್ತದೆಂದು ಯಾವನಾದರೂ ಯೋಚಿಸದಂತೆ ತಡೆಯುವದಕ್ಕೆ, ಅದು ಹಾಗಿರುವದಿಲ್ಲ ಎಂಬುದಾಗಿ ಪೇತ್ರನು ನಿರ್ದಿಷ್ಟವಾಗಿ ಹೇಳುತ್ತಾನೆ (1 ಪೇತ್ರ 3:21). ನೋಹನು ಮತ್ತು ಆತನ ಕುಟುಂಬದವರು ಹೇಗೆ "ನೀರಿನ ಮೂಲಕ ರಕ್ಷಣೆಹೊಂದಿದರೋ" (3:20; KJV), ನಮ್ಮ ರಕ್ಷಣೆಯು ಅದೇ ದಾರಿಯ ಮೂಲಕ ಸಂಪಾದಿಸಿಕೊಳ್ಳಲ್ಪಡುತ್ತದೆ ಎಂಬದಾಗಿ ಆತನು ಘೋಷಿಸಿದನು. ದೀಕ್ಷಾಸ್ನಾನವು ನೋಹ ಮತ್ತು ಆತನ ಕುಟುಂಬದರ ನೀರಿನ ಮೂಲಕವಾದ ರಕ್ಷಣೆಯ "ಪ್ರತಿರೂಪ," ಅಥವಾ "ಪ್ರತಿಮಾದರಿ" (ἀντίτυπος, *antitupos*) ಎಂದು ಕರೆಯಲ್ಪಟ್ಟಿದೆ. NASBಯು "ನಾವು ನೀರಿನ ಮೂಲಕವಾಗಿ ಸುರಕ್ಷತೆಗೆ ಕರೆ ತರಲ್ಪಟ್ಟೆವು" ಎಂದು ಅರ್ಥನಿರೂಪಣೆಯನ್ನು ಕೊಡುವ ಮೂಲಕ ಈ ಭಾವನೆಯನ್ನು ಮೃದುಗೊಳಿಸುತ್ತದೆ (3:20). ಹೇಗೂ, ಅದು 21ನೇ ವಚನಕ್ಕೆ ಈ ಭಾವಾನುವಾದವನ್ನು ಕೊಡುತ್ತದೆ: "ಅದಕ್ಕೆ ಅನುರೂಪವಾಗಿ, ದೀಕ್ಷಾಸ್ನಾನವು ಈಗ ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ನಿಮ್ಮನ್ನು ರಕ್ಷಿಸುತ್ತದೆ – ಶರೀರದ ಕೊಳೆಯನ್ನು ತೆಗೆಯುವದಲ್ಲ, ಆದರೆ ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ಮನವಿ ಮಾಡಿಕೊಳ್ಳುವದೇ." 1 ಪೇತ್ರ 3:21ರ ಕುರಿತು ನಮ್ಮ ನಂಬಿಕೆಗಳು ಏನೇ ಆಗಿದ್ದರೂ ಸರಿಯೇ, ಅದು ಈಗಲೂ "ದೀಕ್ಷಾಸ್ನಾನವು ರಕ್ಷಿಸುತ್ತದೆ" ಎಂದು ಹೇಳುತ್ತದೆ. ಇದು ಕ್ರಿಸ್ತನ ಪುನರುತ್ಥಾನದ ಮೂಲಕವಾಗಿ ಸಾಧಿಸಲ್ಪಡುತ್ತದೆ. "ಪ್ರತಿರೂಪ"ವು ನೋಹನ ರಕ್ಷಣೆಯ "ಮಾದರಿ"ಯಲ್ಲಿತ್ತು ಹೊರತು ದೀಕ್ಷಾಸ್ನಾನದ ಕ್ರಿಯೆಯಲ್ಲಿನ "ಸಾಂಕೇತಿಕ" ರಕ್ಷಣೆಯಲ್ಲ.

ಕೆಲವರು ಇಲ್ಲಿ "ನೀರು" ನೀರಾಗಿರುತ್ತದೆಂಬುದನ್ನು ತಿರಸ್ಕರಿಸಿದ್ದಾರೆ, ಅದನ್ನು ಪವಿತ್ರಾತ್ಮನ ಪ್ರತಿರೂಪವೆಂದು ವ್ಯಾಖ್ಯಾನಿಸುತ್ತಾರೆ. Freed-Hardeman ವಿಶ್ವವಿದ್ಯಾಲಯದ ಅಧ್ಯಕ್ಷನಾಗಿದ್ದ ಮತ್ತು ತನ್ನ ಕಾಲದ ಒಬ್ಬ ಗಮನಾರ್ಹನಾದ ಪ್ರಸಂಗಿಯಾಗಿದ್ದ N. B.

Hardemanನು, ದೇವರು ಹೇಳುವದೊಂದು, ಆತನ ಮಾತಿನ ಅರ್ಥವೇ ಇನ್ನೊಂದಾಗಿರುತ್ತದೆಂದು ಹೇಳಿಕೊಳ್ಳುವದರ ವಿವೇಚನಾಶೂನ್ಯತೆಯನ್ನು ತೋರಿಸಿ ಕೊಟ್ಟನು. "ಯೋಹಾನ 3:5ರಲ್ಲಿ 'ನೀರು' ಎಂಬುದರ ಅರ್ಥವು 'ನೀರು' ಎಂದು ನೀನು ಯೋಚಿಸುವದಿಲ್ಲ, ಅಲ್ಲವೇ?" ಎಂದು ಕೇಳಿದಾಗ, ಸಹೋದರ Hardemanನು ತಮಾಷೆಯಾಗಿ ಪ್ರತ್ಯುತ್ತರ ನೀಡುತ್ತಾ, "ಅದು 'ಮಜ್ಜಿಗೆ' ಎಂದು ನಾನು ಯೋಚಿಸುತ್ತೇನೆ. ಕರ್ತನು 'ನೀರು' ಎಂದು ಹೇಳಿದಾಗ ಆತನ ಅರ್ಥವು 'ನೀರು' ಎಂದಾಗಿರಲಿಲ್ಲವಾದರೆ, ನಾನು ಅದನ್ನು ನನಗೆ ಇಷ್ಟವಾದ ಏನನ್ನಾದರೂ ಮಾಡಬಲ್ಲೆನು, ಮತ್ತು ನನಗೆ ಮಜ್ಜಿಗೆ ಅಂದರೆ ಇಷ್ಟ" ಎಂದನು.

## ಆತ್ಮೀಕ ಪ್ರೀತಿಯನ್ನು ಉತ್ತೇಜಿಸುವದು (10:24)

10:24ರ "ಪ್ರೀತಿ" ಯು ἀγάπη (*agapē*) ಆಗಿರುತ್ತದೆ, ಇದು ಇಬ್ರಿಯರಿಗೆ ಪತ್ರಿಕೆಯೊಳಗೆ ಇಲ್ಲಿ ಮತ್ತು 6:10ರಲ್ಲಿ ಮಾತ್ರವೇ ಪ್ರಸ್ತಾಪಿಸಲ್ಪಟ್ಟಿರುತ್ತದೆ.[87] ನಾವು ಒಟ್ಟಾಗಿ ಕೂಡಿ ಬರುವದರ ಗುರಿಯು ಸಹೋದರ ಪ್ರೀತಿಯನ್ನು ಉತ್ತೇಜಿಸುವದು ಆಗಿರುತ್ತದೆ (1 ಪೇತ್ರ 2:17). ಹಗೆತನ, ವ್ಯಾಜ್ಯ, ಮತ್ತು ಪಂಗಡಗಳು ಕೊರಿಂಥದ ಸಭೆಯೊಳಗೆ ನುಸುಳಿದಾಗ, ಪೌಲನು ಸದಸ್ಯರಿಗೆ "ಪ್ರೀತಿಯ ಔತಣ"ವನ್ನು ನಿಲ್ಲಿಸಬೇಕೆಂದು ಸಲಹೆ ಮಾಡಿದನು ಯಾಕೆಂದರೆ ಅದು "ದ್ವೇಷದ ಔತಣ" ಆಗಿ ಮಾರ್ಪಟ್ಟಿತ್ತು (1 ಕೊರಿಂಥ 11:17-22). ಆತನು ಒಂದು ಸಭೆಯನ್ನು ಬಿಟ್ಟು ಬಿಡುವಂತೆ ಎಂದಿಗೂ ಸಲಹೆ ಮಾಡಲಿಲ್ಲ, ಆದರೆ ಕರ್ತನ ಭೋಜನವನ್ನು ನಂಬಿಗಸ್ತರಾಗಿ ಆಚರಿಸುವದನ್ನು ಮುಂದುವರೆಸುವಂತೆ ಸಹೋದರರಿಗೆ ಹೇಳಿದನು (1 ಕೊರಿಂಥ 11:23-32). ಈ ಆಚರಿಸುವಿಕೆಯ ಮಹತ್ವವು ಪ್ರೀತಿಯನ್ನು ಪುನಃ ಹೊತ್ತಿಸಬಲ್ಲದು ಮತ್ತು ಮರುನಿರ್ಮಾಣ ಮಾಡಬಹುದು, ಯಾಕೆಂದರೆ ಒಬ್ಬನು ತನ್ನ ಎಲ್ಲಾ ಭೇದಗಳ ಮತ್ತು ಮೊಂಡುತನದ ವಿಷಯದಲ್ಲಿ ನಾಚಿಕೆ ಪಟ್ಟುಕೊಳ್ಳದೆ ರಕ್ಷಕನು ಮಾಡಿರುವದನ್ನೆಲ್ಲಾ ಮತ್ತು ಆತನ ನಂಬಿಗಸ್ತಿಕೆಯ ಕುರಿತು ಎಷ್ಟು ದೀರ್ಘವಾಗಿ ಯೋಚಿಸಿದರೂ ಅಧಿಕವಾಗುವದಕ್ಕೆ ಸಾಧ್ಯವಿಲ್ಲ. ಎಲ್ಲಕ್ಕಿಂತ ಮೇಲಾಗಿ, ಈ ಘಟನೆಯು ಕರ್ತನ ದಿನದಂದು ನಿಯತಕ್ರಮವಾದ ಸಭೆಯಾಗಿ ಕೂಡಿ ಬರುವಿಕೆಗೆ ನಮ್ಮನ್ನು ಸೆಳೆಯುವದನ್ನು ಮುಂದುವರೆಸತಕ್ಕದ್ದು. ನಮ್ಮನ್ನು ಸತ್ಕಾರ್ಯಗಳನ್ನು ಮಾಡುವಂತೆ ಸ್ಫೂರ್ತಿಗೊಳಿಸುವದಕ್ಕೆ ಸಭೆಯು ದೇವರ ವಿಧಾನವಾಗಿದೆ; ಅದು ಇಲ್ಲದೆ ಹೋದರೆ ನಮ್ಮಲ್ಲಿ ಕೆಲವರು ಮಾತ್ರವೇ ದೇವರ ಸೇವೆ ಮಾಡುವದರಲ್ಲಿ ಎಡೆಬಿಡದೆ ಮುಂದುವರೆಯುವ ಬಯಕೆಯನ್ನು ಹೊಂದುತ್ತೇವೆ.

ನಾವು ಗದರಿಸುವ ಮೂಲಕ ಅಥವಾ ತಪ್ಪು ಎತ್ತಿ ತೋರಿಸುವ ಮೂಲಕ ಪ್ರೀತಿಸುವಂತೆ ಜೊತೆಯ ಕ್ರೈಸ್ತರನ್ನು ಪರಿಣಾಮಕಾರಿಯಾಗಿ ಸ್ಫೂರ್ತಿಗೊಳಿಸುವದಕ್ಕೆ ಸಾಧ್ಯವಿಲ್ಲ. ನಮ್ಮ ಪ್ರಾಮಾಣಿಕತೆಯಲ್ಲಿ ಇತರರು ಭರವಸೆಯನ್ನು ಕಳಕೊಳ್ಳುವಂತೆ ಮಾಡುವ ಯಾವದನ್ನಾಗಲಿ ಮಾಡಬಾರದು ಅಥವಾ ಹೇಳಬಾರದು. ಬದಲಾಗಿ, ಬೇರೆಯವರು ದೇವರಲ್ಲಿ ಮತ್ತು ನಮ್ಮಲ್ಲಿ ಇಬ್ಬರಲ್ಲಿಯೂ ದೃಢವಿಶ್ವಾಸವನ್ನು ಇಡುವಂತ ಮಾಡುವ ಪ್ರೋತ್ಸಾಹಕರ ಮಾತುಗಳನ್ನು ನೀಡೋಣ. ನಾವು ನಿಯತಕ್ರಮವಾಗಿ ಆರಾಧನೆಯ ಕೂಟಗಳಿಗೆ ಹಾಜರಾಗುವ ಹೊರತು ಅದನ್ನು ಮಾಡುವದಕ್ಕೆ ಸಾಧ್ಯವಿಲ್ಲ (10:25). ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವದನ್ನು ನಿರ್ಲಕ್ಷಿಸುವದರ ದುಷ್ಪರಿಣಾಮಗಳ ಬಗ್ಗೆ ಇಬ್ರಿಯರಿಗೆ ಪತ್ರಿಕೆಯ ಲೇಖಕನು ಈ ಮುಂಚೆ ವಾಚಕರಿಗೆ ಹೇಳಿದ್ದನು (3:13).

## ಸಭೆಯಾಗಿ ಆರಾಧನೆಗೆ ಕೂಡಿ ಬಂದ ಸಮಯಗಳಲ್ಲಿನ ಅನ್ಯೋನ್ಯತೆ (10:25)

ಯೆರೂಸಲೇಮಿನಲ್ಲಿದ್ದ ಪ್ರಥಮ ಸಭೆಯಂತೆಯೇ (ಅಪೊಸ್ತಲರ ಕೃತ್ಯಗಳು 2:42), ಕ್ರೈಸ್ತರು

ಒಂದು ಅನ್ಯೋನ್ಯತೆಯ ಭಾಗವಾಗಿದ್ದಾರೆಂಬುದನ್ನು 25ನೇ ವಚನವು ಪರೋಕ್ಷವಾಗಿ ಸೂಚಿಸುತ್ತದೆ. "ಅನ್ಯೋನ್ಯತೆ" ಎಂಬುದು κοινωνία (*koinōnia*) ಎಂಬ ಪದದಿಂದ ಬಂದದ್ದಾಗಿದ್ದು, "ಸಹಭಾಗಿತ್ವ" ಅಥವಾ ಬೇರೆಯವರೊಂದಿಗೆ "ಒಂದೇ ರೀತಿಯಾಗಿ ಪಾಲ್ಗೊಳ್ಳುವದು" ಎಂದರ್ಥವಾಗಿದೆ. 10:19ರಲ್ಲಿ ಇಬ್ರಿಯರಿಗೆ ಪತ್ರಿಕೆಯ ವಾಚಕರನ್ನು "ಸಹೋದರರು" ಎಂದು ಕರೆಯಲಾಯಿತು. ಅದು ಎಂಥ ಒಂದು ಅದ್ಭುತವಾದ ಯೋಚನೆಯನ್ನು ಸೂಚಿಸುತ್ತದೆ – ಒಂದೇ ಕುಟುಂಬದ ಭಾಗವಾಗಿರುವದು, ಒಬ್ಬನೇ ತಂದೆಯನ್ನು ಹೊಂದಿದವರಾಗಿರುವದು, ಸಹೋದರರು ಮತ್ತು ಸಹೋದರಿಯ ಮಾಡಬೇಕಾದ ರೀತಿಯಲ್ಲಿ ಒಬ್ಬರನ್ನೊಬ್ಬರು ಪ್ರೀತಿಸುವದು. ಬ್ರಿಟನ್ ದೇಶಕ್ಕಾಗಿ ಯುದ್ಧದಲ್ಲಿ ತಾನು ಯಶಸ್ಸು ಸಾಧಿಸಿದ್ದಕ್ಕೆ ಬಹು ಮುಖ್ಯವಾದದ್ದು ಏನೆಂದು ಕೇಳಲ್ಪಟ್ಟಾಗ, ಪ್ರಧಾನ ನೌಕಾಧಿಪತಿಯಾಗಿದ್ದ Nelsonನು ಹೀಗೆ ಪ್ರತ್ಯುತ್ತರ ಕೊಟ್ಟನು, "ನನಗೆ ಒಂದು ಸಹೋದರರ ತಂಡವನ್ನು ಮುನ್ನಡೆಸುವ ಸೌಭಾಗ್ಯ ಸಿಕ್ಕಿತ್ತು." ಸಭೆಯ ಯಶಸ್ಸಿಗೆ ಸಹ ಅದೇ ಬಹು ಮುಖ್ಯವಾಗಿರುತ್ತದೆ.

ಕ್ರೈಸ್ತರಿಗೆ ಸಹೋದರರಾಗಿ ಅನ್ಯೋನ್ಯತೆಯನ್ನು ಹೊಂದುವ ಅಗತ್ಯವಿರುತ್ತದೆ. ನಾವು ಪ್ರಾರ್ಥನೆ ಮತ್ತು ಬುದ್ಧಿವಾದಕ್ಕಾಗಿ ಕೂಡಿ ಬರುವ ಸಭೆಗಳ ಮೂಲಕ ನಮಗೆ ಪ್ರೋತ್ಸಾಹದ ಅಗತ್ಯವಿರುತ್ತದೆ. ನಾವು ಆರಾಧನೆಗಳಿಗೆ ಹೋಗಲು ಬಯಸತಕ್ಕದ್ದು – ಭಾಗವಹಿಸುವದರಿಂದ ನಮಗೆ ಏನು ಸಿಕ್ಕುತ್ತದೆಂಬುದಕ್ಕಾಗಿ ಮಾತ್ರವಲ್ಲದೆ, ಇತರರು ನಂಬಿಗಸ್ತರಾಗಿರುವಂತೆ ನಾವು ಏನು ಕೊಡುಗೆಯನ್ನು ನೀಡಬಲ್ಲೆವು ಎಂಬುದಕ್ಕಾಗಿ ಸಹ ಆಗಿರುತ್ತದೆ.

ಒಂದು ಕುಟಿಲ ಪಾಷಂಡ ಬೋಧನೆಯು ಏನೆಂದರೆ, "ನಮಗೆ ಯೇಸು ಅಗತ್ಯ, ಆದರೆ ನಮಗೆ ಸಭೆಯ ಅಗತ್ಯವಿಲ್ಲ." ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುವ ವೇಳೆಯಲ್ಲಿ ಸಹ, ಕೆಲವರು ಹೀಗೆ ಹೇಳುತ್ತಿರುವಂತೆ ಕಾಣಿಸುತ್ತದೆ, "ಸಭೆಗೆ ಹೋಗುವದು ನಿಷ್ಪ್ರಯೋಜಕ. ಅದು ನಮಗೆ ಅತಿಯಾದ ಸಮಸ್ಯೆಯನ್ನುಂಟು ಮಾಡುತ್ತಿದೆ. ಯಾವಾಗಲೂ ಏನಾದರೊಂದು ನಿರಾಶೆಗೊಳಿಸುವಂತದ್ದು ಸಂಭವಿಸುತ್ತದೆ, ಆದ್ದರಿಂದ ಯೇಸುವಿನಲ್ಲಿ ವಿಶ್ವಾಸಿಗಳಾಗಿರುವ ಮಿಕ್ಕವರ ಸಂಗಡ ಆರಾಧಿಸುವದಕ್ಕಂತೂ ಹೋಗುವದೇ ಇಲ್ಲ."

ಕರ್ತನು ಸಭೆಯನ್ನು ἐκκλησία (*ekklēsia*) ಆಗಿ ರಚಿಸಿದನು – ಒಂದು ನಿಜವಾದ "ಕೂಟ," ಈ ವಿಧದಲ್ಲಿಯೇ ಆ ಪದವು ಅನುವಾದಿಸಲ್ಪಡಬೇಕು. "ಸಭೆ" ಎಂಬ ಪದವು *ekklēsia* ಎಂಬದರಿಂದ ಬಂದದ್ದಲ್ಲ; ಇದು ಜರ್ಮನ್ ಮತ್ತು ಮಧ್ಯಮ ಆಂಗ್ಲದ ಪದವಾದ *kirche* ಎಂಬದರಿಂದ ಸ್ಕಾಟಿಶ್‌ನ *kirk* ಮತ್ತು ಆಂಗ್ಲದಲ್ಲಿ "ಸಭೆ" ಎಂಬದಾಗಿ ಅಭಿವೃದ್ಧಿಗೊಂಡಿತು. ಹೇಗೂ, "ಸಭೆ" ಎಂಬ ಪದವು ಯೋಚನೆಯಲ್ಲಿ κυριακός (*kuriakos*) ಎಂಬುದರೊಂದಿಗೆ ಸಂಬಂಧಿಸಿದೆ, ಅದರರ್ಥವು "ಕರ್ತನಿಗೆ ಸೇರಿದವರಾಗಿರುವದು" ಅಥವಾ ಕೇವಲ "ಕರ್ತನವರು" ಎಂದಾಗಿರುತ್ತದೆ. *Kuriakos* ("ಕರ್ತನವರು") ಎಂಬುದು ಹೊಸ ಒಡಂಬಡಿಕೆಯೊಳಗೆ ಎರಡು ಸಾರಿ ಮಾತ್ರವೇ ಬಳಸಲ್ಪಟ್ಟಿದೆ, 1 ಕೊರಿಂಥ 11:20ರಲ್ಲಿ ("ಕರ್ತನ ಭೋಜನ") ಮತ್ತು ಪ್ರಕಟನೆ 1:10ರಲ್ಲಿ ("ಕರ್ತನ ದಿನ"). *Ekklēsia* ಕರ್ತನಿಗೆ ಸೇರಿದವರು. (ಯೇಸು ಅದನ್ನು ಮತ್ತಾಯ 16:18ರಲ್ಲಿ "ನನ್ನ ಸಭೆ" ಎಂದು ಕರೆದನು.) ನಾವು ಸಭೆಯ ಅನ್ಯೋನ್ಯತೆಯನ್ನು ಕಾಪಾಡಿಕೊಳ್ಳಲು ಮತ್ತು ವಾಸ್ತವದಲ್ಲಿ "ಕರ್ತನ ಸಭೆ" ಆಗಿರುವದಕ್ಕೆ ಆರಾಧನೆಗಾಗಿ ನಿಯತಕ್ರಮವಾಗಿ ಕೂಡಿಬರುವದನ್ನು ನಿಭಾಯಿಸಿಕೊಂಡು ಹೋಗಬೇಕು.

ಕ್ರಿಸ್ತನು ಆದುಕೊಂಡವರೊಂದಿಗೆ - ದೇವಜನರು, ಅವರೆಲ್ಲಾ ಆತನ ಶುದ್ಧೀಕರಿಸ ಲ್ಪಟ್ಟ ದೇಹದ ಅಂಗಗಳಾಗಿದ್ದಾರೆ (ಎಫೆಸ 5:25-27) – ಸಜೀವವಾದ ಅನ್ಯೋನ್ಯತೆಯನ್ನು ಕಾಪಾಡಿಕೊಂಡು ಹೋಗದೆ ಆತನಿಗೆ ನಂಬಿಗಸ್ತರಾಗಿರುವದಕ್ಕೆ ಸಾಧ್ಯವಿಲ್ಲ.

## ಆರಾಧನೆಗಾಗಿ ಕೂಡಿ ಬರುವದನ್ನು ಕೆಲವರು ಏಕೆ ನಿರ್ಲಕ್ಷಿಸುತ್ತಾರೆ? (10:25)

ಪ್ರಥಮ ಶತಮಾನದಲ್ಲಿನ ಕ್ರೈಸ್ತರು ಏಕೆ ಆರಾಧನೆಯನ್ನು ನಿರ್ಲಕ್ಷಿಸಿದರೆಂಬುದು ತಿಳಿಸಲ್ಪಟ್ಟಿರುವದಿಲ್ಲ. ಬಹುಶಃ ಅವರ ಕಾರಣಗಳು ಇಪ್ಪತ್ತೊಂದನೆಯ ಶತಮಾನದಲ್ಲಿ ಸಭೆಯಾಗಿ ಕೂಡಿ ಬರುವದಕ್ಕಿರುವ ಅಸಡ್ಡೆಗೆ ಇರುವ ಅದೇ ಕಾರಣಗಳೇ ಆಗಿರಬಹುದಾಗಿದೆ. ಕೆಲವರು ಕ್ರೈಸ್ತರೆಂದು ಗುರುತಿಸಲ್ಪಡುವದಕ್ಕೆ ಬಯಸುವದಿಲ್ಲ, ಯಾಕೆಂದರೆ ಅವರು ಕ್ರಿಸ್ತನ ಸಭೆಯ ವಿಷಯದಲ್ಲಿ ನಾಚಿಕೆಯುಳ್ಳವರಾಗಿದ್ದಾರೆ. ಇನ್ನು ಕೆಲವರು ಕ್ರಿಸ್ತನ ಸಭೆಯ ನಂಬಿಗಸ್ತರಾದ ಸದಸ್ಯರಿಗೆ ಕೊಡಲ್ಪಟ್ಟಿರುವ ನಿತ್ಯಜೀವದ ವಾಗ್ದಾನಗಳಿಗಿಂತ ಲೋಕದ ತಾತ್ಕಾಲಿಕ ಆಮೀಷಗಳನ್ನು ಆರಿಸಿಕೊಳ್ಳುತ್ತಾರೆ. ಬೇರೆ ಕೆಲವರು ನಿಯತಕ್ರಮವಾಗಿ ಕೂಡಿ ಬರುವಂಥ ಸಹೋದರರು ಮತ್ತು ಸಹೋದರಿಯರನ್ನು ಬಿಟ್ಟು ತಾವು ಸಾಕಷ್ಟು ನಂಬಿಗಸ್ತರಾಗಿರಬಲ್ಲರು ಎಂದು ಯೋಚಿಸುತ್ತಾರೆ. 10:25ನೇ ವಚನದ ಬುದ್ಧಿವಾದವು ಸೂಚಿಸುವ ಪ್ರಕಾರ, ಇದೊಂದು ದುಃಖಕರವಾದ ತಪ್ಪು ಆಗಿರುತ್ತದೆ, ಮತ್ತು 10:26ರಲ್ಲಿ ಪ್ರಸ್ತಾಪಿಸಲಾಗಿರುವ ಮತಭ್ರಷ್ಟತೆಗೆ ನಡಿಸಬಲ್ಲದು. ನಾವು ಅಂಥ ಸಹೋದದರಿಗೆ ತಾವು ತೆಗೆದುಕೊಳ್ಳುತ್ತಿರುವ ಗಂಡಾಂತರವನ್ನು ಅರಿತುಕೊಳ್ಳುವಂತೆ ಸಹಾಯ ಮಾಡಬೇಕು. ಇಬ್ರಿಯರಿಗೆ ಪತ್ರಿಕೆಯ ಸತತವಾದ ಬೇಡಿಕೊಳ್ಳುವಿಕೆಯು "ಧೈರ್ಯನ್ನೂ ನಿರೀಕ್ಷೆಯಿಂದುಂಟಾಗುವ ಉತ್ಸಾಹವನ್ನೂ ಕಡೇ ತನಕ ಹಿಡಿದುಕೊಂಡಿರಬೇಕು" ಎಂಬದೆ (3:6). 10:23ರಲ್ಲಿ ಅದೇ ರೀತಿಯ ಯೋಚನೆಯು ವ್ಯಕ್ತಪಡಿಸಲ್ಪಟ್ಟಿದೆ: "ನಾವು ಮಾಡಿದ ಪ್ರತಿಜ್ಞೆಯನ್ನ ನಿಶ್ಚಂಲರಾಗಿ ಪರಿಗ್ರಹಿಸೋಣ." ಲೇಖಕನು "ಸಭೆಯಾಗಿ ಕೂಡಿಕೊಳ್ಳುವದನ್ನು ಬಿಟ್ಟುಬಿಡಬೇಡಿರಿ" ಎಂಬ ಬುದ್ಧಿವಾದವನ್ನು ಪರಿಚಯಿಸುವ ವೇಳೆ ಇದನ್ನು ಹೇಳಿದನು (10:25). ನಂಬಿಗಸ್ತರಾಗಿ ಉಳಿಯಬೇಕೆಂಬ ಈ ಪ್ರೋತ್ಸಾಹಿಸುವಿಕೆಯು ಕ್ರಿಸ್ತನ ನಂಬಿಗಸ್ತಿಕೆಯ ಬೆಳಕಿನಲ್ಲಿ ಬಂದದ್ದಾಗಿದೆ (10:23). ಆತನು ತನ್ನ ತಂದೆಗೆ ನಿಷ್ಠೆಯಿಂದಿದ್ದನು – ನಾವು ಸಹ ಹಾಗೆಯೇ ಇರಬಾರದೋ?

## ಸಭೆಯ/ರಾಜ್ಯದ ಆದರ್ಶವಾದ ಸ್ವಭಾವ (10:25)

ಸಭೆಯು ದೇವರ ಮತ್ತು ಕ್ರಿಸ್ತನ ರಾಜ್ಯವಾಗಿದೆ (ಎಫೆಸ 3:5). ನಾವು ಕ್ರಿಸ್ತನಿಗೆ ಸೇರಿದವರಾಗಿದ್ದರೆ, ನಾವು ಆತನ ರಾಜ್ಯದಲ್ಲಿ "ಪ್ರಜೆಗಳಾಗಿದ್ದೇವೆ." ನಾವು ಲೋಕದ ನಡವಳಿಕೆಗಳನ್ನು ತೊರೆದಿರುವದಾದರೆ, ನಾವು ದೇವರ ಕೂಟದ (*ekklēsia*), ಸಭೆಯ ಭಾಗವಾಗಿದ್ದೇವೆ. ಆ ರಾಜ್ಯವು ಹೇಗಿರುತ್ತದೆ – ಅಥವಾ ಹೇಗೆ ಇರತಕ್ಕದ್ದು? Jonathan Kozolನು ತನ್ನ *Amazing Grace* ಎಂಬ ಪುಸ್ತಕದಲ್ಲಿ ಬಡತನದಿಂದ ಮತ್ತು ಅಪರಾಧಗಳಿಂದ ತುಂಬಿದ್ದ ನ್ಯೂಯಾರ್ಕ್ ಪಟ್ಟಣದ South Bronx ಎಂಬ ಪ್ರಾಂತ್ಯದಲ್ಲಿದ್ದ ಹನ್ನೆರಡು ವರ್ಷದ ಒಬ್ಬ ಹುಡುಗನ ಬಗ್ಗೆ ಹೇಳುತ್ತಾನೆ. ಆತನಿಗೆ ಬೀದಿಯ ಹಿಂಸಾಚಾರ, ಕೊಲೆ, ಜೊತೆಗೆ ಇನ್ನು ಅನೇಕ ವಿಧವಾದ ಅಪರಾಧಗಳ ಪರಿಚಯವಿತ್ತು. ಹೇಗೂ, ಆತನು ಒಂದು ಉತ್ತಮ ಸ್ಥಳೀಯ ಸಭೆಯ ದಯೆಗಳನ್ನು ಸಹ ಅನುಭವ ಮಾಡುವವನಾದನು. ಆತನು ಹೆಸರು Anthony, ಮತ್ತು ಆತನು ಆಗಾಗ "ದೇವರ ರಾಜ್ಯ"ದ ಕುರಿತು ಮಾತಾಡುತ್ತಿದ್ದನು. Kozolನು ಆತನಿಗೆ ದೇವರ ರಾಜ್ಯದ ಕುರಿತ ತನ್ನ ವ್ಯಾಖ್ಯಾನವನ್ನು ಬರೆಯುವಂತೆ ಕೇಳಿದನು. ಆರಂಭದಲ್ಲಿ ಆತನು ನಿರಾಕರಿಸಿದನು, ಆದರೆ ಕೆಲವು ದಿನಗಳ ಬಳಿಕ ತಾನು ಒಂದು ನೋಟ್ ಪುಸ್ತಕದಲ್ಲಿ ಬರೆದಿದ್ದ ಮೂರು ಪುಟಗಳನ್ನು Kozolನಿಗೆ ತೋರಿಸಿದನು. ಆತನ ವ್ಯಾಖ್ಯಾನದ ಒಂದು ಭಾಗವು ಈ ರೀತಿಯಲ್ಲಿತ್ತು,

ಪರಲೋಕದಲ್ಲಿ ಯಾವ ಹಿಂಸಾಕೃತ್ಯವೂ ಇರುವದಿಲ್ಲ. ಅಲ್ಲಿ ಬಂದೂಕುಗಳಾಗಲಿ ಅಥವಾ ಮಾದಕದ್ರವ್ಯಗಳಾಗಲಿ ಇರುವದಿಲ್ಲ . . . ನೀವು ತೆರಿಗೆಗಳನ್ನು ಕಟ್ಟಬೇಕಾಗಿಲ್ಲ. ನೀವು ಚಿಕ್ಕವರಾಗಿದ್ದಾಗ ಮರಣಿಸಿದ್ದ ಎಲ್ಲಾ ಮಕ್ಕಳನ್ನು ಗುರುತಿಸುವಿರಿ. ಯೇಸು ಅವರಿಗೆ ಒಳ್ಳೆಯವನಾಗಿರುವನು ಮತ್ತು ಅವರೊಂದಿಗೆ ಆಟವಾಡುವನು. ರಾತ್ರಿಯಲ್ಲಿ ಆತನು ಬಂದು ನಿಮ್ಮ ಮನೆಗೆ ಭೇಟಿ ಕೊಡುವನು.[88]

ಅದು ಸಭೆಯು ಈಗ ಸಹ ಏನನ್ನು ಒದಗಿಸತಕ್ಕದ್ದೆಂಬುದಕ್ಕೆ ಒಂದು ಸುಂದರವಾದ ವರ್ಣನೆಯಾಗಿದೆ. ಅದು ನಿಜವಾಗಿಯೂ ಪರಲೋಕದ ಒಂದು "ಮೊಗಶಾಲೆ" ಆಗಿರುವದಾದರೆ ಸಮಾಧಾನವನ್ನು ಒದಗಿಸುವದು. ನಾವು ಪರಲೋಕದ ಆದರಣೆಯಲ್ಲಿ ಸ್ವಲ್ಪವನ್ನು ಈಗ ಭೂಮಿಯ ಮೇಲೆ ದೇವರ ರಾಜ್ಯದಲ್ಲಿ ತಿಳಿಯುವದಕ್ಕೆ ಶಕ್ತರಾಗಿರಬೇಕು.

"ದೇವರ ಮನೆಯವರು [ಕುಟುಂಬ]" ಆಗಿರುವದಕ್ಕೆ, ನಾವು ಪ್ರತಿಯೊಬ್ಬರು ವೈಯಕ್ತಿಕವಾಗಿ ಕ್ರಿಸ್ತನಿಗೆ ಸಮರ್ಪಣೆಯುಳ್ಳವರಾಗಿರತಕ್ಕದ್ದು, ನೀರಿನ ದೀಕ್ಷಾಸ್ನಾನದ ದ್ವಾರದ ಮೂಲಕ ನಂಬಿಕೆಯಿಂದ ಆ ಅನ್ಯೋನ್ಯತೆಯಲ್ಲಿ ಪ್ರವೇಶಿಸಿದವರಾಗಿರುವದು (ವ. 22; ನೋಡಿರಿ ಗಲಾತ್ಯ 3:26, 27). ನಾವು ರಕ್ಷಣೆಗಾಗಿ ದೇವರು ಇಟ್ಟಿರುವ ಶರತ್ತುಗಳನ್ನು ಸಂಧಿಸಿದೆಯೇ ಆತನ ಕುಟುಂಬದ ಭಾಗವಾಗಿ ಆತನ ಸಮೀಪಕ್ಕೆ ಬರುವದಕ್ಕೆ ಸಾಧ್ಯವಿಲ್ಲ. ನಾವೆಲ್ಲಾ ಒಂದೇ ವಿಧದಲ್ಲಿ ಅನ್ಯೋನ್ಯತೆಯಲ್ಲಿ ಪ್ರವೇಶಿಸಿಲ್ಲವಾದರೆ ನಾವು ಹೇಗೆ ಒಂದು "ಅನ್ಯೋನ್ಯತೆ" ಎಂದು ಕರೆಯಲ್ಪಡಬಲ್ಲೆವು? ದೀಕ್ಷಾಸ್ನಾನವು ನಿಶ್ಚಯವಾಗಿಯೂ ಕ್ರಿಸ್ತನ ದೇಹದೊಳಗೆ ಪ್ರವೇಶಿಸುವದಕ್ಕೆ ದಾರಿಯಾಗಿರುತ್ತದೆ (1 ಕೊರಿಂಥ 12:13).[89] ದೇಹದಲ್ಲಿ ಮಾತ್ರವೇ, ನಾವು "ನಂಬಿಕೆಯ ಪೂರ್ಣ ನಿಶ್ಚಯತ್ವ"ವನ್ನು ಹೊಂದಬಲ್ಲೆವು (10:22). ನಾವು "ನಂಬಿಕೆಯ ಪ್ರತಿಜ್ಞೆಯನ್ನು ನಿಶ್ಚಂಲರಾಗಿ ಹಿಡಿದುಕೊಂಡಿರಬೇಕು" (10:23). ನಿರೀಕ್ಷೆಯೊಂದಿಗೆ ನಾವು ರಕ್ಷಿಸಲ್ಪಟ್ಟಿದ್ದೇವೆ (ರೋಮಾ 8:23–25) ಮತ್ತು "ನಿತ್ಯಜೀವದ ನಿರೀಕ್ಷೆಯಲ್ಲಿ" ಉಳಿಯುತ್ತೇವೆ (ತೀತನಿಗೆ 1:2). ನಮ್ಮ ನಂಬಿಕೆಯು ತನ್ನ ಬುನಾದಿಯಾಗಿ ನಿರೀಕ್ಷೆಯನ್ನು ಹೊಂದಿದೆ.

ಸಭೆಯಾಗಿ ಕೂಡಿ ಬರುವದರಲ್ಲಿಯೇ ನಾವು ಒಬ್ಬರನ್ನೊಬ್ಬರು ಪ್ರೀತಿ ಮತ್ತು ಸತ್ಕಾರ್ಯಗಳ ಕಡೆಗೆ ಉತ್ತೇಜಿಸುತ್ತೇವೆ (10:24); ನಾವು ಬೇರೆ ಇನ್ನಾವದೇ ದಾರಿಯಲ್ಲಿ ಅದನ್ನು ಮಾಡುವದಕ್ಕೆ ಆಗುವದೇ ಇಲ್ಲ. ದೂರವಾಣಿ ಕರೆಗಳು ಮತ್ತು ಇಮೇಲ್ ಸಂದೇಶಗಳಾಗಲು ಮುಖಾಮುಖಿಯಾಗಿ ಭೇಟಿಯಾಗುವದಕ್ಕೆ ಪರ್ಯಾಯವಾಗಲಾರದು, ಅದರಿಂದ ನಾವು ಉತ್ತಮವಾದ ಸೇವೆ ಮತ್ತು ಪ್ರೀತಿಗಾಗಿ "ಉತ್ತೇಜಿಸಲ್ಪಡಬಲ್ಲೆವು" ("ಪ್ರಚೋದಿಸಲ್ಪಡಬಲ್ಲೆವು"; KJV).

## ದಿನವು ಸಮೀಪಿಸುತ್ತಿದೆ (10:25)

25ನೇ ವಚನದಲ್ಲಿನ "ದಿನವು ಸಮೀಪಿಸುತ್ತಿದೆ" (ಇನ್ನು ಸ್ವಲ್ಪ ಕಾಲದಲ್ಲಿ) ಎಂಬುದನ್ನು ಕೆಲವರು ಅದು ಕರ್ತನ ಪುನರಾಗಮನದ ದಿನ ಮತ್ತು/ಅಥವಾ ನ್ಯಾಯತೀರ್ಪಿನ ದಿನ ಆಗಿರತಕ್ಕದ್ದೆಂದು ಯೋಚಿಸುತ್ತಾರೆ. ನಮ್ಮ ಕರ್ತನ ಪುನರಾಗಮನದ ಸಮಯವನ್ನು ನಾವು ಬಲ್ಲವರಾಗಿರುವದಿಲ್ಲ. ಅದು ನಮ್ಮ ಯುಗದಲ್ಲಿ ಆಗಬಹುದು ಅಥವಾ ಅಷ್ಟೇನೂ ದೂರವಲ್ಲದ ಕಾಲದಲ್ಲಿ ಆಗಬಹುದು.

1988ಕ್ಕೆ ಸ್ವಲ್ಪ ಮುಂಚೆ, *Eighty-eight Reasons the Rapture Will Occur in 1988* ಎಂಬ ಪುಸ್ತಕವು ಪ್ರಕಾಶನಗೊಳಿಸಲ್ಪಟ್ಟಿತು. ನೀವು ಅದನ್ನು ಓದಿದ್ದರೆ ಮತ್ತು ನಂಬಿದ್ದಾಗಿದ್ದಲ್ಲಿ, ಮತ್ತು ಅದು ಸಂಭವಿಸಲಿಲ್ಲವಾದರೆ, ಅದರ ಫಲಿತವೇನಾಗಿರಬಹುದಿತ್ತು? ನೀವು ಆ ಪುಸ್ತಕವನ್ನು

ಬರೆದ ಬೈಬಲ್ ಪಂಡಿತರೆಂದು ಹೇಳಿಕೊಳ್ಳುವವನನ್ನು ಯಾವಾಗಲೂ ಸಂಶಯಿಸುವಿರೋ, ಅಥವಾ ಬಹುಶಃ ನಮ್ಮ ಬರಲಿರುವ ಯುಗದ ಅಂತ್ಯದ ಕುರಿತ ಶಾಸ್ತ್ರದ ಎಲ್ಲಾ "ಸೂಚನೆಗಳನ್ನು" ಬಲ್ಲೆನು ಎಂದು ಹೇಳಿಕೊಳ್ಳುವ ಎಲ್ಲಾ ಬೋಧಕರನ್ನು ಸಂಶಯಿಸುವಿರೋ? ನೀವು ಎಂದಾದರೂ ಅಂತಹ ಬೋಧಕರ ಮಾತುಗಳನ್ನು ಕೇಳಿಸಿಕೊಳ್ಳುವಿರೋ? ದೋಷದ ಬೋಧನೆಯು ಎಂದಿಗೂ ಸಹಾಯವಾಗುವದಿಲ್ಲ, ಅದು ಕಲ್ಪನೆಯನ್ನು ಮಾಡಿಕೊಂಡು ವ್ಯಾಖ್ಯಾನಿಸುವವರ ಮೂರ್ಖತನವನ್ನಷ್ಟೆ ತೋರಿಸುತ್ತದೆ.

ಕರ್ತನು 1988ರಲ್ಲಿ ಬರಲಿಲ್ಲ — ಅಥವಾ ಬೇರೆಯವರು ಮುಂತಿಳಿಸಿದಂತೆ 2000ರಲ್ಲಿ ಬರಲಿಲ್ಲ. ಅಂತ್ಯವು ಯಾವಾಗ ಆಗುವದು ಎಂಬುದರ ವಿಷಯದಲ್ಲಿ ಬೈಬಲಿನ ಹೇಳಿಕೆಗಳನ್ನು ವ್ಯಾಖ್ಯಾನಗಳು ದೋಷದಿಂದ ಕೂಡಿರುತ್ತವೆ. ಅಷ್ಟೊಂದು ಮುಂತಿಳಿಸುವಿಕೆಗಳು ತಪ್ಪಾಗಿ ಹೋಗಿರುವದರಿಂದ, ಅಂಥ ಬೋಧಿಸುವಿಕೆಯು ನಂಬಿಕೆಯನ್ನು ನಿರಾಶೆಗೊಳಿಸುತ್ತದೆ. ಈ ರೀತಿಯ ಸಾರುವಿಕೆಯು ಒಳ್ಳೇದು ಎಂದು ಸೂಚಿಸುವದು ಒಂದು ರೀತಿಯಲ್ಲಿ, "ಮೇಲು ಬರುವಂತೆ ಕೇಡು ಮಾಡೋಣ" ಎಂದು ಹೇಳಿದಂತಾಗುತ್ತದೆ (ರೋಮಾ 3:8).[90]

ಪ್ರತಿಯೊಂದು ಪೀಳಿಗೆಯು ತನ್ನ ಮುಂಚಿನ ಪೀಳಿಗೆಗಿಂತಲೂ ಕೆಟ್ಟದ್ದೆಂದು ಮತ್ತು ನಾವು ಈಗ "ಕಡೇ ದಿನಗಳಲ್ಲಿ" ಇದ್ದೇವೆ, ಹೀಗೆ 2 ತಿಮೊಥೆ 3:1-5 ವಚನಗಳನ್ನು ನೆರವೇರಿಸಿದ್ದೇವೆ ಎಂದು ಹೇಳುವದು 10:25ನ್ನು ತಪ್ಪಾಗಿ ವ್ಯಾಖ್ಯಾನ ಮಾಡಿದಂತಾಗುತ್ತದೆ. ಅಂಥ ಅಭಿಪ್ರಾಯವು ಬೈಬಲಿನಲ್ಲಿ ಎಲ್ಲಿಯೂ ಕಲಿಸಲ್ಪಟ್ಟಿರುವದಿಲ್ಲ. ಪೌಲನು ಕೆಲವೊಂದು ಸ್ಥಿತಿಗಳು ಪ್ರಬಲವಾಗಿರುವಂತಹ "ಕಾಲಗಳು," ಅಥವಾ ಯುಗಗಳನ್ನು ಸೂಚಿಸಿ ಹೇಳಿದನು. ಪೌಲನು ಬರೆಯುವ ವೇಳೆಗಾಗಲೆ 2 ತಿಮೊಥೆ 3ರಲ್ಲಿ ಬಣ್ಣಿಸಲ್ಪಟ್ಟಿರುವ ವ್ಯಕ್ತಿಗಳು ಆಗಲೇ ಎದ್ದೇಳುತ್ತಿದ್ದರು, ಆದ್ದರಿಂದ "ಇಂಥವರ ಸಹವಾಸವನ್ನು ಮಾಡಬೇಡ" ಎಂದು ಆತನು ತಿಮೊಥೆಯನಿಗೆ ಎಚ್ಚರಿಸುತ್ತಾನೆ (3:5). ಅಂಥವರು ಇಪ್ಪತ್ತೊಂದನೆಯ ಶತಮಾನದಲ್ಲಿ ಬರುವವರಾಗಿದ್ದರೆ ಆತನು ಅವರ ಸಹವಾಸವನ್ನು ಹೇಗೆ ಮಾಡದೆ ಇರುವದಕ್ಕೆ ಸಾಧ್ಯವಾಗಿತ್ತು? ಚರ್ಚೆಯಲ್ಲಿರುವ ಕಾಲಗಳು ಕೇವಲ ಕ್ರಿಸ್ತನ ಪುನರಾಗಮನದ ಮುಂಚಿನ ಅಂತಿಮ ಕೆಲವು ದಿನಗಳು ಮಾತ್ರವೇ ಆಗಿರುವದಿಲ್ಲ, ಆದರೆ ಪ್ರತಿಯೊಂದು ಪೀಳಿಗೆಯಾಗಿದ್ದು ಅದರಲ್ಲಿ ಕೆಟ್ಟ ಜನರು ನಮ್ಮ ಸುತ್ತಲೂ ಇದ್ದೇ ಇರುತ್ತಾರೆ. ಅವರು ಇಲ್ಲದೆ ಇದ್ದ ಕಾಲವು ಯಾವದು? ಕೆಲವರು "ಕೆಟ್ಟದ್ದರಿಂದ ಮತ್ತಷ್ಟು ಕೆಟ್ಟತನಕ್ಕೆ ಹೋಗುತ್ತಾರೆ," ಮತ್ತು "ಜನರ ಪ್ರೀತಿಯು ತಣ್ಣಗಾಗುತ್ತದೆ" (ಮತ್ತಾಯ 24:12). ಹಾಗಿದ್ದರೂ, ನಾವು ಎಚ್ಚರಿಕೆಯುಳ್ಳವರಾಗಿರಬೇಕು ಯಾಕೆಂದರೆ ಶಾಸ್ತ್ರವನ್ನು ತಪ್ಪಾಗಿ ವ್ಯಾಖ್ಯಾನಿಸುವದು ಹಾನಿಕಾರಕವಾಗಿರಬಲ್ಲದು.

ನಾವು ಗಮನಿಸಿರುವ ಪ್ರಕಾರ, 10:25ರಲ್ಲಿ "ದಿನ" (ಇನ್ನು ಸ್ವಲ್ಪ ಕಾಲ) ಎಂಬುದು ಕ್ರಿ.ಶ. 70ರಲ್ಲಿ ಯೆರೂಸಲೇಮಿನ ನಾಶನ ಕಾಲವಿರಬಹುದಾಗಿದೆ. ಆ ಘಟನೆಯು ಸಂಭವಿಸುವದಕ್ಕೆ ಕಾಲವು ಸಮೀಪವಾಗಿದೆ ಎಂಬುದನ್ನು ಸೂಚಿಸುವ ಸೂಚನೆಗಳನ್ನು ಯೇಸು ನೀಡಿದನು (ಮತ್ತಾಯ 24; ಮಾರ್ಕ 13; ಲೂಕ 21). ಸಮೀಪಿಸುತ್ತಿದೆ ಎಂದು ಕಾಣಲ್ಪಡಬಹುದಾದ ಆ ದಿನವು ಯಾವದಾಗಿತ್ತು? (1) ಅದು ಒಬ್ಬನ ಮರಣದ ದಿನವಾಗಿರಲಾರದು, ಯಾಕೆಂದರೆ ತಮ್ಮ ಆ ದಿನವು ಸಮೀಪಿಸುತ್ತಿರುವದನ್ನು ಎಲ್ಲರೂ ಕಾಣಲಾರರು. (2) ಅದು ನ್ಯಾಯತೀರ್ಪಿನ ದಿನವಾಗಿರಲಾರದು, ಯಾಕೆಂದರೆ ಆ ದಿನವು ಯಾವಾಗ ಎಂದು ಯಾರಿಗೂ ತಿಳಿಯದು. (3) ಅದು ಕರ್ತನ ದಿನವಾಗಿರಲಾರದು, ಯಾಕೆಂದರೆ ಈ "ಸಮೀಪಿಸುತ್ತಿರುವ ದಿನ" ಕ್ಕೆ ಮುಂದೆ ಕರ್ತನ ದಿನದಂದು ಸಭೆಯಾಗಿ ಕೂಡಿ ಬರಲಾಗುತ್ತಿತ್ತು. (4) ಈ ದಿನವು ಯೆರೂಸಲೇಮ್

ಪಟ್ಟಣವು ರೋಮನ್ ಸೈನ್ಯದಿಂದ ಮುತ್ತಿಗೆ ಹಾಕಲ್ಪಟ್ಟು ನಾಶಗೊಂಡ ಸಮಯವು ಆಗಿರುವ ಸಾಧ್ಯತೆ ಬಹಳಷ್ಟಿದೆ. ಯೇಸುವಿನ ಮುಂದಾಗಿ ಎಚ್ಚರಿಸುವಿಕೆ ಮತ್ತು ಸೂಚನೆಗಳನ್ನು ಬಲ್ಲರಾಗಿ ಕ್ರೈಸ್ತರು ಆ ದಿನವು ಸಮೀಪಿಸುವದನ್ನು ನೋಡುವದಕ್ಕೆ ಶಕ್ತರಾಗಿದ್ದರು. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಬಾಬಿಲೋನಿನವರ ಕೈಯಲ್ಲಿ ಯೂದಾಯದ ನಾಶನದ ಕುರಿತಾದ ಹಬಕ್ಕೂಕ 2:3, 4ನ್ನು ಸಹ ಉಲ್ಲೇಖಿಸಿದನು. ಆತನು ಈ ಮಾತುಗಳನ್ನು ರೋಮನ್ನರಿಂದ ಯೆರೂಸಲೇಮ್ ಪತನಗೊಳ್ಳುವಿಕೆಗೆ ಅನ್ವಯಿಸುತ್ತಿರಬಹುದಾಗಿದೆ.[91]

## ನಮ್ಮ ದೇವರು, ಮುಯ್ಯಿ ತೀರಿಸುವ ದೇವರು (10:26-31)

ಮತಭ್ರಷ್ಟತೆಯ ಭಯಂಕರವಾದ ಪರಿಣಾಮವು 10:26-31ರಲ್ಲಿ ಬಣ್ಣಿಸಲ್ಪಟ್ಟಿದೆ. ಈ ದಂಡನೆಯು ಸಭೆಯ ಆರಾಧನೆಗಳಿಗೆ ಹಾಜರಾಗುವದರಲ್ಲಿ ನಿಷ್ಠೆಯಿಂದಿರಬೇಕೆಂದು ಬುದ್ಧಿವಾದ ಹೇಳಿದ ತಕ್ಷಣದಲ್ಲಿ ಪ್ರಸ್ತಾಪಿಸಲ್ಪಟ್ಟಿರುತ್ತದೆ. ಕ್ರೈಸ್ತ ಸಭೆಯನ್ನು ನಿರ್ಲಕ್ಷಿಸುವವನು ನಂಬಿಗಸ್ತರಿಂದ ಬೇರ್ಪಡುವಾಗ ಪಾಪದ ಜವುಗಿನೊಳಗೆ ಜಾರುತ್ತಾನೆ. ಅಂಥ ವ್ಯಕ್ತಿಗೆ ಸಿಕ್ಕುವ ದಂಡನೆಯು ಮಾತುಗಳಲ್ಲಿ ವರ್ಣಿಸುವದಕ್ಕಿಂತ ಭಯಂಕರವಾಗಿರುತ್ತದೆ: ಅದು ಹಳೆಯ ಒಡಂಬಡಿಕೆಯಲ್ಲಿ ಒಬ್ಬನು ಎಂದಾದರೂ ಅನುಭವಿಸಿದ ದಂಡನೆಗಿಂತಲೂ "ಇನ್ನೂ ಎಷ್ಟೋ ಕ್ರೂರವಾದ ದಂಡನೆ" ಆಗಿರುತ್ತದೆ (10:29). ಕೋರಹನು ಜನರ ನಾಯಕತ್ವವನ್ನು ವಹಿಸಿಕೊಳ್ಳಬೇಕೆಂಬ ಸಾಹಸಕ್ಕೆ ಕೈ ಹಾಕಿದಾಗ ಆತನು ಮತ್ತು ಆತನ ಕುಟುಂಬದವರನ್ನು ಭೂಮಿಯು ಬಾಯ್ದೆರೆದು ನುಂಗಿದ್ದಕ್ಕಿಂತಲೂ ಇದು ಭಯಂಕರವಾಗಿರುತ್ತದೆ (ಅರಣ್ಯಕಾಂಡ 16:1-35). ಅದು ಒಡಂಬಡಿಕೆಯ ಮಂಜೂಷವನ್ನು ಮುಟ್ಟಿದಾಗ ದೇವರಿಂದ ಹೊಡೆಯಲ್ಪಟ್ಟು ಮೃತನಾದ ಉಜ್ಜನಿಗೆ ಸಿಕ್ಕ ದಂಡನೆಗಿಂತಲೂ ಅದು ಘೋರವಾಗಿರಲಿದೆ (2 ಸಮುವೇಲ 6:1-7). ಅದು ಸೊದೋಮ್ ಮತ್ತು ಗೊಮೋರ ಪಟ್ಟಣಗಳ ನಾಶನ ಹಾಗೂ ಲೋಟನ ಹೆಂಡತಿಯ ಮರಣಕ್ಕಿಂತಲೂ ಘೋರವಾಗಿರಲಿದೆ (ಆದಿಕಾಂಡ 19).

ಲೇಖಕನು "ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವದು ಭಯಂಕರವಾದದ್ದು" (10:31); "ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ" (12:29) ಎಂದು ಹೇಳಿದ್ದರಲ್ಲಿ ಆಶ್ಚರ್ಯವೇನಿಲ್ಲ. ಆತನು 2 ಥೆಸಲೋನಿಕ 1:8-10ರಲ್ಲಿ ಬಣ್ಣಿಸಲಾಗಿರುವ ರೀತಿಯಲ್ಲಿಯೇ ಖಂಡಿತವಾಗಿಯೂ ಪ್ರತೀಕಾರವನ್ನು ಸಲ್ಲಿಸುವನು. ಈ ಉಪದೇಶಗಳನ್ನು ಪೂರ್ಣವಾಗಿ ಅರ್ಥಮಾಡಿಕೊಂಡರೂ ನಂಬಿಕೆಯಿಂದ ದೂರವಾಗುವವನು, ದೇವರ ದೃಷ್ಟಿಯಲ್ಲಿ ಈ ಎಲ್ಲಾ ದಂಡನೆಗಳನ್ನು ಹೊಂದುವದಕ್ಕೆ ಯೋಗ್ಯನಾದ ಅತ್ಯಂಥ ಅಸಹ್ಯಕರ ವ್ಯಕ್ತಿಯಾಗಿರುತ್ತಾನೆ.

ಒಬ್ಬನು ಪರ್ವತವನ್ನು ಹತ್ತುತ್ತಿದ್ದಾನೆ ಮತ್ತು ತುದಿಯ ಸಮೀಪದಲ್ಲಿ ಇದ್ದಾನೆಂದು ಊಹಿಸಿಕೊಳ್ಳಿರಿ. ಆತನು ಇನ್ನೇನು ಈಗಾಗಲೆ ಪರ್ವತದ ತುದಿಯನ್ನು ತಲುಪಿರುವ ವ್ಯಕ್ತಿಯಿಂದ ಕಡೇ ಕಲ್ಲನ್ನು ದಾಟಿ ತುದಿಗೆ ಬರುವಂತೆ ಎಳೆಯಲ್ಪಡುವವನಿದ್ದನು. ಏಕಾಏಕಿ, ಈ ಪರ್ವತಾರೋಹಿಯು ಇನ್ನು ತನ್ನಿಂದ ಪ್ರಯಾಸ ಪಡುವದಕ್ಕಾಗುವದಿಲ್ಲವೆಂದು ನಿರ್ಧರಿಸಿ ಹಗ್ಗವನ್ನು ಕೈ ಬಿಟ್ಟು ಬಿಡುತ್ತಾನೆ. ಮತಭ್ರಷ್ಟತೆಯ ಅಪಾಯದಲ್ಲಿದ್ದ ಕ್ರೈಸ್ತನ ಪರಿಸ್ಥಿತಿಯು ಇದೇ ಆಗಿತ್ತು! ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೀಗೆ ಕೂಗುತ್ತಿದ್ದಾನೆ, "ನೀವು ಈಗ ಕೈ ಚೆಲ್ಲಿ ಬಿಡುವದಾದರೆ, ನಿಮಗೆ ಇನ್ನಾವ ರಕ್ಷಣೆಯು ಇರುವದಿಲ್ಲ!"[92]

ಮತಭ್ರಷ್ಟನು ನಿತ್ಯವಾದ ರಕ್ಷಣೆಯ ಮೇಲಿನ ಹಿಡಿತವನ್ನು ಕಳಕೊಳ್ಳುತ್ತಾನೆ ಮತ್ತು ಆತನು ಸದಾಕಾಲಕ್ಕೂ ನಾಶನಗೊಳ್ಳುತ್ತಾನೆ. ಆ ಸ್ಥಿತಿಯಲ್ಲಿ ಮುಂದುವರೆಯುವವನು ರಕ್ಷಣೆಗಿರುವ ತನ್ನ ಸದವಕಾಶವನ್ನು ಕಳಕೊಳ್ಳುತ್ತಾನೆ, ಯಾಕೆಂದರೆ ಬೇರೆ ಇನ್ನೊಂದು ಕೊಡುಗೆ ಇರುವದಿಲ್ಲ.

### ಭಯದಿಂದ ಎದುರುನೋಡುವಿಕೆ (10:27)

ಪೌಲನು ನ್ಯಾಯತೀರ್ಪಿನ ದಿನದ ಬಗ್ಗೆ ಬಹಳಷ್ಟನ್ನು ತಿಳಿದಿದ್ದನು. ಅದರ ಭಯಾನಕ ಪರಿಣಾಮಗಳ ಕಾರಣದಿಂದಾಗಿ ಆತನು "ಮನುಷ್ಯರನ್ನು ಒಡಂಬಡಿಸುತ್ತಿದ್ದನು" (2 ಕೊರಿಂಥ 5:10, 11). ಆದದರಿಂದ, ಪ್ರಶ್ನಾತೀತವಾಗಿ, ಜನರು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಡಬೇಕೆಂದು ಮನವರಿಕೆಯನ್ನುಂಟು ಮಾಡುವದಕ್ಕೆ ನರಕದ ಮತ್ತು ನ್ಯಾಯತೀರ್ಪಿನ ಕುರಿತಾ ಭಯವನ್ನು ಬಳಸಿಕೊಂಡನು. ಆತನು ಫೇಲಿಕ್ಸನೊಂದಿಗೆ ಹಾಗೆ ಮಾಡಿದನು (ಅಪೊಸ್ತಲರ ಕೃತ್ಯಗಳು 24:25), ದೇಶಾಧಿಪತಿಯು "ಭಯಗ್ರಸ್ಥನಾಗುವಂತೆ" ಮಾಡಿದನು. ನಿತ್ಯನಾಶನದ ಕುರಿತು ಎಚ್ಚರಿಕೆಗಳನ್ನು ಅನೀತಿವಂತನಿಗೆ ಕೊಡತಕ್ಕದ್ದು.

ಇದನ್ನು ಪಡೆದುಕೊಳ್ಳುವ ಪಾಪವನ್ನು ಕ್ಷಮಾಪಣೆಯೇ ಇಲ್ಲದಿರುವ "ನಿತ್ಯಪಾಪ" ಎಂದು ಕಾಣತಕ್ಕದ್ದು (ಮಾರ್ಕ 3:28, 29). ಇದು ನಿತ್ಯವಾದದ್ದು ಯಾಕೆಂದರೆ ವ್ಯಕ್ತಿಯು ಅತ್ಯಂಥ ಕಠಿಣಗೊಂಡವನಾಗಿದ್ದು ಆ ಪಾಪಕ್ಕಾಗಿ ಪಶ್ಚಾತ್ತಾಪ ಪಡುವದಕ್ಕೆ ಸಾಧ್ಯವಿರುವದಿಲ್ಲ. ಆತನು ಆ ಸ್ಥಿತಿಯಲ್ಲಿ ಬೇರೆ ಎಲ್ಲಿಯೂ ಅಲ್ಲ, ಆದರೆ ನರಕಕ್ಕೆ ಮಾತ್ರವೇ ಹೋಗಬಲ್ಲನು. ಅತನು ತನ್ನ "ನಂಬಿಕೆಯ ಅಂಗ" ವನ್ನು ಕಳಕೊಂಡಿದ್ದಾನೆ, ಮತ್ತು ಆತನು ಬದಲಾಗದ ರೀತಿಯಲ್ಲಿ ಅವನ ಮನಸ್ಸಾಕ್ಷಿಯು ಬರೆ ಹಾಕಲ್ಪಟ್ಟಿದೆ.

### ಜೀವಸ್ವರೂಪನಾದ ದೇವರ ಕೈಯಲ್ಲಿ ಬೀಳುವದು (10:31)

ಲೇಖಕನು ಏಕ ಸತ್ಯ ಹಾಗೂ ಜೀವುಸ್ವರೂಪನಾದ ದೇವರಿಗೆ ವಿಧೇಯನಾಗುವಂತೆ ತನ್ನ ವಾಚಕರಲ್ಲಿ ಭಯವನ್ನು ಹುಟ್ಟಿಸುವ ಇಂಗಿತ ಹೊಂದಿದ್ದನು. ಈ ದಿನಗಳಲ್ಲಿ ನರಕದ ಕುರಿತಾದ ಪ್ರಸಂಗಗಳು ಅಷ್ಟೇನೂ ಜನಪ್ರಿಯವಲ್ಲ. ಜನರನ್ನು ಹೆದರಿಸಿ ನರಕದಿಂದ ದೂರಮಾಡುವದು ಹುಡುಗಾಟಿಕೆಯಾದದ್ದು ಎಂದು ಬೋಧಕರು ಯೋಚಿಸುತ್ತಾರೆ. ಅನೇಕರು ನರಕವು ಇರುತ್ತದೆಂಬುದನ್ನು ಸಂಶಯಿಸುತ್ತಾರೆ. ಹೇಗೂ, ಜನರನ್ನು ಹೆದರಿಸಿ ಪರಲೋಕದೊಳಗೆ ಬರುವಂತೆ ಮಾಡದಿರುವ ಮೂಲಕ, ನಾವು ಅವರನ್ನು ನರಕದಿಂದ ದೂರವಿರುವಂತೆ ಹೆದರಿಸುವದರಲ್ಲಿ ಸಹ ವಿಫಲರಾಗುತ್ತೇವೆ. ಜನರ ಜೀವಿತಗಳಲ್ಲಿರುವ ಭ್ರಷ್ಟತೆಯು – ಮತ್ತು ಅವರು ಅದರ ಬಗ್ಗೆ ಜಾಗೃತಿಯಿಲ್ಲದವರಾಗಿರುವದು – ನಾವು ನಿತ್ಯನಾಶನ ಏನಾಗಿರುತ್ತದೆಂಬುದನ್ನು ಸಾರಬೇಕೆಂಬುದನ್ನು ಅಗತ್ಯಗೊಳಿಸುತ್ತದೆ.

ಹೊಸ ಒಡಂಬಡಿಕೆಯು ಆ ಯಾತನೆಯ ಸ್ಥಳವನ್ನು ಯಾವಾಗಲೂ ಭಯಾನಕವಾದ ಪದಗಳಲ್ಲಿ ಸೂಚಿಸುತ್ತದೆ. ಯೇಸು ಅದರ ಬಗ್ಗೆ ಹಲವಾರು ಸಾರಿ ಪ್ರಸ್ತಾಪಿಸಿದನು (ಮತ್ತಾಯ 5:22; 10:28; ಮಾರ್ಕ 9:47, 48). ಕ್ರಿಸ್ತನನ್ನು ಸಾರುವದೆಂದರೆ ಆತನ ಇಡೀ ಸಂದೇಶವನ್ನು ಸಾರುವದು ಎಂದಾಗಿರುತ್ತದೆ – ಅದನ್ನು ನಾವು ಕೇವಲ ನಮಗೆ ಆಕರ್ಷಕವೆಂದು ತೋರುವ ಕಾರ್ಯಗಳಿಗೆ ಮಾತ್ರವೇ ಸಿಮೀತಗೊಳಿಸಬಾರದು.

### ಬಾಧೆಗಳನ್ನನುಭವಿಸುವ ದೇವಜನರೊಂದಿಗೆ ಒಂದಾಗಿರುವದು (10:32-34)

ಜೊತೆಯ ದೇವಜನರ ಬಾಧೆಗಳಲ್ಲಿ, ಅಪಹಾಸ್ಯ, ಮತ್ತು ಸೆರೆವಾಸಗಳಲ್ಲಿ ಹಂಚಿಕೊಳ್ಳುವ ಮೂಲಕ, ಇಬ್ರಿಯ ಕ್ರೈಸ್ತರು ತಮ್ಮ ಪ್ರಾಂತ್ಯದಲ್ಲಿದ್ದ ಸಭೆಯೊಂದಿಗೆ ತಮ್ಮನ್ನು ನಿಜವಾಗಿಯೂ ಗುರುತಿಸಿಕೊಳ್ಳುತ್ತಿದ್ದರು. ಅವರು ಯೇಸುವನ್ನು ಕರ್ತನೆಂದು ಆರಾಧಿಸುವದಕ್ಕಾಗಿ ಹಿಂಸಿಸಲ್ಪಟ್ಟಿರಲಿಲ್ಲ; ಆದರೆ ತಮ್ಮ ಜೊತೆಯ ಕ್ರೈಸ್ತರು ಹಿಂಸೆಗೊಳಗಾಗಿದ್ದರಿಂದ, ಮತ್ತು ತಾವು ಅವರಿಗೆ ಸಹಾಯ ಮಾಡಲಿಚ್ಛಿಸಿದ್ದರಿಂದ, ಅವರ ಬಾಧೆಯಲ್ಲಿ ಪಾಲುಗಾರರಾದರು ಮತ್ತು ಅವರೊಂದಿಗೆ ಗುರುತಿಸಿಕೊಂಡರು. ಪೌಲನನ್ನು ಹೊರತು ಪಡಿಸಿ ಬೇರೆ ಯಾವದೇ ಕ್ರೈಸ್ತರು

ಹೊಸ ಪ್ರಾಂತ್ಯಗಳಿಗೆ ಹೋಗಿ ಅಲ್ಲಿನ “ಸಭೆಯೊಂದಿಗೆ ಗುರುತಿಸಿಕೊಂಡ” ಬಗ್ಗೆ ನಮಗೆ ಹೇಳಲ್ಪಟ್ಟಿಲ್ಲ (ಅಪೊಸ್ತಲರ ಕೃತ್ಯಗಳು 9:26-28), ಆದರೆ ಅನೇಕರು ಹಾಗೆ ಮಾಡಿದರೆಂದು ನಾವು ಭಾವಿಸಿಕೊಳ್ಳಬಹುದು. ತಾವು ಮನೆಯಲ್ಲಿ ಉಳಿಯುವ ಮೂಲಕ ಅಪಾಯದಿಂದ ದೂರವಿರಬಹುದಾಗಿದ್ದರೂ ಸ್ವಯಂಪ್ರೇರಿತರಾಗಿ ಬೇರೆ ಕ್ರೈಸ್ತರ ಜೊತೆಯಲ್ಲಿ ಬಾಧೆಯನ್ನನುಭವಿಸುವದು ಕ್ರೈಸ್ತ ಅನ್ಯೋನ್ಯತೆಯು ನಿಜವಾಗಿಯೂ ಎಷ್ಟು ಪ್ರಾಮುಖ್ಯವೆಂಬುದನ್ನು ತೋರಿಸುತ್ತದೆ. ಒಬ್ಬನು ಒಂದು ಸ್ಥಳೀಯ ಸಭೆಯ ಭಾಗವಾಗಿರುವ ಮೂಲಕ ಮಾತ್ರವೇ ಆ ಅನ್ಯೋನ್ಯತೆಯನ್ನು ಹೊಂದಬಲ್ಲನು.

### ನಷ್ಟಗಳನ್ನು ಸಂತೋಷದಿಂದ ಅಂಗೀಕರಿಸಿಕೊಳ್ಳುವದು (10:34)

ಬೆಂಕಿ, ಪ್ರವಾಹ, ಅಥವಾ ಕಳ್ಳತನದಿಂದಾಗಿ ಸ್ವತ್ತುಗಳನ್ನು ಕಳೆದುಕೊಳ್ಳುವದನ್ನು ಅಂಗೀಕರಿಸಿಕೊಳ್ಳುವದು ಕಷ್ಟಕರವಾಗಿರುತ್ತದೆ. ಕೆಲವರಂತೂ ನಷ್ಟದ ವೇದನೆಯಿಂದ ಚೇತರಿಸಿಕೊಳ್ಳುವದೇ ಇಲ್ಲ, ಆದರೆ ಕ್ರೈಸ್ತರು ಚೇತರಿಸಿಕೊಳ್ಳಬಲ್ಲರು ಮತ್ತು ಚೇತರಿಸಿಕೊಳ್ಳುತ್ತಾರೆ. ಏಕೆ? ಏಕೆಂದರೆ ಅವರು ಯಾವಾಗಲೂ ಉತ್ತಮವಾದದ್ದನ್ನು ಎದುರು ನೋಡುತ್ತಿರುತ್ತಾರೆ, ತಮಗೊಂದು “ಮನೆಯ ಸುಧಾರಣೆ” ಬರುತ್ತಿದೆ ಎಂದು ಬಲ್ಲವರಾಗಿರುತ್ತಾರೆ (2 ಕೊರಿಂಥ 5:1) ಮತ್ತು ಈ ಲೋಕವು ಅವರ ನಿಜ ಪೌರತ್ವದ ಸ್ಥಳವಲ್ಲ ಎಂದು ಬಲ್ಲವರಾಗಿರುತ್ತಾರೆ (ಫಿಲಿಪ್ಪಿ 3:20). ಒಬ್ಬನು ಆತ್ಮೀಕವಾದದ್ದನ್ನು ಮತ್ತು ನಿತ್ಯವಾದದ್ದನ್ನು ಹೆಚ್ಚು ಬೆಲೆಯುಳ್ಳದ್ದೆಂದು ಪರಿಗಣಿಸುವಾಗ, ಆತನು ಜೀವನದ ಹೋರಾಟವನ್ನು ಬಹುತೇಕ ಜಯಿಸಿದವನಾಗಿದ್ದಾನೆ (2 ಕೊರಿಂಥ 4:16-18). ಆದಿಯಲ್ಲಿ ದೇವಜನರು ಮಾಡಿದಂತೆಯೇ, ನಾವು ಎಲ್ಲಾ ಕಾರ್ಯಗಳ ನಷ್ಟವನ್ನು ಸಂತೋಷದಿಂದ ಸ್ವೀಕರಿಸಬಲ್ಲೆವು. ಅವರು ಪ್ರತಿ ದಿನವೂ “ನಮಗೆಂಥಾ ದುಸ್ಥಿತಿ ಬಂದಿತು! ನಾವು ಎಲ್ಲವನ್ನೂ ಕಳಕೊಂಡೆವು!” ಎಂದು ಅಳುತ್ತಿರಲಿಲ್ಲ. ತಮಗೆ ಪರಲೋಕದಲ್ಲಿ ಗಂಟು ಇದೆ ಎಂದು ಬಲ್ಲವರಾಗಿದ್ದರು (ಮತ್ತಾಯ 6:19, 20). ಅವರು ಹೀಗೆ ಹೇಳಿಕೊಂಡಿರಬೇಕು, “ನಮಗೆ ಲೋಕವು ಕಸಿದುಕೊಳ್ಳಲಾರದಂಥ ಸಂಪತ್ತುಗಳಿರುತ್ತವೆ.” ಈ ಹಳೇ ಹಾಡಿನಲ್ಲಿ ಒಂದು ಸುಂದರವಾದ ಯೋಚನೆಯು ವ್ಯಕ್ತಪಡಿಸಲ್ಪಟ್ಟಿದೆ:

> ಸ್ವತ್ತುಗಳು ಮತ್ತು ರಕ್ತಸಂಬಂಧ ಹೋಗಲಿ ಬಿಡು.
> ಈ ಲಯವಾಗುವ ಜೀವವು ಸಹ;
> ಅವರು ದೇಹವನ್ನು ಕೊಲ್ಲಬಹುದು,
> ದೇವರ ಸತ್ಯ ಸ್ಥಿರವಾಗಿ ನಿಲ್ಲುವದು;
> ಆತನ ರಾಜ್ಯವು ಸದಾಕಾಲವೂ ಇರುವದು.[93]

ಕುಟುಂಬ ವ್ಯಾಜ್ಯಗಳು, ಆರ್ಥಿಕ ಕುಸಿತ, ಮತ್ತು ಸಭೆಯ ಸಮಸ್ಯೆಗಳು ನಮ್ಮನ್ನು ಕುಂದಿಸುವಂತೆ ತೋರುವಾಗ, ನಾವು ಎಲ್ಲವನ್ನೂ ನಿಯಂತ್ರಿಸುವ ನಮ್ಮ ದೇವರಿಗೆ ಮೊರೆಯಿಡುತ್ತೇವೆ. ಆತನು “ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳನ್ನು ಅನುಕೂಲ” ಮಾಡುತ್ತಾನೆ (ರೋಮಾ 8:28). ಇಬ್ರಿಯ ಕ್ರೈಸ್ತರು ಬಹು ಕಷ್ಟಗಳನ್ನು ಅನುಭವಿಸಿದ್ದರು (10:32). ಅವರ ಉದಾಹರಣೆಯನ್ನು ನೆನಪಿನಲ್ಲಿಟ್ಟುಕೊಳ್ಳುವದು ನಮಗೆ ಎಲ್ಲದರ ಹೊರತಾಗಿಯೂ, ಅವರಂತೆಯೇ ನಂಬಿಗಸ್ತರಾಗಿ

ಉಳಿಯುವಂತೆ ಸಹಾಯ ಮಾಡುವದು. ಪರಲೋಕವು ನಮಗಾಗಿ ಕಾಯುತ್ತಿರುವಾಗ, ನಾವು ಭೂಮಿಯ ಮೇಲಿನ ಎಲ್ಲಾದರ ನಷ್ಟವನ್ನು ಸಂತೋಷದಿಂದ ಎದುರಿಸಬಲ್ಲೆವು.

### ಸುವಾರ್ತಿಕನ ಕೆಲಸ (10:32, 33)

ಪೌಲನ ಕೆಲಸವು "ಅವರು [ಅನ್ಯಜನರು] ಕತ್ತಲೆಯಿಂದ ಬೆಳಕಿಗೂ ಸೈತಾನನ ಅಧಿಕಾರದಿಂದ ದೇವರ ಕಡೆಗೂ ತಿರುಗಿಕೊಂಡು ನನ್ನಲ್ಲಿ ನಂಬಿಕೆಯಿಡುವದರಿಂದ ಪರಿಹಾರವನ್ನೂ ಪವಿತ್ರರಾದವರಲ್ಲಿ ಹಕ್ಕನ್ನೂ ಹೊಂದುವಂತೆ ಅವರ ಕಣ್ಣುಗಳನ್ನು ತೆರೆಯಬೇಕು" ಎಂಬುದು ಎಂದು ಸ್ವತಃ ಕರ್ತನು ಆತನಿಗೆ ತಿಳಿಸಿದನು (ಅಪೊಸ್ತಲರ ಕೃತ್ಯಗಳು 26:18). ಅವರ ಪಾಪಗಳು ದಂಡನೆಗೆ ಅರ್ಹವೆಂದು ಜನರಿಗೆ ಮನವರಿಕೆ ಮಾಡಿಕೊಡುವದು ಅವರನ್ನು ಕ್ರಿಸ್ತನ ಕಡೆಗೆ ಸೆಳೆಯುವದಕ್ಕೆ ಮುಖ್ಯವಾದದ್ದಾಗಿದೆ. ಅವರು ಕತ್ತಲೆಯಲ್ಲಿದ್ದಾರೆ, ಮತ್ತು ಸತ್ಯವನ್ನು ತಿಳಿಸಿ ಮನವೊಲಿಸುವದರಿಂದ ಮಾತ್ರವೇ ಅವರನ್ನು ಕೀಳಾದ ಜೀವವನ್ನು ಬಿಟ್ಟು ರಕ್ಷಕನಿಗೆ ದೀನತೆಯಿಂದ ಒಪ್ಪಿಸಿಕೊಳ್ಳುವಂತೆ ಮಾಡಬಲ್ಲದು. ಅವರು ಬೆಳಕನ್ನು ಪಡೆಯಬೇಕಾದರೆ ಪೌಲನು ಮಾಡಿದಂತಹ ಬೋಧನೆಯಿಂದ ಅವರ ಕಣ್ಣುಗಳು ತೆರೆಯಲ್ಪಡತಕ್ಕದ್ದು. ಜನರಿಗೋಸ್ಕರ ಪವಿತ್ರಾತ್ಮನು ಆ ಕೆಲಸವನ್ನು ಮಾಡುವನೆಂಬ ಸುಳಿವು ಸಹ ಶಾಸ್ತ್ರದಲ್ಲಿ ಕೊಡಲ್ಪಟ್ಟಿರುವದಿಲ್ಲ. ಸೈತಾನನಿಂದ ಹೆಚ್ಚು ಪೂರ್ಣವಾಗಿ ವಂಚಿಸಲ್ಪಟ್ಟವರು ತಮ್ಮ ಕುರುಡು ಸ್ಥಿತಿಯನ್ನು ಗ್ರಹಿಸಿಕೊಳ್ಳಲಾರರು; ಅವರ ಮನಸ್ಸುಗಳು ಕತ್ತಲೆಯಿಂದ ಮಂಕಾಗಿರುವದರಿಂದ ಅವರು ಸ್ಪಷ್ಟವಾಗಿ ಯೋಚಿಸಲಾರರು.

ನಾವು ಎರಡು ಕಾರ್ಯಗಳನ್ನು ಮಾಡುವ ಮೂಲಕ ಲೋಕದ ಕಣ್ಣುಗಳನ್ನು ತೆರೆಯಬಲ್ಲೆವು: (1) ಯೇಸುವಿನ ಸರಳವಾದ ಸುವಾರ್ತೆಯನ್ನು ಸಾರುವದು ಮತ್ತು (2) ಅದರಂತೆ ಜೀವಿಸುವ ಮೂಲಕ. ಆಮೀಷದ ವಿಧಾನಗಳು, ವಿವಾಹದ ವಿಷಯದಲ್ಲಿ ನಾಗರಿಕ ಕಾನೂನನ್ನು ಒತ್ತಾಯದಿಂದ ಜಾರಿಗೆ ತರುವ ಮೂಲಕ ಸಹ ಕೆಲಸವು ಆಗುವದಿಲ್ಲ. ಲೋಕದ ದೊರೆಗಳು ಕ್ರೈಸ್ತೀಯ ತತ್ವಗಳನ್ನು ವಿಧಿಸಬೇಕೆಂದು ಎಂದಿಗೂ ನಿರೀಕ್ಷಿಸಬಾರದು. ಪೌಲನ ರೀತಿಯಲ್ಲಿ, ಯೇಸುವಿನ ಕುರಿತು ಸಾರಬೇಕು, ಹೀಗೆ ಜನರು ತಮಗಾಗಿ ಆತನ ಚಿತ್ತವನ್ನು ಅರಿತುಕೊಳ್ಳುವರು ಮತ್ತು ಕತ್ತಲೆಯಿಂದ ಬೆಳಕಿನ ಕಡೆಗೆ ತಿರುಗಿಕೊಳ್ಳುವರು.

---

### ಅಡಿಟಿಪ್ಪಣಿಗಳು

[1]Neil R. Lightfoot, *Jesus Christ Today: A Commentary on the Book of Hebrews* (Grand Rapids, Mich.: Baker Book House, 1976), 183. 13:15, 16ರಲ್ಲಿ ಒಂದು ಸ್ತುತಿ ಮತ್ತು ಆರಾಧನೆಯ ಯಜ್ಞದ ಬಗ್ಗೆ ಪ್ರಸ್ತಾಪಿಸಲಾಗಿದೆ. [2]NIVಯು "ಆದ್ದರಿಂದ" ಎಂಬುದನ್ನು ನಿರ್ಲಕ್ಷಿಸಿರುತ್ತದೆ. [3]Neil R. Lightfoot, *Everyone's Guide to Hebrews* (Grand Rapids, Mich.: Baker Books, 2002), 128. [4]Philip Edgcumbe Hughes, *A Commentary on the Epistle to the Hebrews* (Grand Rapids, Mich.: Wm. B. Eerdmans Publishing Co., 1977), 389. [5]Jimmy Allen, *Survey of Hebrews*, 2d ed. (Searcy, Ark.: by the author, 1984), 107. [6]Kenneth Samuel Wuest, *Hebrews in the Greek New Testament for the English Reader* (Grand Rapids, Mich.: Wm. B. Eerdmans Publishing Co., 1951), 172. [7]Jim Girdwood and Peter Verkruyse, *Hebrews*, The College Press NIV Commentary (Joplin, Mo.: College Press Publishing Co., 1997), 309. [8]Donald Guthrie, *The Letter to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1983), 201. [9]ಇದು ಈ "ದೇವಾರಾಧನೆ ಮಾಡುವವರು" (10:2) ಜನರೋ ಅಥವಾ ಸ್ವತಃ ಯಾಜಕರೋ ಎಂಬ ಪ್ರಶ್ನೆಯೊಂದನ್ನು ಎಬ್ಬಿಸುತ್ತದೆ. ಇಬ್ರಿಯರಿಗೆ ಪತ್ರಿಕೆಯನ್ನು ಪ್ರಾಥಮಿಕವಾಗಿ ಸ್ವೀಕರಿಸಿಕೊಂಡವರು ಯಾಜಕರಾಗಿದ್ದಲ್ಲಿ,

ಇದು ಅವರ ಕೆಲಸದ ಮತ್ತು ಆರಾಧನೆಯ ದುರ್ಬಲತೆಯನ್ನು ಗುರುತಿಸಿಕೊಳ್ಳುವಂತೆ ಸಹಾಯ ಮಾಡುವದು. [10]Thomas G. Long, *Hebrews,* Interpretation (Louisville: John Knox Press, 1997), 101.

[11]Lightfoot, *Jesus Christ Today*, 184. [12]Hughes, 393. [13]H. L. Ellison, *The Centrality of the Messianic Idea for the Old Testament* (London: Theological Students Fellowship, 1953), 19. [14]Long, 103. [15]Girdwood and Verkruyse, 310. [16]Lightfoot, *Jesus Christ Today*, 185. ಇದು ಕೀರ್ತನೆಗಳಲ್ಲಿ ಕೀರ್ತನೆಗಾರನು ದೇವರೊಂದಿಗೆ ಮಾತಾಡುತ್ತಿರುವಂತೆ ಕಾಣುತ್ತಾದರೂ, ಇದೊಂದು ಅಂಗೀಕೃತವಾದ ವಾಕ್ಯ ಬಳಕೆಯಾಗಿರುತ್ತದೆ. [17]Girdwood and Verkruyse, 311. [18]F. F. Bruce, *The Epistle to the Hebrews*, The New International Commentary on the New Testament (Grand Rapids, Mich.: Wm. B. Eerdmans Publishing Co., 1964), 232. [19]Robert Milligan, *A Commentary on the Epistle to the Hebrews*, New Testament Commentaries (Cincinnati: Chase and Hall, 1876; reprint, Nashville: Gospel Advocate Co., 1975), 344-45. [20]ಲೇಖಕನು LXXನ ಕೀರ್ತನೆ 40:6ರಲ್ಲಿ ᾔτησας (*ēitēsas*, "ನೀನು ಕೇಳಿದಿ") ಎಂಬದನ್ನು ಇಬ್ರಿಯ 10:6ರಲ್ಲಿ εὐδόκησας (*eudokēsas*, "ನಿನಗೆ ಇಷ್ಟವಾಗಲಿಲ್ಲ") ಎಂದು ಬದಲಾಯಿಸಿದನು, ಅದು ಒಂದು ದೈವಿಕ ಚಿತ್ತ ಅಥವಾ ಉದ್ದೇಶವನ್ನು ತೋರಿಸುತ್ತದೆ. (Gerald F. Hawthorne, "Hebrews," in *The New International Bible Commentary*, ed. F. F. Bruce, H. L. Ellison, and G. C. D. Howley [Grand Rapids, Mich.: Zondervan Publishing House, 1986], 1524.)

[21]ದೇವರು ಯಜ್ಞಗಳನ್ನು ಅರ್ಪಿಸಬೇಕೆಂದು ಆಜ್ಞಾಪಿಸಿರಲಿಲ್ಲ ಎಂದು ಇದರ ಅರ್ಥವಾಗಿರುವದಿಲ್ಲ. [22]Gareth L. Reese, *A Critical and Exegetical Commentary on the Epistle to the Hebrews* (Moberly, Mo.: Scripture Exposition Books, 1992), 170. [23]Lightfoot, *Jesus Christ Today*, 185., n. 3. [24]Guthrie, 205. [25]Ibid. ಉದಾಹರಣೆಗೆ, *anaireō* ಎಂಬುದನ್ನು ಹೆರೋದನು ಶಿಶುವಾಗಿದ್ದ ಯೇಸುವನ್ನು ಕೊಲ್ಲಲು ಮಾಡಿದ ಪ್ರಯತ್ನವನ್ನು ಸೂಚಿಸುವದಕ್ಕೆ ಬಳಸಲಾಗಿರುತ್ತದೆ (ಮತ್ತಾಯ 2:16). "ನಾಶಗೊಳಿಸು" ಎಂಬ ಒಂದು ಬಲವಾದ ಪದವು ನ್ಯಾಯಯುತವಾಗಿರಬಲ್ಲದು. (Girdwood and Verkruyse, 312.) [26]Reese, 171. [27]ಈ ಗ್ರೀಕ್ ಪದವು 7:27 ಮತ್ತು 9:12ರಲ್ಲಿ ಸಹ ಕಾಣಿಸಿಕೊಳ್ಳುತ್ತದೆ. [28]ಆರಂಭಿಕ ನಂಬಿಕೆಯಿಡುವಿಕೆ ಮ್ತು ದೀಕ್ಷಾಸ್ನಾನದ ಬಳಿಕ ಶುದ್ಧೀಕರಣ ಸಂಭವಿಸುತ್ತದೆಂದು ಇದರರ್ಥವಾಗಿರತಕ್ಕದ್ದು. ಆ ಸಮಯದಲ್ಲಿ ಒಬ್ಬನು "ರಕ್ಷಿಸಲ್ಪಡುವನು" – ಸದಾಕಾಲಕ್ಕೂ ಅಲ್ಲ, ಆದರೆ ಆ ಹಂತದ ವರೆಗಿನ ತನ್ನ ಪಾಪಗಳಿಂದ ರಕ್ಷಿಸಲ್ಪಡುತ್ತಾನೆ (ಮಾರ್ಕ 16:15, 16). [29]ಅದೇ ರೀತಿಯಲ್ಲಿ ಇಬ್ರಿಯ 10:14 ಒಂದು ಹಂತ ಹಂತವಾದ ಶುದ್ಧೀಕರಣವನ್ನು ಸೂಚಿಸುತ್ತದೆ. NIVಯಲ್ಲಿ "ನೀವು ಪರಿಶುದ್ಧಗೊಳಿಸಲ್ಪಡುತ್ತಿರುವಿರಿ" ಎಂದಿರುತ್ತದೆ. [30]ಕ್ರಿಸ್ತನ "ನಿರಂತರವಾಗಿ ನಿಲ್ಲುವ ಒಂದೇ ಯಜ್ಞ" ದ ಕೆಲಸವನ್ನು ಒತ್ತಿ ಹೇಳುವ *ephapax* ಎಂಬುದು ವರ್ಷದಿಂದ ವರ್ಷಕ್ಕೆ ಸಮರ್ಪಣೆಗಳನ್ನು ಮಾಡಿದ ಮಹಾಯಾಜಕ ಕೆಲಸಕ್ಕೆ ತದ್ವಿರುದ್ಧವಾಗಿರುತ್ತದೆ. ಈ ವಿರುದ್ಧ ಹೋಲಿಕೆಯು ಜ್ಞಾನವುಳ್ಳ ಇಬ್ರಿಯರಿಂದ ಪ್ರಶ್ನಿಸಲ್ಪಡುವದು. (Moses Stuart, *A Commentary on the Epistle to the Hebrews* [London: William Tegg & Co., 1856], 459-60.)

[31]Reese, 167, n. 1. [32]Bruce, 239. [33]Lightfoot, *Jesus Christ Today*, 187. [34]ಇದು ವರ್ತಮಾನಕಾಲ ಕೃದಂಥವಾಗಿದೆ, ಆದ್ದರಿಂದ ಇದು ನಿರಂತರವಾಗಿ ಮುಂದುವರೆಯುವ ಕ್ರಿಯೆಯಾಗಿದೆ. ಈ ವಚನದಲ್ಲಿ, "ಸಿದ್ಧಿಗೆ ತಂದಿದ್ದಾನಷ್ಟೆ" ಮತ್ತು "ಪವಿತ್ರರಾಗುತ್ತಿರುವವರನ್ನು" ಎಂಬವುಗಳು ಎರಡು ಬೇರೆ ಬೇರೆ ಕಾಲರೂಪದಲ್ಲಿರುತ್ತವೆ. ಮೊದಲನೆಯ ಮಾತು, "ಭೂತಕಾಲದ, ಸಂಪೂರ್ಣಗೊಂಡ ಮುಂದುವರೆದಿರುವ ಪರಿಣಾಮಗಳುಳ್ಳ" ಕ್ರಿಯೆಯನ್ನು ಸೂಚಿಸುತ್ತದೆ, ಮತ್ತು ಎರಡನೆಯ ಮಾತು ಸಂತತ ಕ್ರಿಯಾಸೂಚಿ [ಯಲ್ಲಿದ್ದು], ಪ್ರಗತಿಯಲ್ಲಿರುವ ಪೂರ್ಣಗೊಳ್ಳದ ಕ್ರಿಯೆಯನ್ನು ಸೂಚಿಸುತ್ತದೆ . . . ವಿಶ್ವಾಸಿಯ ರಕ್ಷಣೆಯು ಒಂದು ಸಾಧಿಸಲ್ಪಟ್ಟ, ಮುಂದುವರೆಯುತ್ತಿರುವ ವಾಸ್ತವಾಂಶ, ಮತ್ತು ಒಂದು ಭವಿಷ್ಯಕ್ಕಾಗಿರುವ ವಾಗ್ದಾನ ಎರಡೂ ಆಗಿರುತ್ತದೆ [ಎಂಬುದು] ಸ್ಪಷ್ಟವಾಗಿರುತ್ತದೆ" (Girdwood and Verkruyse, 315). [35]Stuart, 461. [36]Hughes, 403. [37]Long, 104. [38]ಈ ತಲೆಬರಹವು Bruce, 243ರಲ್ಲಿ ಕೊಡಲ್ಪಟ್ಟಿದೆ. [39]Girdwood and Verkruyse, 277 ರಿಂದ ಆಯ್ದುಕೊಳ್ಳಲಾಗಿದೆ. [40]Paul Ellingworth and Eugene Albert Nida, *A Translator's Handbook on the Epistle to the Hebrews*, Helps for Translators (New York: United Bible Societies, 1983), 228.

[41]Guthrie, 211. [42]ಭಾವನೆಗಳು ನಂಬಿಕೆಯಿಂದ ನಡೆಸಲ್ಪಡಬೇಕು ಹೊರತು ನಂಬಿಕೆಯನ್ನು ಭಾವನೆಗಳು ನಡೆಸಕೂಡದು. [43]Lightfoot, *Jesus Christ Today*, 188. [44]Hughes, 407. [45]James T. Draper, Jr., *Hebrews, the Life That Pleases God* (Wheaton, Ill.: Tyndale House Publishers, 1976), 269-70. [46]ಇಲ್ಲಿ ಗ್ರೀಕ್ ವ್ಯಾಕರಣವು ಒಂದು ಆಜ್ಞಾರ್ಥಕರೂಪದ ಹೇಳಿಕೆಯ ಒತ್ತನ್ನು ಹೊಂದಿದೆ. (Girdwood and Verkruyse, 319.) [47]Hughes, 405. [48]Reese, 177. [49]Bruce, 250-51. Moses Stuart ಹೀಗೆ ಹೇಳಿದನು, "ಕ್ರೈಸ್ತ ದೀಕ್ಷಾಸ್ನಾನದ ಆರಂಭಿಕ ವಿಧಿಯಲ್ಲಿ ನೀರಿನ ಬಳಕೆಗೆ ಒಂದು ಸ್ಪಷ್ಟವಾದ ಸೂಚ್ಯಾರ್ಥವು ಇರುತ್ತದೆಂದು ನನಗೆ ಅನ್ನಿಸುತ್ತದೆ" (Stuart, 467). [50]Guthrie, 214.

[51]ಬಹುಪಾಲು ವ್ಯಾಖ್ಯಾನಕಾರರು ಇದನ್ನು ದೀಕ್ಷಾಸ್ನಾನಕ್ಕೆ ಸೂಚ್ಯಾರ್ಥವೆಂದು ಒಪ್ಪುತ್ತಾರೆ.

ಸಂದೇಹವಾದಿಗಳಲ್ಲಿರುವವನೆಂದರೆ ಕ್ಯಾಲ್ವಿನ್, ಈತನು "ತಿಳಿನೀರು" ಎಂಬುದು ದೇವರಾತ್ಮನನ್ನು ಸೂಚಿಸುತ್ತದೆಂದು ಭಾವಿಸಿದನು. (Reese, 178, n. 34.) [52]Lightfoot, *Jesus Christ Today*, 190. [53]Hawthorne, 1525. [54]"ನೀರು "ತಿಳಿ" ಎಂದು ಬಣ್ಣಿಸಲ್ಪಟ್ಟಿದೆ ಯಾಕೆಂದರೆ ದೀಕ್ಷಾಸ್ನಾನದಲ್ಲಿ ದೇವರೊಂದಿಗೆ ಒಬ್ಬನ ಸಂಬಂಧವು ನಿರ್ಮಲಗೊಳಿಸಲ್ಪಡುತ್ತದೆ" (Allen, 112). [55]"ಪ್ರಚೋದಿಸು" ಎಂಬ ಪದವು 1611ರಲ್ಲಿ KJVಯು ಮುದ್ರಿಸಲ್ಪಟ್ಟ ಕಾಲದಿಂದ ಇಲ್ಲಿಯ ತನಕ ಅರ್ಥವನ್ನು ಬದಲಾಯಿಸಿಕೊಂಡಿರುತ್ತದೆ. ಆ ಕಾಲದಲ್ಲಿ, "ಪ್ರಚೋದಿಸು" ಎಂಬುದರ ಅರ್ಥವು "ಕ್ರಿಯೆ ಮಾಡುವಂತೆ ಉತ್ತೇಜಿಸು" ಎಂದಾಗಿರುತ್ತಿತ್ತು (Reese, 179, n. 45.) [56]Bruce, 253. [57]Wuest, 182. William Manson ಹೇಳಿದ್ದೇನೆಂದರೆ ಇಬ್ರಿಯರಿಗೆ ಪತ್ರಿಕೆಯ ಲೇಖಕನು "ಯೆಹೂದಿ ಸಭಾಮಂದಿರಕ್ಕೆ ಇರುವ ಕ್ರೈಸ್ತೀಯ ಅನುಬಂಧವನ್ನು" ಕುರಿತು ಮಾತಾಡುತ್ತಿದ್ದಾನೆ, ಆದರೆ ಸೇರಿಸಿ ಹೇಳಿದ್ದೇನೆಂದರೆ, "ಈ ಪದದ ಸರಳ ಅರ್ಥವು ಕೂಟ" ಎಂದಾಗಿರುತ್ತದೆ ಮತ್ತು "ನಾವು ನಮ್ಮ ಕಲ್ಪನೆಯನ್ನು ಇಷ್ಟೊಂದು ಅತೀರೇಕಕ್ಕೆ ಒಯ್ಯುವದನ್ನು ಲೇಖಕನ ಭಾಷೆಯಲ್ಲಿರುವ ಯಾವದೂ ಸಮರ್ಥನೆ ಮಾಡುವದಿಲ್ಲ" (William Manson, *The Epistle to the Hebrews* [London: Hodder and Stoughton, 1951], 69). [58]ಹೊಸ ಒಡಂಬಡಿಕೆಯಲ್ಲಿ ಬೇರೆ ಇನ್ನೊಂದು ಸಾರಿ ಮಾತ್ರವೇ 2 ಥೆಸಲೋನಿಕ 2:1ರಲ್ಲಿ ಕಾಣಿಸಿಕೊಳ್ಳುತ್ತದೆ, ಅದು ಕರ್ತನ ಬರೋಣದ ಮತ್ತು "ನಾವು ಆತನ ಬಳಿಯಲ್ಲಿ ಕೂಡಿಕೊಳ್ಳುವ" ವಿಷಯವಾಗಿ ಹೇಳುವ ಸಂದರ್ಭದಲ್ಲಾಗಿದೆ. ಇದು "ಸಭಾಮಂದಿರ" ಎಂಬ ಅರ್ಥವು ಬಂದ ರೀತಿಯಲ್ಲಿ ಅದಕ್ಕೆ ಒಂದು ವಾಸ್ತವವಾದ ಕೂಟದ ಸ್ಥಳದ ಅಗತ್ಯವಿರುವದಿಲ್ಲ. [59]Stuart, 469. [60]Lightfoot, *Everyone's Guide to Hebrews*, 142. ಕನಿಷ್ಠ, ಈ ವಿಧವಾದ ಪಾಪವು ವಾಕ್ಯಭಾಗದಲ್ಲಿ "ಎಲ್ಲಾ ಒತ್ತನ್ನು ಪಡೆದುಕೊಳ್ಳುತ್ತದೆ." (Simon J. Kistemaker, *Exposition of the Epistle to the Hebrews*, New Testament Commentary [Grand Rapids, Mich.: Baker Book House, 1984], 293).

[61]10:26ರಲ್ಲಿನ "ಪರಿಜ್ಞಾನ" ಎಂಬುದು ಒಂದು ವೈಯಕ್ತಿಕ ಮತ್ತು ನಿಕಟವಾದ ಜ್ಞಾನವನ್ನು ಸೂಚಿಸುತ್ತದೆ. (Franz Delitzsch, *Commentary on the Epistle to the Hebrews,* trans. Thomas L. Kingsbury [Edinburgh: T. & T. Clark, 1868; reprint, Minneapolis: Klock & Klock Christian Publishers, 1978], 2:184-85.) ಇದರರ್ಥವು "*ಗುರುತಿಸುವಿಕೆ, ಒಪ್ಪಿಕೊಳ್ಳುವಿಕೆ*" ಎಂದಾಗಿರುತ್ತದೆ (Kistemaker, 297). ಚರ್ಚೆಯಲ್ಲಿರುವ ವ್ಯಕ್ತಿಗಳು ನಿಜವಾಗಿಯೂ ಪರಿವರ್ತನೆಗೊಂಡವರಾಗಿದ್ದರೆಂಬುದನ್ನು ಒತ್ತಿ ಹೇಳುತ್ತದೆ. [62]Guthrie, 217. "ಪರಿಜ್ಞಾನ" ಎಂಬ ಪದವು ಇಲ್ಲಿ ἐπίγνωσις (*epignōsis*), ಇದು ಈ ಪತ್ರಿಕೆಯೊಳಗೆ ಇಲ್ಲಿ ಮಾತ್ರವೇ ಬಳಸಲ್ಪಟ್ಟಿದೆ. [63]Draper, 277. [64]Kistemakerನು ಹೇಳಿದ್ದೇನೆಂದರೆ, "ಯೇಸು ಯಾವದನ್ನು ಪವಿತ್ರಾತ್ಮನಿಗೆ ವಿರುದ್ಧದ ಪಾಪವೆಂದು ಹೇಳಿದನೋ ಅದೇ ಪಾಪದ ಕಡೆಗೆ ಈತನು ಬೆರಳ ತೋರಿಸುತ್ತಾನೆ (ಮತ್ತಾಯ 12:32; ಮಾರ್ಕ 3:29)." [65]ISVಯು ಇದನ್ನು "ಪಾಪವನ್ನು ಮಾಡುತ್ತಲೇ ಇರುವದನ್ನು ಆರಿಸಿಕೊಂಡನು" ಎಂದು ಹೇಳುತ್ತದೆ, ಮತ್ತು ಹೊಸದಾದ English Standard Versionನಲ್ಲಿ "ಬೇಕೆಂದೇ ಪಾಪ ಮಾಡುತ್ತಲೇ ಇರುವದು" ಎಂದು ಇರುತ್ತದೆ. [66]R. C. H. Lenski, *The Interpretation of the Epistle to the Hebrews and of the Epistle of James* (Columbus, Ohio: Wartburg Press, 1946), 359-60. ಈ ಮಾತು ಗ್ರೀಕ್‌ನಲ್ಲಿ ಐದು ಸಾರಿ ಸಿಕ್ಕುತ್ತದೆ: ಮತ್ತಾಯ 5:13; 7:6; ಲೂಕ 8:5; 12:1; ಇಬ್ರಿಯ 10:29. ಹಳೆಯ ಒಡಂಬಡಿಕೆಯೊಳಗೆ 2 ಅರಸು 9:33; ಯೆಶಾಯ 26:6; ದಾನಿಯೇಲ 8:10; ಮೀಕನು 7:10; ಮತ್ತು ಮಲಾಕಿ 4:3ರಲ್ಲಿ ವಿವಿಧ ರೂಪಗಳು ಸಿಕ್ಕುತ್ತವೆ. [67]Guthrie, 219. [68]Hughes, 424. [69]ಪವಿತ್ರಗೊಳಿಸಲ್ಪಡಬೇಕಾದವನು ಮತಭ್ರಷ್ಟನೇ ಆಗಿರುವನು. ಯೇಸು ಎಂದಿಗೂ ಪಾಪ ಮಾಡಲಿಲ್ಲವಾದ್ದರಿಂದ, ಆತನಿಗೆ ಹೇಗೆ ಶುದ್ಧೀಕರಣದ ಅಗತ್ಯವ ಬೀಳುವದು? ಆತನು ತನ್ನ ಸೇವೆಗೆ ಪ್ರತ್ಯೇಕಿಸಲ್ಪಟ್ಟನೆಂಬ ಅರ್ಥದಲ್ಲಿ "ಶುದ್ಧೀಕರಿಸಲ್ಪಟ್ಟನು" (ಯೋಹಾನ 17:19), ಆದರೆ ಆತನಿಗೆ ತನ್ನ ಸ್ವಂತ ರಕ್ತದಿಂದ ಶುದ್ಧೀಕರಿಸಲ್ಪಡುವ ಯಾವದೇ ಅಗತ್ಯತೆಯಿರಲಿಲ್ಲ. (Reese, 184, n. 70.) [70]Hughes, 423.

[71]ಅಂಥ ಪದರಚನೆಯು NEB, ESV, ಮತ್ತು JB ಯಲ್ಲಿ ಸಿಕ್ಕುತ್ತವೆ. McCordದಲ್ಲಿ "ಕೃಪೆಯ ಆತ್ಮನನ್ನು ಅಪಹಾಸ್ಯ ಮಾಡಿದ್ದಾನೆ" ಎಂದಿದೆ; ἐνυβρίζω (*enubrizō*) ಎಂಬ ಪದವು ಹೊಸ ಒಡಂಬಡಿಕೆಯೊಳಗೆ ಬೇರೆ ಎಲ್ಲಿಯೂ ಬಳಸಲ್ಪಟ್ಟಿಲ್ಲ. (Hugo McCord, *McCord's New Testament of the Everlasting Gospel* [Henderson, Tenn.: Freed-Hardeman College, 1988], 430.) [72]Lenski, 359. [73]ಈ ಪಾಪವು ಪವಿತ್ರಾತ್ಮನಿಗೆ ವಿರುದ್ಧ ಮಾಡುವ ಅದೇ ಪಾಪವಾಗಿದೆ. (Bruce, 259-60; Kistemaker, 295.) ಅವಿಶ್ವಾಸಿಗಳು ಯೇಸುವಿನ ಅದ್ಭುತಗಳನ್ನು ಸೈತಾನನ ಸಹಾಯದಿಂದ ಮಾಡಲ್ಪಟ್ಟವುಗಳೆಂದು ಹೇಳಿದಾಗ, ಯೇಸು ಅವರಿಗೆ "ಪವಿತ್ರಾತ್ಮನ ದೂಷಣೆ" ಮಾಡಬೇಡಿರೆಂದು ಎಚ್ಚರಿಸಿದನು. ಪವಿತ್ರಾತ್ಮನು ದೇವರ ಅಂತಿಮವಾದ ರಕ್ಷಣೆಯ ಕೊಡುಗೆಯನ್ನು ಮುಂದಿಡುತ್ತಾನೆ; ಆತನ ಕೊಡುಗೆಯನ್ನು ಯಾವನಾದರೂ ನಿರಾಕರಿಸುವದಾದರೆ ಆತನ ಆತ್ಮಕ್ಕಾಗಿ ಯಾವದೇ ನಿರೀಕ್ಷೆಯನ್ನು ಆತನು ಹೊಂದಿರುವದಿಲ್ಲ. [74]Lightfoot, *Jesus Christ Today*, 195, n. 13; Hughes, 425, n. 22. Kistemakerನು ಇದನ್ನು ಸಭೆಯಲ್ಲಿದ್ದ ಒಂದು ವಾಡಿಕೆಯಲ್ಲಿರುವ "ನಾಣ್ಣುಡಿಯ ಹೇಳಿಕೆ" ಎಂದು ಭಾವಿಸುತ್ತಾನೆ. (Kistemaker, 296.) [75]"ಜೀವಸ್ವರೂಪನಾದ ದೇವರು" ಇಬ್ರಿಯರಿಗೆ ಪತ್ರಿಕೆಯಲ್ಲಿ ಇನ್ನು ಮೂರು ಸ್ಥಳಗಳಲ್ಲಿ ಸಿಕ್ಕುತ್ತದೆ: 3:12, 9:14, ಮತ್ತು 12:22. ಯೆಹೂದ್ಯರು ತಮ್ಮ ದೇವರು ಮಾತ್ರವೇ ಏಕೈಕ "ಜೀವಸ್ವರೂಪನಾದ ದೇವರು" ಎಂದು ಬಲ್ಲವರಾಗಿದ್ದರು. [76]Theodore H. Robinson, *The Epistle to the Hebrews* (New York:

Harper and Brothers Publishers, 1933), 151. [77]Milligan, 376-77. ಮೂಲಪ್ರತಿಯಲ್ಲಿ ಹೀಗಿರುತ್ತದೆ, ". . . ನೀತಿವಂತನು ತನ್ನ ನಂಬಿಗಸ್ತಿಕೆಯಿಂದಲೇ ಬದುಕುವನು" (Brooke Foss Westcott, *The Epistle to the Hebrews: The Greek Text with Notes and Essays* [London: Macmillan & Co., 1889; reprint, Grand Rapids, Mich.: Wm. B. Eerdmans Publishing Co., 1973], 337). [78]Ray C. Stedman, *Hebrews*, The IVP New Testament Commentary Series (Downers Grove, Ill.: InterVarsity Press, 1992), 115, n. [79]Bruce, 256. [80]Josephus *Wars* 2.19.7. ಯೆರೂಸಲೇಮಿನ ವಿರುದ್ಧ Cestiusನು ಕೈಕೊಂಡ ಆಕ್ರಮಣದ ವಿಷಯದಲ್ಲಿ Josephus ಈ ವಿವರಣೆಯನ್ನು ಕೊಡುತ್ತಾನೆ: "ಒಂದು ವೇಳೆ ಆತನು [Cestius] ಮುತ್ತಿಗೆಯನ್ನು ಇನ್ನು ಸ್ವಲ್ಪ ಕಾಲ ಮುಂದುವರೆಸಿದ್ದರೆ, [ಆತನು ಖಂಡಿತವಾಗಿಯೂ] ಪಟ್ಟಣವನ್ನು ವಶಕ್ಕೆ ತೆಗೆದುಕೊಂಡಿರುತ್ತಿದ್ದನು; ಆದರೆ ನನಗನ್ನಿಸುತ್ತದೆ, ದೇವರು ಈಗಾಗಲೇ ಪಟ್ಟಣದ ಮೇಲೆ ಮತ್ತು ಪವಿತ್ರಾಲಯದ ಮೇಲೆ ಹೊಂದಿದ್ದ ಜಿಗುಪ್ಸೆಯಿಂದಾಗಿ, ಆತನು ಅದೇ ದಿನದಲ್ಲಿ ಯುದ್ಧವನ್ನು ಒಂದು ಮುಕ್ತಾಯಕ್ಕೆ ತರುವದಕ್ಕೆ ಅಡ್ಡಿ ಪಡಿಸಲ್ಪಟ್ಟನು" (*Wars* 2.19.6).

[81]Eusebius *Ecclesiastical History* 3.5. [82]Lightfoot, *Everyone's Guide to Hebrews*, 128-29ರಿಂದ ಆಯ್ದುಕೊಳ್ಳಲ್ಪಟ್ಟಿದ್ದು. [83]Raymond Brown, *The Message of Hebrews: Christ Above All*, The Bible Speaks Today (Downers Grove, Ill.: Inter-Varsity Press, 1982), 176. [84]Guthrie, 209. [85]Westcott, 316. [86]"ಬೋಧನೆಯ ಒಂದು ಕ್ರಮಕ್ಕೆ [*tupos*] ವಿಧೇಯವಾಗುವದು" ಎಂದರೆ "ಯೇಸು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವದು" ಮತ್ತು "ಆತನ ಮರಣದಲ್ಲಿ" ದೀಕ್ಷಾಸ್ನಾನ ಮಾಡಿಸಿಕೊಳ್ಳುವದು ಆಗಿದೆ (ರೋಮಾ 6:3, 4). ನಾವು ಸುವಾರ್ತೆಗೆ ವಿಧೇಯರಾಗುವಾಗ, ನಾವು ಒಂದು ಬೋಧನೆಯ ಕ್ರಮವನ್ನು ಅನುಸರಿಸುವವರಾಗಿದ್ದೇವೆ. [87] Ἀγαπάω (*agapaō*) ಎಂಬ ಕ್ರಿಯಾಪದವು ಎರಡು ಸಾರಿ 1:9 ಮತ್ತು 12:6ರಲ್ಲಿ ಸಿಕ್ಕುತ್ತದೆ. [88]Jonathan Kozol, *Amazing Grace: The Lives of Children and the Conscience of a Nation* (New York: HarperCollins Publishers, 1995), 238. [89]ಮೊದಲನೆಯ ಕೊರಿಂಥ 12:13 ನೀರಿನ ದೀಕ್ಷಾಸ್ನಾನವನ್ನು ಸೂಚಿಸತಕ್ಕದ್ದು ಹೊರತು ಪವಿತ್ರಾತ್ಮನ ದೀಕ್ಷಾಸ್ನಾನವನ್ನಲ್ಲ. ಅದು ಎರಡನೆಯದ್ದಾಗಿದ್ದರೆ, ಆ ದಿನದಲ್ಲಿ ಪ್ರತಿಯೊಬ್ಬನು ಪವಿತ್ರಾತ್ಮನನ್ನು ಹೊಂದಿಕೊಳ್ಳುತ್ತಿದ್ದನು. ಪವಿತ್ರಾತ್ಮನ ದೀಕ್ಷಾಸ್ನಾನವು ಅಪೊಸ್ತಲರಿಗೆ ವಾಗ್ದಾನ ಮಾಡಲ್ಪಟ್ಟಿದ್ದು (ಅಪೊಸ್ತಲರ ಕೃತ್ಯಗಳು 1:6-8) ಅವರು ಮಾತ್ರವೇ ಅದನ್ನು ಸ್ವೀಕರಿಸಿಕೊಂಡರು (ಅಪೊಸ್ತಲರ ಕೃತ್ಯಗಳು 2:1-4). ಅನ್ಯಜನಾಂಗದಿಂದ ಪರಿವರ್ತನೆಗೊಂಡ ಮೊದಲಿಗರು ಒಂದು ಅಳತೆಯಲ್ಲಿ ಪವಿತ್ರಾತ್ಮನನ್ನು ಪಡೆದುಕೊಂಡರು ಮತ್ತು ಅನ್ಯಭಾಷೆಗಳಲ್ಲಿ ಮಾತಾಡಿದರು (ಅಪೊಸ್ತಲರ ಕೃತ್ಯಗಳು 10:43-47; 11:15, 16), ಆದರೆ ಅವರು ಒಬ್ಬ ಅಪೊಸ್ತಲನು ಮಾಡುವಂಥ ಸೂಚಕಕಾರ್ಯಗಳನ್ನು ಮಾಡುವದಕ್ಕೆ ಶಕ್ತಿಯನ್ನು ಪಡೆದುಕೊಳ್ಳಲಿಲ್ಲ (ನೋಡಿರಿ 2 ಕೊರಿಂಥ 12:12). ಕೊರ್ನೇಲ್ಯನು ಮತ್ತು ಆತನ ಮನೆಯವರು ಸ್ವೀಕರಿಸಿದ "ದೀಕ್ಷಾಸ್ನಾನ" ವು ಪ್ರತಿಯೊಬ್ಬರೂ "ಪವಿತ್ರಾತ್ಮನ ದೀಕ್ಷಾಸ್ನಾನ" ವನ್ನು ಪಡೆದುಕೊಳ್ಳಲಿದ್ದರೆಂಬುದನ್ನು ಸೂಚಿಸುವದಿಲ್ಲ. ದೇವರು ಅನ್ಯಜನರನ್ನು ಅಂಗೀಕರಿಸಿಕೊಂಡಿದ್ದಾನೆಂದು ಯೆಹೂದ್ಯರಿಗೆ ಮನವರಿಕೆ ಮಾಡಿಕೊಡುವದಕ್ಕೆ ಈ ಅದ್ಭುತವು ಅಗತ್ಯವಾಗಿತ್ತು. [90]ಆಹಾಬನು ದೇವರ ನಿಜವಾದ ಪ್ರವಾದಿಗಳ ಬಾಯಿಂದ ಬಂದ ಎಲ್ಲಾ ವಿಧವಾದ ಸತ್ಯವನ್ನು ತಿರಸ್ಕರಿಸಿದ್ದರಿಂದಾಗಿ ಆತನು ಸುಳ್ಳನ್ನು ನಂಬುವಂತೆ ದೇವರು ಅನುಮತಿಸಿದನಾದರೂ (1 ಅರಸು 22:13-28), ದೇವರು ಸುಳ್ಳಾಡುವದಿಲ್ಲ (ಇಬ್ರಿಯ 6:18). ಆಹಾಬನನ ಕಥೆಯು 2 ಥೆಸಲೋನಿಕ 2:9-12ರ ಸತ್ಯವನ್ನು ಶಕ್ತಿಯುತವಾಗಿ ದೃಷ್ಟಾಂತಪಡಿಸುತ್ತದೆ – ಏನೆಂದರೆ ಸತ್ಯವನ್ನು ಪ್ರೀತಿಸದವರು ಭ್ರಮೆಹುಟ್ಟಿಸುವ ಸುಳ್ಳನ್ನು ನಂಬುವಂತೆ ದೇವರು ಅನುಮತಿಸುವನು ಎಂಬದೆ.

[91]Allen, 114-15. [92]Long, 110ರಿಂದ ಆಯ್ದುಕೊಳ್ಳಲ್ಪಟ್ಟಿದ್ದು. [93]Martin Luther, "A Mighty Fortress," *Songs of Faith and Praise*, comp. and ed. Alton H. Howard (West Monroe, La.: Howard Publishers, 1994).